16 September 2026 Wednesday

SINCE 1957 ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 271 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

**ಭಾವನಾಂತರಂಗ**

ಬದಲಾದ ಭಾವನೆಗಳಿಗೆ ಮನಸ್ಸು ಬೇಗ ಒಪ್ಪಿಕೊಂಡಂತೆ, ನಮ್ಮ ಅಂತರಂಗ ಒಪ್ಪಿಕೊಳ್ಳುವುದಿಲ್ಲ!

-ಸ್ನೇಹಾ ಆನಂದ್


ಮೈಸೂರಲ್ಲಿ ತಲೆ ಎತ್ತಿವೆ ನಾನಾ ಗಣೇಶ ಮೂರ್ತಿ ಪ್ರತಿಷ್ಠಾಪನೆ — ಪುಟ ಸಂ. 2


ನಾಗರಿಕರು ತಮ್ಮ ಹಕ್ಕುಗಳನ್ನು ಚಲಾಯಿಸಿ: ಶಾಸಕ — ಪುಟ ಸಂ. 3


ಅರಣ್ಯ ಇಲಾಖೆ ನಿರ್ಲಕ್ಷ್ಯದಿಂದ ರೈತರ ಸಾವು: ಆರೋಪ — ಪುಟ ಸಂ. 4

## ಗ್ಯಾರಂಟಿಗೆ ಎಸ್ಸಿ–ಎಸ್ಟಿ ಹಣ ಬಳಕೆ

**ಕೇಂದ್ರವೂ ಎಸ್‌ಸಿಪಿ–ಟಿಎಸ್‌ಪಿ ಜಾರಿ ಮಾಡಲಿ: ಸಿಎಂ ಡಿ.ಕೆ.ಶಿವಕುಮಾರ್**



**ಬೆಂಗಳೂರು:** ದಲಿತರಿಗೆ ಮೀಸಲಿಟ್ಟ (ಎಸ್‌ಸಿಪಿ–ಟಿಎಸ್‌ಪಿ) ಹಣವನ್ನು ಗ್ಯಾರಂಟಿ ಯೋಜನೆ ಸೇರಿದಂತೆ ವಿವಿಧ ಯೋಜನೆಗಳಿಗೆ ಬಳಕೆ ಮಾಡಿಕೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮೊದಲ ಬಾರಿಗೆ ಬಹಿರಂಗಪಡಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಂಗಳವಾರ ಆಯೋಜಿಸಿದ್ದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯಲ್ಲಿ ಮಾತಾಡಿದ ಅವರು, ಸಮಾಜ ಕಲ್ಯಾಣ ಇಲಾಖೆ ಹಣವನ್ನು ಬೇರೆ ಇಲಾಖೆ, ಇತರ ಯೋಜನೆಗಳಿಗೆ ಬಳಕೆ ಮಾಡಿದ್ದೇವೆ ಎಂದು ಸಿಎಂ ಒಪ್ಪಿಕೊಂಡರು.

ಕೇಂದ್ರ ಸರ್ಕಾರದ ವಿರುದ್ಧ ಆರೋಪ ಮಾಡಿದ ಅವರು, ಕೇಂದ್ರ ಸರ್ಕಾರ ಸಹ ನಾವು ಮಾಡಿದಂತೆ ಕಾಯ್ದೆ ಪುಟ 2ಕ್ಕೆ

## ನಾಯಕನಿಗೆ ಅಡಿಗಡಿಗೂ ಅಡಚಣೆ

**ಬೆಂಗಳೂರು:** ನಾಯಕನಾದವನಿಗೆ ಅಡಿಗಡಿಗೂ ಅಡಚಣೆ ಜಾಸ್ತಿ. ನಾನು ಅನೇಕ ಅಡಚಣೆ ಎದುರಿಸಿ ಈಗ ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತಿದ್ದೇನೆ. ಯುವಕರು ನಾಯಕರಾಗಲು ಮುಂದೆ ಬರಬೇಕು. ನಾಯಕನಾದವನು ನಾಯಕರನ್ನು ಸೃಷ್ಟಿಸಬೇಕು ಎಂದು ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಪುಟ 2ಕ್ಕೆ

## ಅಭ್ಯುದಯ ಸಂಘಕ್ಕೆ ನಾರಾಯಣ್ ನೇಮಕ

**ಮೈಸೂರು:** ಮೈಸೂರು ಜಿಲ್ಲಾ ಪತ್ರಕರ್ತರ ಅಭ್ಯುದಯ ಸಹಕಾರ ಸಂಘದನೂತನ ನಿರ್ದೇಶಕರಾಗಿ ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಪ್ರತಿನಿಧಿ ಪತ್ರಿಕೆ ಸಂಪಾದಕ ಧರ್ಮಾಪುರ ನಾರಾಯಣ್ ಅವರನ್ನು ನೇಮಕ ಮಾಡಲಾಗಿದೆ ಎಂದು ಸಂಘದ ಅಧ್ಯಕ್ಷ ಕೆ.ದೀಪಕ್ ತಿಳಿಸಿದ್ದಾರೆ.



# ವಿಜಯದಶಮಿಗೆ ‘ಯುದ್ಧ ಶುರು’!

## ರಾಜ್ಯ ಸರ್ಕಾರದ ವಿರುದ್ಧ ಕೇಂದ್ರ ಸಚಿವ ಕುಮಾರಸ್ವಾಮಿ ವಾಗ್ದಾಳಿ

**ಹಾಸನ:** ಯುದ್ಧಕ್ಕೆ ವಿಜಯದಶಮಿ ಒಳ್ಳೆ ಕಾಲ. ಆದ್ದರಿಂದ ಈಗಲೇ ಯುದ್ಧ ಪ್ರಾರಂಭ ಮಾಡುತ್ತೇನೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ನನ್ನ ಹೇಳಿಕೆ ಬಗ್ಗೆ ಎಲ್ಲರೂ ತಲೆಕೆಡಿಸಿಕೊಂಡಿದ್ದಾರೆ. ಯಾವಾಗ ಬರ್ತಾನೆ? ಏನಿರಬಹುದು ಎಂದು ರಾತ್ರಿ ನಿದ್ರೆಯಲ್ಲೂ ಕೂಡ ಕನವರಿಸಿದ್ದಾರೆ. ನಾನು ಮಾಧ್ಯಮ ಸ್ನೇಹಿತರಿಗೆ ನಿರಾಸೆ ಮಾಡಲ್ಲ. ನಿಮಗೆ ಒಳ್ಳೆಯ ಆಹಾರವನ್ನೇ ಕೊಡುತ್ತೇನೆ ಎಂದರು.

ಇಡೀ ದೇಶವೇ ಅಲ್ಲೋಲ ಕಲ್ಲೋಲ ಆಗುವ ಸುದ್ದಿ ಕೊಡುತ್ತೇನೆ ಎಂದು ಹೇಳಿ ಅಮೆರಿಕ್ಕೆ ಹೋಗಿದ್ದ ಕುಮಾರಸ್ವಾಮಿ ವಾಪಸ್ ಆಗಮಿಸಿದ ನಂತರ ಮತ್ತೇ ಸರ್ಕಾರದ ವಿರುದ್ಧ ಹರಿಹಾಯ್ದರು. ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ, ಅವ್ಯವಹಾರದ ಬಗ್ಗೆ ಜನರ ಮುಂದೆ ಇಡುವುದರಲ್ಲಿ ಯಾವುದೇ ರಾಜಿಯಿಲ್ಲ. ರಾಜ್ಯದಲ್ಲಿನ ಘಟನೆ ಬಗ್ಗೆ ಬಾಯಿ ಮುಚ್ಚಿಕೊಂಡಿರಲು ಆಗಲ್ಲ. ಈಗಿರುವ ಸರ್ಕಾರದ ಮಂತ್ರಿಗಳ ಅಡಿಯೇ ಕೆಪಿಎಸ್‌ಸಿ, ಎಇಇ ಹಗರಣಗಳು ನಡೆದಿವೆ. ಲಕ್ಷಾಂತರ ಯುವಕರ ಭಾವನೆಗಳನ್ನು ಮಾರಾಟಕ್ಕಿಟ್ಟು ವಸೂಲಿ ಮಾಡಲಾಗಿದೆ. ಅಕ್ರಮಗಳನ್ನ ಜನರ ಮುಂದಿಡುವುದು ನನ್ನ ಜವಾಬ್ದಾರಿ. ತೀರ್ಮಾನ ಜನರದ್ದು ಎಂದು ಹೇಳಿದರು.

ನಾನು ಯಾವುದೇ ದಾಖಲೆ ಇಲ್ಲದೇ ಯಾರ ಬಗ್ಗೆಯೂ ಮಾತನಾಡಲು ಹೋಗುವುದಿಲ್ಲ. ಅಮೆರಿಕಗೆ ಹೋಗುವ ಪುಟ 2ಕ್ಕೆ





### ಸದ್ಯವೇ ಅಲ್ಲೋಲ–ಕಲ್ಲೋಲ

ರಾಜ್ಯ ರಾಜಕೀಯದಲ್ಲಿ ಅಲ್ಲೋಕ ಕಲ್ಲೋಲ ಆಗುವ ವಿಷಯ ಸದ್ಯದಲ್ಲೇ ಬರಲಿದೆ. ಆ ಪೆನ್ ಡ್ರೈವ್ ನಲ್ಲಿ ಇರುವುದೇ ಡಿ.ಕೆ.ಶಿವಕುಮಾರ್ ಹೆಸರು. ದೇವೇಗೌಡರ ಕುಟುಂಬವನ್ನು ಮುಗಿಸುತ್ತೇನೆ ಎಂದು ಹೇಳಿಕೊಂಡು ಪುಟ 2ಕ್ಕೆ

## ಪ್ರಜ್ವಲ್ ಮುಗಿಸಲು ಸಂಚು

**ಕುಮಾರಸ್ವಾಮಿಗೆ ಮಗನ ಪ್ರತಿಷ್ಠಾಪನೆ ಆಸೆ: ಸಚಿವ ಬಾಲಕೃಷ್ಣ ವಾಗ್ದಾಳಿ**



**ರಾಮನಗರ:** ನೈಸ್ ಮತ್ತು ಕೆಪಿಎಸ್‌ಸಿ ಅಕ್ರಮಗಳನ್ನು ಮುಚ್ಚಿಹಾಕಲು ಪ್ರಜ್ವಲ್ ರೇವಣ್ಣ ಪ್ರಕರಣವನ್ನು ಮುನ್ನೆಲೆಗೆ ತರಲಾಗುತ್ತಿದೆ ಎಂಬ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಸಚಿವ ಎಚ್.ಸಿ. ಬಾಲಕೃಷ್ಣ ತಿರುಗೇಟು ನೀಡಿದರು.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪ್ರಜ್ವಲ್ ಪ್ರಕರಣಕ್ಕೂ, ನೈಸ್–ಕೆಪಿಎಸ್‌ಸಿಗೂ ಏನು ಸಂಬಂಧ? ಪ್ರಜ್ವಲ್ ರೇವಣ್ಣ ವಿಚಾರ ಥೂ ಅಸಹ್ಯ. ಹೀಗೆ ಪದೇ ಪದೇ ಮಾತನಾಡಿಯೇ ಪ್ರಜ್ವಲ್‌ನನ್ನು ಜೈಲಿಗೆ ಕಳುಹಿಸಿದರು. ಪ್ರಜ್ವಲ್ ಜೈಲಲ್ಲೇ ಇರಬೇಕು. ಅವರನ್ನು ರಾಜಕೀಯವಾಗಿ ಮುಗಿಸಿ ತಮ್ಮ ಮಗನನ್ನು ಪ್ರತಿಷ್ಠಾಪನೆ ಮಾಡಬೇಕು ಎನ್ನುವುದೇ ಕುಮಾರಸ್ವಾಮಿ ಅವರ ಅಸಲಿ ಅಭಿಲಾಷೆ ಎಂದು ಬಾಲಕೃಷ್ಣ ವಾಗ್ದಾಳಿ ನಡೆಸಿದರು.

ಕುಮಾರಸ್ವಾಮಿ ತಾನು ಕೇಂದ್ರ ಮಂತ್ರಿ ಎನ್ನುವುದನ್ನು ಮರೆತು ಗ್ರಾಮ ಪಂಚಾಯಿತಿ ಸದಸ್ಯರಂತೆ ವರ್ತಿಸುತ್ತಿದ್ದಾರೆ. ಪ್ರಜ್ವಲ್ ಬಳಿ ಮೊಬೈಲ್ ಹೇಗೆ ಬಂತು ಎಂದು ಅನುಮಾನವಿದ್ದರೆ ಸಿಬಿಐ ತನಿಖೆಗೆ ಪತ್ರ ಬರೆಯಲಿ ಎಂದು ಸವಾಲು ಹಾಕಿದರು. ಪುಟ 2ಕ್ಕೆ

### ನೀವು ಸಂಚು ಮಾಡಿದರೆ ನಾವೂ ಅದನ್ನೇ ಮಾಡ್ತೇವೆ

ದೇವೇಗೌಡರ ಕುಟುಂಬವನ್ನು ಮುಗಿಸಲು ಸಂಚು ರೂಪಿಸಲಾಗಿದೆ ಎಂಬ ಆರೋಪಕ್ಕೆ ತಿರುಗೇಟು ನೀಡಿದ ಸಚಿವ ಎಚ್.ಸಿ. ಬಾಲಕೃಷ್ಣ ಅವರು, ಯಾರೂ ಯಾರನ್ನೂ ಮುಗಿಸಲು ಸಾಧ್ಯವಿಲ್ಲ. ನಮ್ಮನ್ನು ಮುಗಿಸಲು ಅವರು ನೋಡಿದರೆ, ನಾವು ಅದನ್ನೇ ಮಾಡುತ್ತೇವೆ ಎಂದು ತಿರುಗೇಟು ನೀಡಿದರು.ಇದು ರಾಜಕಾರಣ. ದೇವೇಗೌಡರು, ಕುಮಾರಸ್ವಾಮಿ ಎಂದರೆ ಒಕ್ಕಲಿಗರು ಎದ್ದು ನಿಲ್ಲುತ್ತಾರೆ ಎನ್ನುವ ಸೆಂಟಿಮೆಂಟ್ ರಾಜಕಾರಣ ಬಿಡಲಿ. ಕೇಂದ್ರ ಮಂತ್ರಿಯಾಗಿದ್ದಾರೆ. ರಾಜ್ಯಕ್ಕೆ ಉದ್ಯೋಗಗಳನ್ನು ತರಲಿ ನಮ್ಮ ಸರ್ಕಾರ ಜಾಗ ನೀಡಲು ಸಿದ್ಧವಿದೆ ಎಂದರು.

## ಭೀಕರ ಅಪಘಾತ: ಮೂವರು ಸಾವು

**ಮಂಡ್ಯ:** ಬೈಕ್‌ಗೆ ಹಾಲಿನ ಟ್ಯಾಂಕರ್ ಡಿಕ್ಕಿಯಾದ ಪರಿಣಾಮ ಒಂದೇ ಕುಟುಂಬದ ಮೂವರು ಸ್ಥಳದಲ್ಲೇ ದಾರುಣವಾಗಿ ಸಾವನ್ನಪ್ಪಿದ ಘಟನೆ ಮದ್ದೂರು ತಾಲ್ಲೂಕಿನ ಕೊಪ್ಪ ಗ್ರಾಮದ ಬಳಿ ನಡೆದಿದೆ.

ಬೆಂಗಳೂರಿನಿಂದ ಗಣೇಶ ಹಬ್ಬಕ್ಕೆ ಸ್ವಗ್ರಾಮಕ್ಕೆ ಬಂದಿದ್ದ ಮೂವರು ವಾಪಸ್ ಬೆಂಗಳೂರಿಗೆ ಹೋಗುವಾಗ ಕೊಪ್ಪ ಗ್ರಾಮದ ಬಳಿ ಅಪಘಾತ ಸಂಭವಿಸಿದೆ. ಕೊಪ್ಪ ನಿವಾಸಿಗಳಾದ ಮುತ್ತುರಾಜ್ (35), ಪತ್ನಿ ಕಾವ್ಯ (30) ಮತ್ತು ಪುತ್ರಿ ಕೀರ್ತನಾ (8) ಸಾವನ್ನಪ್ಪಿದವರು. ಗಣೇಶ ಚತುರ್ಥಿ ಹಬ್ಬದ ಹಿನ್ನೆಲೆಯಲ್ಲಿ ಸ್ವಗ್ರಾಮಕ್ಕೆ ಬಂದಿದ್ದರು. ಹಬ್ಬ ಮುಗಿಸಿ ಮರಳಿ ಬೆಂಗಳೂರಿಗೆ ಹೊರಟಿದ್ದಾಗ ಮಂಗಳವಾರ ಮುಂಜಾನೆ ಕೊಪ್ಪ ಪುಟ 2ಕ್ಕೆ



## ಒಂದೇ ಕುಟುಂಬದ ನಾಲ್ವರು ಸಜೀವದಹನ

**ಬೆಳಗಾವಿ:** ನಗರದ ಮಾರ್ಕೆಟ್ ಪೊಲೀಸ್ ಠಾಣಾ ವ್ಯಾಪ್ತಿಯ ಚಾವ್ಹಾಟ್ ಗಲ್ಲಿಯಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಸಂಭವಿಸಿದ ಭೀಕರ ಅಗ್ನಿ ಅವಘಡದಲ್ಲಿ ಒಂದೇ ಕುಟುಂಬದ ನಾಲ್ವರು ಸಜೀವ ದಹನವಾಗಿದ್ದಾರೆ. ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.





ಗಣೇಶ ಹಬ್ಬದ ಸಂಭ್ರಮದಲ್ಲಿದ್ದ ಕುಟುಂಬದಲ್ಲಿ ಸೋಮವಾರ ತಡರಾತ್ರಿ ಅತ್ಯಂತ ಹೃದಯವಿದ್ರಾವಕ ಘಟನೆ ನಡೆದಿದೆ. ಮನೆಯಲ್ಲಿ ಎಲ್ಲರೂ ನಿದ್ರಿಸುತ್ತಿದ್ದ ವೇಳೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಉಂಟಾಗಿ ಕ್ಷಣಾರ್ಧದಲ್ಲಿ ಬೆಂಕಿ ಇಡೀ ಮನೆಗೆ ಆವರಿಸಿದೆ. ಮನೆಯಲ್ಲಿದ್ದವರು ಹೊರಬರಲಾರದೆ ಬೆಂಕಿಯ ಕೆನ್ನಾಲಿಗೆಗೆ ಸಿಲುಕಿ ಪ್ರಾಣಬಿಟ್ಟಿದ್ದಾರೆ.

ಗಜಾನನ ರಾಜಾರಾಮ ದಮೋಣೆ (65), ಶಾರದಾ ದಮೋಣೆ (45), ಭಾರತಿ ರಾಜಾರಾಮ ದಮೋಣೆ (50), ರೋಷನ್ ಗಜಾನನ ದಮೋಣೆ (21) ಮೃತಪಟ್ಟಿದ್ದಾರೆ. ಪ್ರಿಯಾ ಗಜಾನನ ದಮೋಣೆ (28) ಹಾಗೂ ಗಂಗಾ ಗಜಾನನ ದಮೋಣೆ (25) ತೀವ್ರ ಸುಟ್ಟ ಗಾಯಗಳಾಗಿವೆ. ಇಬ್ಬರ ಸ್ಥಿತಿಯೂ ಗಂಭೀರವಾಗಿದೆ.



## ಮಾಡಬಾರದ್ದು ಏನೂ ಮಾಡಿಲ್ಲ: ಪಿಎಸ್‌ಐ ಪರ ಸಿಎಂ ಬ್ಯಾಟಿಂಗ್

**ಬೆಂಗಳೂರು:** ತಿ.ನರಸೀಪುರ ಠಾಣೆ ಇನ್‌ಸ್ಪೆಕ್ಟರ್ ಮಾಡಬಾರದ್ದು ಏನೂ ಮಾಡಿಲ್ಲ. ಪೊಲೀಸರ ಲಾಂಗ್ವೇಜ್‌ನಲ್ಲಿ ಹೇಳಿದ್ದಾರೆ ಅಷ್ಟೇ ಎಂದು ಹೇಳುವ ಮೂಲಕ ಸಿಎಂ ಡಿಕೆ ಶಿವಕುಮಾರ್ ಪಿಎಸ್‌ಐ ಪರ ಬ್ಯಾಟಿಂಗ್ ಮಾಡಿದ್ದಾರೆ.

ಟಿ. ನರಸೀಪುರದಲ್ಲಿ ಗಣೇಶ ಮೆರವಣಿಗೆ ವಿಚಾರವಾಗಿ ಜನರಿಗೆ ವಾರ್ನಿಂಗ್ ನೀಡಿದ್ದ ಇನ್‌ಸ್ಪೆಕ್ಟರ್ ಧನಂಜಯ್ ವಿರುದ್ಧ ಕ್ರಮಕ್ಕೆ ಬಿಜೆಪಿ ಒತ್ತಾಯದ ವಿಚಾರವಾಗಿ ಅವರು ಪ್ರತಿಕ್ರಿಯಿಸಿದರು.

ಅಶೋಕ್ ಜವಾಬ್ದಾರಿಯುತ ವಿಪಕ್ಷ ನಾಯಕ. ಅವರಿಂದ ತುಂಬಾ ಎತ್ತರದ ನಿರೀಕ್ಷೆ ಮಾಡಿದ್ದೆ. ಗ್ರಾಮ ಪಂಚಾಯತ್ ಲೆವೆಲ್‌ನಲ್ಲಿ ಮಾಡುವ ಹೋರಾಟಕ್ಕೆ ಹೋಗಿದ್ದಾರೆ ಎಂದು ಡಿ.ಕೆ. ಶಿವಕುಮಾರ್ ವ್ಯಂಗ್ಯವಾಡಿದರು.

ನೈಸ್ ಹಾಗೂ ಬಿಡದಿ ಭೂ ಹಗರಣಗಳಿಗೆ ಸಂಬಂಧಿಸಿದಂತೆ ಶೀಘ್ರದಲ್ಲೇ ಕಾಂಗ್ರೆಸ್ ಸರ್ಕಾರದ ವಿರುದ್ಧ ಹಗರಣಗಳ ದಾಖಲೆಗಳನ್ನು ಜನರ ಮುಂದೆ ತರುವುದಾಗಿ ಹೇಳಿದ ಕುಮಾರಸ್ವಾಮಿ ಬಗ್ಗೆ ಪ್ರತಿಕ್ರಿಯಿಸಿ, ಯಾರು ಪುಟ 2ಕ್ಕೆ



## ಗಜಪಡೆಗೆ ವಿಶೇಷ ಪೂಜೆ

**ಮೈಸೂರು:** ಜಂಬೂಸವಾರಿ ಮೆರವಣಿಗೆಯಲ್ಲಿ ಭಾಗವಹಿಸಲು ಆಗಮಿಸಿರುವ 12 ದಸರಾ ಆನೆಗಳಿಗೆ ಅರಮನೆ ಮುಂಭಾಗದಲ್ಲಿ ಗಣೇಶ ಹಬ್ಬದ ಅಂಗವಾಗಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಗಣೇಶನ ನೈಜ ಸ್ವರೂಪಿಯಾದ ಗಜಪಡೆಗಳಿಗೆ ಗೌರಿ ಗಣೇಶ ಹಬ್ಬದ ಪ್ರಯುಕ್ತ ಎಲ್ಲಾ 12 ಆನೆಗಳ ಪಾದ ತೊಳೆದು, ಅರಿಶಿನ ಕುಂಕುಮ ಇಟ್ಟು ವಿಶೇಷವಾಗಿ 21 ಬಗೆಯ ಸಿಹಿ ತಿಂಡಿಗಳನ್ನ ಇಟ್ಟು ಪೂಜೆ ಸಲ್ಲಿಸಲಾಯಿತು. ಅಧಿಕಾರಿಗಳ ತಂಡ, ಅರಣ್ಯ ಅಧಿಕಾರಿಗಳು, ಅರಮನೆ ಆಡಳಿತ ಮಂಡಳಿ ಈ ವಿಶೇಷ ಪೂಜೆಯಲ್ಲಿ ಭಾಗವಹಿಸಿದ್ದರು.

ಅರಮನೆ ಮುಂಭಾಗದ ಗಜಪಡೆಯ ಶೆಡ್ ಪಕ್ಕದಲ್ಲಿರುವ ಮೈದಾನದಲ್ಲಿ ದಸರಾ ಆನೆಗಳನ್ನು ಸಾಲಾಗಿ ನಿಲ್ಲಿಸಿ ಪೂಜೆ ಸಲ್ಲಿಸಲಾಯಿತು. ಈ ವೇಳೆ ನಾಡಿನ ಜನರಿಗೆ ನೈಜ ಸ್ವರೂಪಿ ಗಣೇಶನಾದ ಗಜಪಡೆ ತನ್ನ ಸೊಂಡಿಲನ್ನು ಎತ್ತಿ ಶುಭಾಶಯ ತಿಳಿಸಿದ್ದು ವಿಶೇಷವಾಗಿತ್ತು.

ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ ಮಾತನಾಡಿ, ಈ ಬಾರಿ ನಾಡಹಬ್ಬ ದಸರಾದಲ್ಲಿ ಎರಡು ದಿನಗಳ ಕಾಲ ಕಂಬಳ ನಡೆಯಲಿದೆ. ಎರಡು ದಿನಗಳ ಕಾಲ ಹಗಲು ರಾತ್ರಿ ಸತತವಾಗಿ ಕಂಬಳ ನಡೆಯಲಿದೆ. ಒಟ್ಟು 8 ಸಾವಿರ ಜನ ಕುಳಿತು ಕಂಬಳ ವೀಕ್ಷಿಸಲು ಆಸನದ ವ್ಯವಸ್ಥೆ ಮಾಡಲಾಗಿದೆ. ಏರ್ ಶೋ ವಿಚಾರದಲ್ಲಿ ಪತ್ರ ವ್ಯವಹಾರ ಮಾಡಿದ್ದೇವೆ. ಇನ್ನೂ ಕೇಂದ್ರದಿಂದ ನಮಗೆ ಒಪ್ಪಿಗೆ ಪತ್ರವನ್ನು ಕೊಟ್ಟಿಲ್ಲ ಎಂದರು.





### ವಾರದಲ್ಲಿ ಗೋಲ್ಡ್ ಪಾಸ್

ಇನ್ನೊಂದು ವಾರದಲ್ಲಿ ದಸರಾ ಗೋಲ್ಡ್ ಕಾರ್ಡ್ ಬಿಡುಗಡೆ ಮಾಡು ತ್ತೇವೆ. ದಸರಾ ಗೋಲ್ಡ್ ಕಾರ್ಡ್ ಬೆಲೆ ಏರಿಕೆ ಮಾಡಿಲ್ಲ. ದಕ್ಷಿಣ ಭಾರತದ ಸಿಎಂಗಳು ದಸರಾಗೆ ಆಗಮಿಸುವ ವಿಚಾರದ ಬಗ್ಗೆ ಸಿಎಂ ಅಧಿಕೃತವಾಗಿ ಹೇಳಲಿದ್ದಾರೆ.

▶▶ **ಲಕ್ಷ್ಮಿಕಾಂತರೆಡ್ಡಿ** ಜಿಲ್ಲಾಧಿಕಾರಿ

## ‘ಸುಗ್ರೀವ’ ಬಲಭೀಮ

**ಮೈಸೂರು:** ಮೈಸೂರು ದಸರಾಗೆ ಎರಡನೇ ತಂಡದಲ್ಲಿ ಆಗಮಿಸಿರುವ ಆನೆಗಳಲ್ಲಿ ‘ಸುಗ್ರೀವ’ 5,850 ಕೆ.ಜಿ ತೂಗುವ ಮೂಲಕ ಗಜಪಡೆಗಳಲ್ಲಿ ಹೆಚ್ಚು ತೂಕ ಹೊಂದಿದೆ.

ಮೊದಲನೇ ತಂಡದಲ್ಲಿ ಬಂದಿದ್ದ ಶ್ರೀಕಂಠ ಆನೆಯು 5,770 ಕೆ.ಜಿ ತೂಗುವ ಮೂಲಕ ಹೆಚ್ಚು ತೂಕ ಇರುವ ಆನೆ ಎಂದು ಗುರುತಿಸಲ್ಪಟ್ಟಿದ್ದ. ಆದರೆ ಸುಗ್ರೀವ ಅದಕ್ಕಿಂತ 80 ಕೆ.ಜಿ ಹೆಚ್ಚು ತೂಗಿದ್ದಾನೆ. ಎರಡನೇ ತಂಡದಲ್ಲಿದ್ದ ಚೈತ್ರ ಆನೆ 3,295 ಕೆ.ಜಿ ಹಾಗೂ ರೂಪಾ ಆನೆ 3,260 ಕೆ.ಜಿ ತೂಗಿವೆ.



## ಸಿದ್ದು ಶಾಶ್ವತ ಸಿಎಂ



**ಮೈಸೂರು:** ನಗರದಲ್ಲಿ ಕಾಂಗ್ರೆಸ್ ಕಚೇರಿ ಕಟ್ಟಡ ಕಾಮಗಾರಿಯನ್ನು ಮಾಜಿ ಸಿಎಂ ಸಿದ್ದರಾಮಯ್ಯ ಪರಿಶೀಲಿಸಿದರು. ಈ ವೇಳೆ ಅಭಿಮಾನಿಗಳು ಸಿದ್ದರಾಮಯ್ಯ ಶಾಶ್ವತ ಮುಖ್ಯಮಂತ್ರಿ, 2028ಕ್ಕೂ ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿ ಎಂದು ಕೈಕಾರ್ಯಕರ್ತರು ಘೋಷಣೆ ಕೂಗಿದರು.

# ಹರಿಪ್ರಸಾದ್ ಕರೆಯಬೇಕಿತ್ತು: ಡಿಕೆಶಿ ಆಗಿದ್ದರೆ ಬಿಡುತ್ತಿದ್ದರೆ?

## ಡಿಕೆಶಿ ಸಿಎಂ ಆಗಿ ನೂರರ ಸಂಭ್ರಮ: ಮಾಜಿ ಸಚಿವ ಕೆ.ಎನ್.ರಾಜಣ್ಣ ಅಸಮಾಧಾನ

**ಬೆಂಗಳೂರು:** ರಾಜ್ಯ ಸರ್ಕಾರದ ನೂರು ದಿನಗಳ ಸಂಭ್ರಮಾಚರಣೆಗೆ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರಿಗೆ ಆಹ್ವಾನ ನೀಡಬೇಕಿತ್ತು. ಡಿ.ಕೆ. ಶಿವಕುಮಾರ್ ಅಧ್ಯಕ್ಷರಾಗಿದ್ದರೆ ಬಿಡುತ್ತಿದ್ದರೇ? ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಅಸಮಾಧಾನ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ಅವರೇ ಕರೆದು ಮಾತನಾಡಬೇಕಿತ್ತು. ಇಲ್ಲಿನ ಬೆಳವಣಿಗೆಗಳನ್ನು ಎಐಸಿಸಿಗೆ ತಿಳಿಸಬೇಕಾಗುತ್ತದೆ. ಕಾಲಕ್ರಮೇಣ ಎಲ್ಲವೂ ಸರಿಹೋಗಲಿದೆ ಎಂದರು.

ಅಧಿಕಾರ ಅನ್ನೋದು ವಿಷವಿದ್ದಂತೆ, ಗಿಡದ ಸುತ್ತ ಕಳೆ ಬೆಳೆದಂತೆ ಎಂದು ಸತೀಶ್ ಜಾರಕಿಹೊಳಿ ಹೇಳಿದ್ದನ್ನು ನಾನು ಸಂಪೂರ್ಣವಾಗಿ ನಂಬುತ್ತೇನೆ. ಮುಡಾ ವಿಚಾರದಲ್ಲಿ ದೂರು ಕೊಟ್ಟಿದ್ದು ಕಾಂಗ್ರೆಸ್‌ನವರೇ ಅಲ್ಲವೇ? ಕೃಷ್ಣ ಎಂಬಾತ ಸುಪ್ರೀಂ ಕೋರ್ಟ್‌ವರೆಗೆ ತಾನಾಗಿಯೇ ಹೋದನೇ? ನಮ್ಮವರೇ ಮತ್ತು ಪ್ರಬಲರ ಬೆಂಬಲವಿಲ್ಲದೆ ಹೋಗಲು ಸಾಧ್ಯವೇ? ಎಂದು ಸ್ವಪಕ್ಷದ ನಾಯಕರ ವಿರುದ್ಧವೇ ವಾಗ್ದಾಳಿ ನಡೆಸಿದರು.



### ಪರಂ–ಬಿಕೆಎಚ್ ಭೇಟಿ: ಮಹತ್ವದ ಮಾತುಕತೆ

**ಬೆಂಗಳೂರು:** ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಸ್ಥಾನ ಕೈತಪ್ಪಿದ ಬೆನ್ನಲ್ಲೇ ತೀವ್ರ ಅಸಮಾಧಾನಗೊಂಡಿರುವ ಮಾಜಿ ಸಚಿವ ಕೆ.ಎನ್.ರಾಜಣ್ಣ ಅವರು ಡಿಸಿಎಂ ಡಾ.ಜಿ.ಪರಮೇಶ್ವರ್ ಹಾಗೂ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿರುವುದು ರಾಜಕೀಯ ವಲಯದಲ್ಲಿ ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಸದಾಶಿವನಗರದ ಡಾ.ಜಿ.ಪರಮೇಶ್ವರ್ ನಿವಾಸದಲ್ಲಿ ಮಂಗಳವಾರ ಚರ್ಚೆ ನಡೆಸಿದ ಬಳಿಕ, ಬಿ.ಕೆ.ಹರಿಪ್ರಸಾದ್ ನಿವಾಸಕ್ಕೆ ತೆರಳಿ ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ರಾಜಕೀಯ ಬೆಳವಣಿಗೆಗಳ ಕುರಿತು ಸಮಾಲೋಚನೆ ನಡೆಸಿದರು.

ಭೇಟಿ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಕೆ.ಎನ್.ರಾಜಣ್ಣ, ಅಪೆಕ್ಸ್ ಬ್ಯಾಂಕ್‌ನಲ್ಲಿ ರೈತರ ನೆರವಿಗೆ ಸರ್ಕಾರದ ಸಹಕಾರ ಅತ್ಯಂತ ಮುಖ್ಯ. ಸರ್ಕಾರದ ಪರ ಇರುವವರು ಅಧಿಕಾರದಲ್ಲಿದ್ದರೆ ಅನುಕೂಲವಾಗುತ್ತದೆ ಎಂಬ ಕಾರಣಕ್ಕೆ ನಾನು ಸ್ಪರ್ಧೆಯಿಂದ ಹಿಂದೆ ಸರಿದೆ. ಸ್ಪರ್ಧೆ ಮಾಡಿದ್ದರೆ ನಾನೇ ಗೆಲ್ಲುತ್ತಿದ್ದೆ. ಸಿದ್ದರಾಮಯ್ಯ ನನ್ನ ಪರವಾಗಿ ಇದ್ದರು. ಈ ವಿಚಾರದಲ್ಲಿ ಅವರ ಮಾತು ನಡೆದಿಲ್ಲ. ರಾಜ್ಯ ನಾಯಕರಿಂದಲೋ ಅಥವಾ ಎಐಸಿಸಿ ನಾಯಕರಿಂದಲೋ ಎಲ್ಲಿ ಹಿನ್ನಡೆಯಾಯಿತೋ ಗೊತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮುಂದಿನ ಚುನಾವಣೆಯಲ್ಲಿ ಪುಟ 2ಕ್ಕೆ

## ಯುಪಿಐ ವಹಿವಾಟು: 2 ಸಾವಿರಕ್ಕೆ ಶುಲ್ಕವಿಲ್ಲ

**ನವದೆಹಲಿ:** ಡಿಜಿಟಲ್ ಪಾವತಿ ಬಳಕೆದಾರರಿಗೆ ಕೇಂದ್ರ ಸರ್ಕಾರ ಮಹತ್ವದ ಸ್ಪಷ್ಟನೆ ನೀಡಿದೆ. 2,000 ರೂ.ವರೆಗೆ ನಡೆಯುವ ಯುಪಿಐ ಅಥವಾ ರೂಪೇ ಡೆಬಿಟ್ ಕಾರ್ಡ್ ವಹಿವಾಟಿಗೆ ಯಾವುದೇ ನೇರ ಅಥವಾ ಪರೋಕ್ಷ ಶುಲ್ಕ ವಿಧಿಸುವಂತಿಲ್ಲ ಎಂದು ತಿಳಿಸಿದೆ.




ಬ್ಯಾಂಕ್‌ಗಳು ಅಥವಾ ಪಾವತಿ ವ್ಯವಸ್ಥೆ ಒದಗಿಸುವ ಸಂಸ್ಥೆಗಳು ಇಂತಹ ವಹಿವಾಟುಗಳಿಗೆ ಗ್ರಾಹಕರಿಂದ ಯಾವುದೇ ಶುಲ್ಕ ವಸೂಲಿ ಮಾಡುವಂತಿಲ್ಲ. ಕೇಂದ್ರ ಹಣಕಾಸು ಸಚಿವಾಲಯ ಪಾವತಿ ಮತ್ತು ಇತ್ಯರ್ಥ ವ್ಯವಸ್ಥೆಗಳ ಕಾಯ್ದೆ 2007ರ ತಿದ್ದುಪಡಿ ನಿಯಮಗಳ ಅಡಿಯಲ್ಲಿ ಈ ಅಧಿಸೂಚನೆ ಹೊರಡಿಸಿದೆ.

2,000 ರೂ.ವರೆಗೆ ಯುಪಿಐ ಮೂಲಕ ಹಣ ಪಾವತಿಸುವವರು ಮಾತ್ರವಲ್ಲದೆ, ಹಣ ಸ್ವೀಕರಿಸುವವರ ಮೇಲೂ ಪುಟ 2ಕ್ಕೆ

ಮೊದಲ ಪುಟದಿಂದ

## ನಾಯಕನಿಗೆ ಅಡಿಗಡಿಗೂ ಅಡಚಣೆ

ಉದ್ಘಾಟನೆ ಮಾಡಿ ಮಾತಾಡಿದರು. ಶಾಲಾ-ಕಾಲೇಜು ಚುನಾವಣೆಗಳಲ್ಲೂ ನನಗೆ ನ್ಯಾಯ ಸಿಗಲಿಲ್ಲ. ವಿದ್ಯಾರ್ಥಿ ಕಾಂಗ್ರೆಸ್ ಚುನಾವಣೆ ಟಿಕೆಟ್ ತಪ್ಪಿಸಲಾಯಿತು. ಬಳಿಕ ಪದವಿ ಓದುವಾಗ ದೇವೇಗೌಡರ ವಿರುದ್ಧ ಸ್ಪರ್ಧಿಸಿದರೂ ಆ ಚುನಾವಣೆಯಲ್ಲಿ ಸೋತೆ. ನಂತರ ವಿಧಾನಸಭೆ ಚುನಾವಣೆ ಗೆಲುವು ಕಂಡೆ. ಅಲ್ಲಿಂದ ಇಲ್ಲಿಯವರೆಗೆ ಪ್ರಯಾಣ ಬೆಳೆಸಿದ್ದೇನೆ ಎಂದು ಹೇಳಿದರು. ಯುವ ಸಂಸತ್ತು ನಿರ್ಮಾಣ ಮಾಡುವ ಆಶಯದಿಂದ ಶಾಲಾ, ಕಾಲೇಜುಗಳಲ್ಲಿ ಮಾದರಿ ಸಂಸತ್ ನಡೆಸಲಾಗುವುದು. ಇದು ಬಸವಣ್ಣನವರ ಕಾಲದ ಅನುಭವ ಮಂಟಪದ ಚಿಂತನೆಗಳನ್ನು ಒಳಗೊಂಡಿದೆ. ವಿಶ್ವಕ್ಕೆ ಮೊದಲ ಸಂಸತ್ತು ಎಂದು ಖ್ಯಾತಿ ಪಡೆದಿರುವ ಅನುಭವ ಮಂಟಪದ ತಿಳುವಳಿಕೆ ಈ ಮೂಲಕ ನೀಡಲಾಗುವುದು ಎಂದು ತಿಳಿಸಿದರು. ಪ್ರಜಾಪ್ರಭುತ್ವ ಭಾರತದ ಆತ್ಮ. ಪ್ರಜೆಗಳೇ ಇಲ್ಲಿ ಪ್ರಭುಗಳು. ಭಾರತ ವಿಶ್ವಕ್ಕೆ ಪ್ರಜಾಪ್ರಭುತ್ವದ ಮಾದರಿ ನೀಡಿದೆ. ಬಸವಣ್ಣನವರ ಅನುಭವ ಮಂಟಪದ ಇದಕ್ಕೆ ಮೂಲ ಎಂದು ಸಿಎಂ ಅಭಿಪ್ರಾಯಪಟ್ಟರು.

## ಗ್ಯಾರಂಟಿಗೆ ಎಸ್ಸಿ-ಎಸ್ಟಿ ಹಣ ಬಳಕೆ

ಮಾಡಿ ದಲಿತರಿಗೆ ಹಣ ಮೀಸಲು ಇಡಲಿ. ಸುಮ್ಮನೆ ಮಾತಾಡೋದು ಬೇಡ ಎಂದು ಕಿಡಿಕಾರಿದರು. ಜನರಿಗೆ ಸಾಮಾಜಿಕ, ಆರ್ಥಿಕ ಶಕ್ತಿ ನೀಡಲು ಐದು ಗ್ಯಾರಂಟಿ ನೀಡಿದ್ದೇವೆ. ಪ್ರತಿವರ್ಷ 52,000 ಕೋಟಿ ರೂ. ಖರ್ಚು ಮಾಡಲಾಗಿದೆ. ಅದಕ್ಕೆ ನಮ್ಮ ರಾಜಕೀಯ ಸಿದ್ಧಾಂತದ ಬದ್ಧತೆಯೇ ಕಾರಣ. ಎಸ್‌ಸಿಎಸ್‌ಪಿ- ಟಿಎಸ್‌ಪಿ ಯೋಜನೆಯನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜಾರಿಗೆ ತಂದರು. ಆದರೆ ಕೇಂದ್ರ ಸರ್ಕಾರ ಏಕೆ ಈ ಯೋಜನೆಯನ್ನು ಜಾರಿಗೆ ತರಬಾರದು. ಇದನ್ನು ಜಾರಿಗೆ ತರಲು ಬದ್ಧತೆ ಇರಬೇಕು ಎಂದು ಅಭಿಪ್ರಾಯಪಟ್ಟರು. ದೇಶದ ಜನರ ಮತದಾನ ಉಳಿಯಬೇಕು. ಜನರ ನಂಬಿಕ್ ಉಳಿಸಿಕೊಳ್ಳುವ ಕೆಲಸವನ್ನು ಕಾಂಗ್ರೆಸ್ ಪಕ್ಷ ಮಾಡುತ್ತಿದೆ. ದೇವರು ವರವನ್ನು ಕೊಡುವುದಿಲ್ಲ, ಶಾಪವನೂ ಕೊಡುವುದಿಲ್ಲ. ಅವಕಾಶವನ್ನು ಮಾತ್ರ ಕೊಡುತ್ತಾನೆ. ಕೊಟ್ಟ ಅವಕಾಶವನ್ನು ಬಳಸಿಕೊಂಡು ಜನರಿಗೆ ಸರಿಯಾಗಿ ಅವಕಾಶ ಕೊಡಬೇಕು ಎಂದರು. ಆರನೇ ಗ್ಯಾರಂಟಿಯಾಗಿ ಭೂಮಿ ಗ್ಯಾರಂಟಿ ನೀಡಲಾಗಿದೆ. 10-15 ಲಕ್ಷ ನಿವೇಶನಗಳನ್ನು ಬಡವರಿಗೆ ಹಂಚಬೇಕೆಂದು ಯೋಜನೆ ರೂಪಿಸಿಸಲಾಗಿದೆ. ದೇಶಕ್ಕೆ ಸ್ವಾತಂ ತಂದುಕೊಟ್ಟ ಪಕ್ಷ ಮಾತ್ರ ಇಂಥ ಕಾರ್ಯಕ್ರಮ ನೀಡಿದೆ ಎಂದು ಸಿಎಂ ಹೇಳಿದರು. ಎಸ್‌ಸಿಪಿ-ಟಿಎಸ್‌ಪಿ ಹಣ ಗ್ಯಾರಂಟಿಗೆ ಬಳಕೆ ಮಾಡ್ತಾ ಇದ್ದೀರಾ ಅಂತ ವಿಪಕ್ಷಗಳು ಆರೋಪ ಮಾಡುತ್ತಿವೆ. ಈ ಹಿಂದೆ ಸಚಿವರಾಗಿದ್ದ ಮಹಾದೇವಪ್ಪ ಸೇರಿ ಸಿಎಂ ಸರ್ಕಾರದ ಮಂತ್ರಿಗಳು ಗ್ಯಾರಂಟಿ ಸೇರಿ ವಿವಿಧ ಯೋಜನೆಗೆ ದಲಿತರ ಹಣ ಬಳಕೆ ಮಾಡಿಕೊಂಡಿಲ್ಲ ಎಂದು ವಾದ ಮಾಡುತ್ತಿದ್ದರು. ಈಗ ಸಿಎಂ ಅವರೇ ಎಸ್‌ಸಿಪಿ-ಟಿಎಸ್‌ಪಿ ಹಣ ಬಳಕೆ ಬಗ್ಗೆ ಒಪ್ಪಿಕೊಂಡಿದ್ದಾರೆ.

### ಮಹತ್ವದ ಮಾತುಕತೆ

ವಿಧಾನಸಭೆಗೆ ಬದಲಾಗಿ ಲೋಕಸಭೆಗೆ ಸ್ಪರ್ಧಿಸುತ್ತೇನೆ ಎಂದಾಗ ನಾಯಕರು ಸಹಮತ ವ್ಯಕ್ತಪಡಿಸಿದ್ದಾರೆ. 35 ನಿಗಮ-ಮಂಡಳಿ ಅಧ್ಯಕ್ಷರ ಪಟ್ಟಿಯಲ್ಲಿ ಮಹಿಳೆಯರಿಗೆ ಸ್ಥಾನ ಸಿಗದ ಬಗ್ಗೆ ಸುರ್ಜೇವಾಲಾ ಹಾಗೂ ವೇಣುಗೋಪಾಲ್ ಅವರೊಂದಿಗೆ ಚರ್ಚಿಸುವಂತೆ ತಿಳಿಸಿದ್ದೇನೆ ಎಂದರು.

### ಅಪಘಾತ: ಮೂವರು ಸಾವು

ಗ್ರಾಮದ ಬಳಿ ವೇಗವಾಗಿ ಬಂದ ಹಾಲಿನ ಟ್ಯಾಂಕರ್ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಟ್ಯಾಂಕರ್ ಚಕ್ರಗಳು ಇವರ ಮೇಲೆಯೇ ಹರಿದಿದ್ದರಿಂದ ಮೂವರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಅದ್ದೂರಿಯಾಗಿ ಗಣಪತಿ ಹಬ್ಬ ಅಚ್ಚರಿಸಿದ್ದ ಕುಟುಂಬ ಮುಂಜಾನೆ ಬೇಗ ಬಿಟ್ಟರೆ ಸರಿಯಾದ ಸಮಯಕ್ಕೆ ಕೆಲಸಕ್ಕೆ ಹೋಗಬಹುದು ಎಂದು ಹೊರಟಿದ್ದರು. ಆದರೆ ಕೆಲ ಸಮಯದಲ್ಲಿಯೇ ಅಪಘಾತ ಸಂಭವಿಸಿದೆ.

## ಸದ್ಯವೇ ಅಲ್ಲೋಲ-ಕಲ್ಲೋಲ

ಬರುತ್ತಿರುವವರು ಯಾರು? ಈಗಿನ ಮುಖ್ಯಮಂತ್ರಿ ತಾನೇ? ಎಂದು ಪ್ರಶ್ನಿಸಿದರು. ಡಿ.ಕೆ.ಶಿವಕುಮಾರ್ ತೋರಿಸಿರುವ ಪೆನ್‌ಡ್ರೈವ್ ಬೇರೆ, ನನ್ನ ಬಳಿ ಇರುವ ದಾಖಲೆ ಬೇರೆ. ನಾನು ಖಾಲಿ ಪೆನ್ ಡ್ರೈವ್ ತೋರಿಸಿ ಓಡಾಡುತ್ತಿಲ್ಲ. ಚುನಾವಣೆಯ ವೇಳೆ ಒಂದು ಲಕ್ಷ ಪೆನ್ ಡ್ರೈವ್ ಹಂಚಿದ್ದಾರಲ್ವಾ, ನಾನು ಆ ರೀತಿ ಮಾಡಲು ಹೋಗುವುದಿಲ್ಲ. ಸಮಯ ಸಂದರ್ಭ ನೋಡಿ, ಕಾಂಗ್ರೆಸ್ಸಿನ ಅಕ್ರಮ ಕೆಲಸವನ್ನು ಬಹಿರಂಗಪಡಿಸುತ್ತೇನೆ ಎಂದರು. ನೈಸ್ ವಿಚಾರದ ಬಗ್ಗೆ ಮಾತನಾಡಿದ ಕೂಡಲೇ, ಪರಪ್ಪನ ಅಗ್ರಹಾರ, ಪೆನ್ ಡ್ರೈವ್ ವಿಚಾರ ಮುನ್ನಲೆಗೆ ಬಂದಿದೆ. ಎರಡು ವರ್ಷದಿಂದ ಪ್ರಜ್ವಲ್ ರೇವಣ್ಣ ಜೈಲಿನಲ್ಲಿ ಇದ್ದಾನೆ. ಇಷ್ಟು ದಿನ ಇಲ್ಲದೇ ಇದ್ದದ್ದು ಈಗ ಯಾಕೆ ಮುನ್ನಲೆಗೆ ಬರುತ್ತಿದೆ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

## ಪಿಎಸ್‌ಐ ಪರ ಸಿಎಂ ಬ್ಯಾಟಿಂಗ್

ಯಾರನ್ನು ಸ್ಟಾಪ್ ಮಾಡೋಕೆ ಆಗುತ್ತದೆ? ಯಾರು ಏನು ಬೇಕಾದರೂ ಮಾತನಾಡಲಿ. ಏನು ಬೇಕೋ ಚರ್ಚೆ ಮಾಡಿಕೊಳ್ಳಲಿ. ಏನು ಬೇಕಾದರೂ ಬಿಡುಗಡೆ ಮಾಡಿಕೊಳ್ಳಲಿ ಎಂದು ತಿರುಗೇಟು ನೀಡಿದರು.

### 2 ಸಾವಿರಕ್ಕೆ ಶುಲ್ಕವಿಲ್ಲ

ಯಾವುದೇ ನೇರ ಅಥವಾ ಪರೋಕ್ಷ ಶುಲ್ಕ ವಿಧಿಸಲು ಅವಕಾಶವಿಲ್ಲ.

ಆದರೆ, 2,000 ರೂ.ಗಿಂತ ಹೆಚ್ಚಿನ ಯುಪಿಐ ವಹಿವಾಟುಗಳ ಮೇಲೆ ಶುಲ್ಕ ವಿಧಿಸುವುದೇ ಅಥವಾ ಇಲ್ಲವೇ, ವಿಧಿಸಿದರೆ ಎಷ್ಟು ಶುಲ್ಕ ಮತ್ತು ಯಾವ ರೀತಿಯಲ್ಲಿ ವಿಧಿಸಲಾಗುತ್ತದೆ ಎಂಬುದರ ಕುರಿತು ಸರ್ಕಾರದಿಂದ ಇನ್ನೂ ಅಂತಿಮ ನಿರ್ಧಾರ ಹೊರಬಿದ್ದಿಲ್ಲ.

## ಪ್ರಜ್ವಲ್ ಮುಗಿಸಲು ಸಂಚು

ನಾನು ವಿದೇಶದಿಂದ ಬರುವವರೆಗೆ ಯಾರೂ ನಿದ್ದೆ ಮಾಡಿಲ್ಲ ಎಂಬ ಕುಮಾರಸ್ವಾಮಿ ಹೇಳಿಕೆಗೆ ವ್ಯಂಗ್ಯವಾಡಿದ ಬಾಲಕೃಷ್ಣ, ಅಯ್ಯೋ.. ಅವರು ಬರುವವರೆಗೂ ನಾವ್ಯಾರೂ ನಿದ್ದೆಯೇ ಮಾಡಿರಲಿಲ್ಲ. ನಾಳೆಯಿಂದ ನೆಮ್ಮದಿಯಾಗಿ ನಿದ್ದೆ ಮಾಡುತ್ತೇವೆ. ಎಲ್ಲಿ ಎದೆ ಡಮ್ ಅನ್ನುತ್ತೋ ಅಂತ ಭಯ ಇತ್ತು. ಎದೆ ಗಟ್ಟಿಯಾಗಿ ಇಟ್ಟುಕೊಂಡಿದ್ದೆವು. ಇಂತಹ ಚಿಲ್ಲರೆ ಹೇಳಿಕೆಗಳನ್ನು ನೀಡುವುದನ್ನು ಅವರು ನಿಲ್ಲಿಸಲಿ ಎಂದು ಬಾಲಕೃಷ್ಣ ವ್ಯಂಗ್ಯವಾಡಿದರು.

## ವಿಜಯದಶಮಿಗೆ 'ಯುದ್ಧ ಶುರು'!

ಮುನ್ನ ಏನು ಹೇಳಿಕೆ ನೀಡಿದ್ದೆ, ಅದಕ್ಕೆ ಈಗಲೂ ಬದ್ಧನಾಗಿದ್ದೇನೆ ಎಂದು ಹೇಳಿದರು.

# ಮೈಸೂರಲ್ಲಿ ತಲೆ ಎತ್ತಿವೆ ನಾನಾ ಗಣೇಶ!








ಮೈಸೂರು: ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಾನಾ ವಿಧವಾದ ಗಣೇಶನ ಮೂರ್ತಿಗಳು ತಲೆ ಎತ್ತಿದ್ದು, ಜನರನ್ನು ಸೆಳೆಯುವಲ್ಲಿಯೂ ಒಂದಕ್ಕಿಂತ ಒಂದು ವಿಭಿನ್ನವಾಗಿ ನೋಡುಗರ ಆಕರ್ಷಿಸಲು ಆರಂಭಿಸಿವೆ.

ನಗರದ ಕನ್ನೇಗೌಡಕೊಪ್ಪಲಿನಲ್ಲಿ ಕೆಂಪೇಗೌಡ ಟೈಗರ್ಸ್‌ನ 30 ನೇ ವರ್ಷದ ಗಣೇಶೋತ್ಸವದ ಅಂಗವಾಗಿ 36ಅಡಿ ಎತ್ತರದ ನರಸಿಂಹನ ನಾನಾ ಅವತಾರಗಳನ್ನು ಒಳಗೊಂಡ ಬೃಹತ್ ಗಣೇಶನನ್ನು ಮುಖ್ಯರಸ್ತೆಯಲ್ಲೇ ಪ್ರತಿಷ್ಠಾಪಿಸಿದ್ದು, ಸಂಜೆ ವೇಳೆಗೆ ಕಿಕ್ಕಿರಿದು ಜನಸಂದಣಿ ಸೇರುವಂತೆ ಮಾಡಿದೆ. ಇನ್ನೂ ರಾಮಕೃಷ್ಣನಗರದ ಆಂದೋಲನ ವೃತ್ತದಲ್ಲಿ ಶ್ರೀ ಜಯಮಾರ್ತಾಂಡ ಗ್ರೂಪಿನ ಸದಸ್ಯರು ಅರಣ್ಯದೊಳಗಿನ ಆಕರ್ಷಕ ಗೌರಿ, ಗಣೇಶನನ್ನು ವೀಕ್ಷಿಸಲು ಸಾಲುಗಟ್ಟಿ ಜನರು ನಿಂತಿದ್ದಾರೆ. ದಟ್ಟಗಳ್ಳಿಯಲ್ಲಿ ಬೃಹತ್ ಕೃತಕ ಮಂಜಿನ ಮಾದರಿಯೊಳಗಿನ ಅಲಂಕೃತ ಗಣೇಶ ನಗರದ ನಂಬರ್ ಒನ್ ಆಕರ್ಷಣೆಯ ಗಣೇಶನಾಗಿ ಎಲ್ಲರ ಕಣ್ಮನ ಸೆಳೆಯುತ್ತಿದೆ.

ಒಂಟಿಕೊಪ್ಪಲಿನ ವಿಘ್ನೇಶ್ವರ ಯುವಕರ ಬಳಗ 24ಅಡಿ ಗಣಪ, ಬೆಳಿಕಟ್ಟೆಯ ಕೇಸರಿ ಬ್ರಿಗೇಡ್ ಗಣಪತಿ, ರಾಮಕೃಷ್ಣನಗರ, ಕುವೆಂಪುನಗರ, ಪಡುವಾರಹಳ್ಳಿಯ ಬಬ್ರುವಾಹನ ಬಳಗದ 101 ಗಣಪ, ದೇವರಾಜ ಅರಸು ರಸ್ತೆಯ ಶಿವರಾಂಪೇಟೆಯಲ್ಲಿರುವ ಗಣಪ ಹೀಗೆ ನಗರದ ನಾನಾ ಭಾಗದಲ್ಲಿ ಬೃಹತ್ ಗಣಪತಿಗಳ ಮೂರ್ತಿಗಳನ್ನೇ ಪ್ರತಿಷ್ಠಾಪಿಸಿ ನಾನಾ ಸೇವಾ ಹಾಗೂ ಧಾರ್ಮಿಕ ಕಾರ್ಯಕ್ರಮಗಳ ಮೂಲಕ ಸಂಭ್ರಮಿಸಲಾಗುತ್ತಿದೆ.

**ನಿನ್ನೆಯೇ ವಿಸರ್ಜನೆ**

ನಗರದ ಬಹುತೇಕ ಮನೆಗಳಲ್ಲಿ ಹಾಗೂ ಸಣ್ಣ ಸಣ್ಣ ಮಕ್ಕಳು ಕೂರಿಸಿದ್ದ ಗಣೇಶನನ್ನು ರಾತ್ರಿಯೇ ಹಲವೆಡೆ ಮೆರವಣಿಗೆ ನಡೆಸಿ ವಿಸರ್ಜಿಸಿದರು. ಬಹುತೇಕ ಕಡೆಗಳಲ್ಲಿ ನಗರಪಾಲಿಕೆಯಿಂದ ದೊಡ್ಡ ದೊಡ್ಡ ಟ್ಯಾಂಕರ್ ಗಾಡಿಗಳನ್ನು ನಿಲ್ಲಿಸಿ ಅಲ್ಲಿಯೇ ನೀರಿನಲ್ಲಿ ಗಣಪತಿ ಮೂರ್ತಿಗಳನ್ನು ವಿಸರ್ಜನೆ ನಡೆಸುತ್ತಿದ್ದ ದೃಶ್ಯಗಳು ಕಂಡು ಬಂದಿತು.

# ಭಕ್ತಿ, ಶ್ರದ್ಧೆಯ ಗೌರಿ-ಗಣೇಶ ಹಬ್ಬ

## ಗಮನ ಸೆಳೆಯುತ್ತಿವೆ ವಿವಿಧ ಭಂಗಿಯ ಗಣಪತಿ ಮೂರ್ತಿಗಳು




ರಾಮನಗರ: ಸೋಮವಾರ ಗೌರಿ ಮತ್ತು ಗಣೇಶ ಹಬ್ಬವನ್ನು ಜಿಲ್ಲಾದ್ಯಂತ ನಾಗರೀಕರು ಅತ್ಯಂತ ಶ್ರದ್ಧೆ ಮತ್ತು ಭಕ್ತಿಯಿಂದ ಆಚರಿಸಿದರು.

ಜಿಲ್ಲಾ ಕೇಂದ್ರ ರಾಮನಗರದಲ್ಲಿ ಬಹುತೇಕ ಬಡಾವಣೆಗಳಲ್ಲಿ ಗಣೇಶನ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದ್ದು, ವಿಶೇಷವಾಗಿ ಯುವ ಸಮುದಾಯ ಈ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಸೋಮವಾರ ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ವಿವಿಧ ಕ್ಷೇತ್ರಗಳಲ್ಲಿ ಗುರುತಿಸಿಕೊಂಡ ಪ್ರಮುಖರು ಗಣಪತಿಗಳ ದರ್ಶನ ಪಡೆದುಕೊಡರು.

**ಅರ್ಕಾವತಿ ಗಣಪತಿ**

ನಗರದ ಛತ್ರದ ಬೀದಿಯಲ್ಲಿ ಅರ್ಕಾವತಿ ವಿದ್ಯಾಗಣಪತಿ ಯುವ ಸೇವಾ ಸಂಘ ಮತ್ತು ಅರಳೀಕಟ್ಟೆ ಗೆಳೆಯರ ಬಳಗ 42ನೇ ವರ್ಷದ ವಾರ್ಷಿಕೋತ್ಸವದ ಪಯುಕ್ತ ಮುದ್ಗಲ್ ಪುರಾಣದ ಹೇರಂಬ ಪಂಚಮುಖಿ ಗಣಪತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಪ್ರತೀ ವರ್ಷ ಒಂದಿಲ್ಲೊಂದು ದೇವರ ಚಿತ್ರದ ಗಣೇಶಮೂರ್ತಿಗಳನ್ನು ವಿಶೇಷವಾಗಿ ಪ್ರತಿಷ್ಠಾಪಿಸುವುದು ಗೆಳೆಯರ ಬಳಗದ ವಿಶೇಷ.

ಸೋಮವಾರ ಸಂಸದ ಡಾ. ಸಿ.ಎನ್. ಮಂಜುನಾಥ್, ಶಾಸಕ ಹೆಚ್.ಎ. ಇಕ್ಬಾಲ್ ಹುಸೇನ್, ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ, ಪ್ರಾಧಿಕಾರ ಅಧ್ಯಕ್ಷ ಎ.ಬಿ. ಚೇತನ್‌ಕುಮಾರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿಎನ್‌ಆರ್ ವೆಂಕಟೇಶ್, ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಸತೀಶ್, ನಗರಸಭೆ ಸದಸ್ಯರಾದ ಮಹಾಲಕ್ಷ್ಮೀ ಗೂಳಿಗೌಡ, ಮಂಜುಳ ವೆಂಕಟೇಶ್, ಸೋಮಶೇಖರ್, ಬೈರೇಗೌಡ, ನಾಗಮ್ಮ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿಎನ್‌ಆರ್ ವೆಂಕಟೇಶ್, ಗಣೇಶ್ ಜುವೆಲ್ಲರ್ಸ್ ಮಾಲೀಕ ಲಕ್ಷ್ಮಣ್ ಮುಖಂಡರುಗಳಾದ ಗುರುಪ್ರಸಾದ್, ಕೆ. ರವಿ, ಗಿರೀಶ್, ಆರ್.ಕೆ. ಭೈರಲಿಂಗಯ್ಯ, ಪದ್ಮನಾಭ್, ಬಿಜೆಪಿ ಮಂಜು ಮುಂತಾದವರು ಭೇಟಿ ಕೊಟ್ಟು ಪೂಜಾ ಕೈಂಕರ್ಯಗಳನ್ನು ನೆರವೇರಿಸಿದರು. ಈ ವೇಳೆ ಅರ್ಕಾವತಿ ಗೆಳೆಯರ ಬಳಗದ ಪಿ.ವೈ. ರವೀಂದ್ರ ಹೇರ್ಳೆ, ಉಮಾ ಮಹದೇವಪ್ಪ ನಾರಾಯಣ್, ಗಿರೀಶ್‌ರಾವ್, ಮಹೇಶ್, ರಾಜು, ಲೋಹಿತ್ ನಾಗೇಶ್ ಮುಂತಾದವರು ಉಪಸ್ಥಿತರಿದ್ದರು.

**ದರ್ಬಾರ್ ಗಣಪತಿ**

ನಗರದ ಮುಖ್ಯರಸ್ತೆಯಲ್ಲಿ ಶ್ರೀ ಭಾರ್ಗವ ಸ್ವಾಮಿ ಭಜನಾ ಮಂದಿರದಲ್ಲಿ ಶ್ರೀ ಗಣಪತಿ ಸೇವಾ ಸಂಘದವತಿಯಿಂದ ದರ್ಬಾರ್ ಭಂಗಿಯಲ್ಲಿರುವ ವಿನಾಯಕನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಕಳೆದ 59 ವರ್ಷಗಳಿಂದ ನಿರಂತರವಾಗಿ ಇಲ್ಲಿ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುತ್ತಿದ್ದು ಇಡೀ ಜಿಲ್ಲೆಯಲ್ಲಿ ಈ ಗಣಪತಿಯ ಕೀರ್ತಿ ವ್ಯಾಪಿಸಿದೆ. ಸಂಸದ ಡಾ.ಸಿ.ಎನ್.ಮಂಜುನಾಥ್, ಶಾಸಕ ಇಕ್ಬಾಲ್ ಹುಸೇನ್, ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಸೇರಿದಂತೆ ಹಲವಾರು ಗಣ್ಯರು ಭೇಟಿ ಕೊಟ್ಟು ತಮ್ಮ ಭಕ್ತಿ ನಿವೇದಿಸಿಕೊಂಡರು. ಸಂಘದ ಅಧ್ಯಕ್ಷ ಸಿ. ಕೆ.ನಾಗರಾಜ್, ಕಾರ್ಯದರ್ಶಿ ಕೆ.ವಿ.ಪ್ರಸನ್ನ ಕುಮಾರ್ ಮುಂತಾದವರು ಭಾಗವಹಿಸಿದ್ದರು.

**ಎಂ.ಜಿ.ರಸ್ತೆಯಲ್ಲಿ**

ರಾಮನಗರದ ಎಂ.ಜಿ.ರಸ್ತೆಯಲ್ಲಿ ಶ್ರೀ ವಿಘ್ನೇಶ್ವರ ಯುವಕರ ಸಂಘ ಎಂ.ಜಿ. ರಸ್ತೆಯ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಭಜನಾ ಮಂದಿರದಲ್ಲಿ ಕಳೆದ 39 ವರ್ಷಗಳಿಂದ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸುತ್ತಿದ್ದಾರೆ. ಅನೇಕ ಗಣ್ಯರು ಭೇಟಿ ಕೊಟ್ಟು ಗಣಪತಿಯ ದರ್ಶನ ಪಡೆದುಕೊಂಡರು.

## ಜಿಲ್ಲೆಗೆ ಸಮೃದ್ಧಿ ಕರುಣಿಸಲಿ - ಇಕ್ಬಾಲ್ ಹುಸೇನ್

ನಗರದ ವಿವಿಧ ಸ್ಥಳಗಳಲ್ಲಿ ಪ್ರತಿಷ್ಠಾಪಿಸಿರುವ ಗಣಪತಿಗಳನ್ನು ದರ್ಶಿಸಿದ ಶಾಸಕ ಹೆಚ್.ಎ. ಇಕ್ಬಾಲ್ ಹುಸೇನ್ ಮಾಧ್ಯಮ ಪ್ರತಿನಿಧಿಗಲ ಬಳಿ ಮಾತನಾಡಿ, ಗಣಪತಿಯು ಎಲ್ಲರಿಗೂ ಒಳಿತು ಮಾಡಲಿ. ಪ್ರತಿಯೊಬ್ಬರಿಗೂ ಆರೋಗ್ಯ, ಆಯಸ್ಸು, ಐಶ್ವರ್ಯ, ನೆಮ್ಮದಿ, ಸಂತೋಷವನ್ನ ನೀಡಲಿ ಈ ವರ್ಷ ಉತ್ತಮ ಮಳೆ ಬೆಳೆಗಳಾಗಿ ದೇಶ, ರಾಜ್ಯ, ಜಿಲ್ಲೆಯ ಜನರಿಗೆ ಸಮೃಧ್ಧಿತರಲಿ ಎಲ್ಲರೂ ಸಾಮರಸ್ಯದಿಂದ ನೆಮ್ಮದಿಯಾಗಿ ಬಾಳುವಂತೆ ವಿಘ್ನೇಶ್ವರ ಆಶೀರ್ವದಿಸಲಿ ಎಂದು ತಿಳಿಸಿ ಗಣೇಶ ಹಬ್ಬದ ಶುಭ ಕೋರಿದರು. ರಾಮನಗರದ ಛತ್ರದಬೀದಿಯಲ್ಲಿ ಕಳೆದ 42 ವರ್ಷಗಳಿಂದ ನಿರಂತರವಾಗಿ ಗಣೇಶೋತ್ಸವವನ್ನ ಅರ್ಕಾವತಿ ವಿದ್ಯಾಗಣಪತಿ ಯುವ ಸೇವಾ ಸಂಘ, ಭಕ್ತ ಮಂಡಳಿಯವರು ವಿಭಿನ್ನ ಮತ್ತು ಸಂಪ್ರದಾಯವಾಗಿ ಆಚರಣೆ ಮಾಡುತ್ತಾ ಬಂದಿದ್ದಾರೆ ಎಂದು ಶ್ಲಾಘಿಸಿದರು.

## ಎಂಜಿನಿಯರ್‌ಗಳ ಪಾತ್ರ ಅನನ್ಯ

ಮೈಸೂರು:ಪುರಾಣ ಶ್ರೇಷ್ಠವಾದ ನಮ್ಮ ನಾಡು ದೇವರು, ಸನ್ಯಾಸಿಗಳು ಹಾಗೂ ಸಾಧಕರು ಮೆಟ್ಟಿದ ಪುಣ್ಯಭೂಮಿಯಾಗಿದೆ. ಇಂತಹ ಸಂಪ್ರದಾಯಬದ್ಧ ದೇಶದಲ್ಲಿ ವಿಜ್ಞಾನ ಹಾಗೂ ಎಂಜಿನಿಯರ್‌ಗಳ ಸೇವೆ ಅತ್ಯಂತ ವಿಶಿಷ್ಟವಾದದ್ದು ಎಂದು ಸಚಿವ ಜಲಸಂಪನ್ಮೂಲ ಸಚಿವ ಎನ್. ಚಲುವರಾಯಸ್ವಾಮಿ ಬಣ್ಣಿಸಿದರು.

ಭಾರತ ರತ್ನ ಡಾ. ಸರ್ ಎಂ. ವಿಶ್ವೇಶ್ವರಯ್ಯನವರ 165ನೇ ಜಯಂತಿ ಅಂಗವಾಗಿ ಮೈಸೂರಿನ ಭಾರತೀಯ ಎಂಜಿನಿಯರ್‌ಗಳ ಸಂಸ್ಥೆ ವತಿಯಿಂದ ಸಂಸ್ಥೆಯ ಸಭಾಂಗಣದಲ್ಲಿ ಆಯೋಜಿಸಿದ್ದ 59ನೇ ಎಂಜಿನಿಯರ್‌ಗಳ ದಿನಾಚರಣೆಯಲ್ಲಿ ಪಾಲ್ಗೊಂಡು ಎಂಜಿನಿಯರ್‌ಗಳ ಸೇವೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದರು.

ಪ್ರಾಚೀನ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯಗಳು ಹಾಗೂ ಅಣೆಕಟ್ಟುಗಳು ಇಂದಿಗೂ ಸುಭದ್ರವಾಗಿರುವುದು ನಮ್ಮ ಎಂಜಿನಿಯರ್‌ಗಳ ಕಾಯಕ ನಿಷ್ಠೆ ಹಾಗೂ ಕೌಶಲ್ಯಕ್ಕೆ ಸ್ಪಷ್ಟ ನಿದರ್ಶನವಾಗಿದೆ. ಯಾವುದೇ ಹುದ್ದೆ, ಅಧಿಕಾರ ಅಥವಾ ರೈತರ ಕಾಯಕದೊಂದಿಗೆ ಇದನ್ನು ಹೋಲಿಕೆ ಮಾಡಲು ಅಥವಾ ಅಲ್ಲಗಳೆಯಲು ಸಾಧ್ಯವಿಲ್ಲ ಎಂದು ಅವರು ಅಭಿಪ್ರಾಯಪಟ್ಟರು. ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರ ಕುರಿತು ಮಾತನಾಡಿದರು, "ಶ್ರೀಗಳು ವಿಜ್ಞಾನ ಹಾಗೂ ತಂತ್ರಜ್ಞಾನದ ಬಗ್ಗೆ ಆಳವಾದ ಅಧ್ಯಯನ ನಡೆಸಿದ್ದಾರೆ. ಎಂದರು.

ಇದೇ ವೇದಿಕೆಯಲ್ಲಿ ತಮ್ಮ ವೃತ್ತಿ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ ಸಾಧಕ ಹಾಗೂ ಹಿರಿಯ ಎಂಜಿನಿಯರ್‌ಗಳನ್ನು ಸನ್ಮಾನಿಸಿ ಗೌರವಿಸಿದರು.

ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಶಾಸಕರಾದ ಕೆ. ಹರೀಶ್ ಗೌಡ ಇತರರು ಉಪಸ್ಥಿತರಿದ್ದರು.

## ನಾಳೆ ಸಹಪಂಕ್ತಿ ಭೋಜನ ಕಾರ್ಯಕ್ರಮ

ಮೈಸೂರು: ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್ ಹುಟ್ಟುಹಬ್ಬಾಚರಣೆ ಹಿನ್ನೆಲೆ ಸೆ.17 ರ ಸಂಜೆ 7ಕ್ಕೆ ಅಶೋಕಪುರಂ 8 ನೇ ಅಡ್ಡ ರಸ್ತೆಯಲ್ಲಿರುವ ಸಿದ್ದಪ್ಪಾಜಿ ದೇವಸ್ಥಾನದ ಮುಂಭಾಗ ಪ್ರಮುಖ ಧರ್ಮಗಳ ಧರ್ಮಗುರುಗಳು ಭಾಗಿಯಾಗಿರುವಂತೆ ಸಹಪಂಕ್ತಿ ಭೋಜನ ಆಯೋಜಿಸಲಾಗಿದೆ ಎಂದು ಆದಿ ಕರ್ನಾಟಕ ಹಿತರಕ್ಷಣಾ ಹೋರಾಟ ಸಮಿತಿ ಗೌರವಾಧ್ಯಕ್ಷ ಎನ್. ಭಾಸ್ಕರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸುಮಾರು 500 ಜನರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಅಲ್ಲದೆ, ಸಮಾಜದ ಮುಖಂಡರ, ಗಣ್ಯರು, ಮಠಾಧೀಶರು, ಪ್ರಗತಿಪರರು, ಸಾಹಿತಿಗಳು, ಚಿಂತಕರು ಮೊದಲಾದವರು ಪಾಲ್ಗೊಳ್ಳಲಿದ್ದಾರೆಂದರು. ಕೆ.ಮುರುಳಿ, ಸತ್ಯನಾರಾಯಣ, ತಿಮ್ಮಯ್ಯ, ಕುಮಾರಸ್ವಾಮಿ, ಡೈರಿ ವೆಂಕಟೇಶ್ ಮೊದಲಾದವರು ಇದ್ದರು.

## ಸೆ.20 ಅರಣ್ಯ ಕುರಿತು ಬೆಂಗಳೂರಿನ ಜಾಗೃತಿ

ಮೈಸೂರು: ಕಾಡು, ನದಿ, ಕೆರೆ ಮತ್ತು ವನ್ಯಜೀವಿಯನ್ನೊಳಗೊಂಡ ನೈಸರ್ಗಿಕ ಪರಿಸರ ಸಂರಕ್ಷಣೆ ನಿಟ್ಟಿನಲ್ಲಿ ಸರ್ಕಾರದ ಗಮನ ಸೆಳೆಯಲು ಹಾಗೂ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಸೆ.20, 21 ಮತ್ತು 22 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪರಿಸರ ಸತ್ಯಾಗ್ರಹ ಹಮ್ಮಿಕೊಳ್ಳಲಾಗುತ್ತಿದೆ ಎಂದು ಹಿರಿಯ ರೈತ ಟಿ.ಜಿ.ಎಸ್. ಅವಿನಾಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ ದಟ್ಟವಾದ ಕಾಡನ್ನೊಳಗೊಂಡ ಪಶ್ಚಿಮ ಘಟ್ಟಗಳು ಜೀವ ಸಂಕುಲದ ಉಸಿರುವ, ಇದು ನಾಶವಾದರೆ ಮಾನವ ಪ್ರಭೇದ ಸೇರಿದಂತೆ ಸಕಲ ಜೀವರಾಶಿಗಳು, ನದಿ, ಬೆಟ್ಟ ಗುಡ್ಡಗಳು ನಾಶವಾಗುತ್ತವೆ. ಹೀಗಾಗಿ ಅಲ್ಲಿನ ಪರಿಸರ ಹಾನಿ ಪಡಿಸುವ ಯಾವುದೇ ಯೋಜನೆ ಜಾರಿಗೊಳಿಸಬಾರದರು. ರಾಜ್ಯದಲ್ಲಿ ಹರಿಯುತ್ತಿರುವ ನದಿ ಮೂಲ ಬರಿದಾಗದಂತೆ ಹಾಗೂ ಕಲುಷಿತವಾಗದಂತೆ ನೋಡಿಕೊಳ್ಳಬೇಕು. ನದಿ ಪಾತ್ರಗಳಲ್ಲಿ ಒತ್ತುವರಿಯಾಗಿರುವ ಭೂಮಿ ತೆರವುಗೊಳಿಸಿ ಅಲ್ಲಿ ವೈವಿಧ್ಯತೆಯಿಂದ ಕೂಡಿದ ಸಸ್ಯ ಬೆಳೆಸಬೇಕು ಎಂಬಿವೇ ಮೊದಲಾದ ಬೇಡಿಕೆ ಈಡೇರಿಕೆಗೆ ಸರ್ಕಾರವನ್ನು ಒತ್ತಾಯಿಸಲಾಗುವುದು. ಪಾಲ್ಗೊಳ್ಳಲು ಇಚ್ಛಿಸುವವರು ದೂ. 81978 56132 ನ್ನು ಸಂಪರ್ಕಿಸಬಹುದೆಂದರು. ಹಿರಿಯ ರೈತ ಮುಖಂಡ ಹೊಸಕೋಟೆ ಬಸವರಾಜು ಇದ್ದರು.

### ಕನಕಪುರದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಎನ್.ಎಸ್.ಎಸ್ ಚಟುವಟಿಕೆಗಳ ಉದ್ಘಾಟನೆ

# ಕಾರುಗಳು, ಬಂಗಲೆಗಳಿಂದ ದೇಶ ಸುಭೀಕ್ಷವಾಗುವುದಿಲ್ಲ: ಎಂ.ವಿ.ಕೃಷ್ಣ



ಕನಕಪುರ: ದೇಶ ಸುಭೀಕ್ಷವಾಗುವುದು ಕಾರುಗಳು, ದೊಡ್ಡ ದೊಡ್ಡ ಬಂಗಲೆಗಳಿಂದಲ್ಲ. ಮಹಿಳೆಯರಿಗೆ ಗೌರವ ನೀಡುವಿಕೆಯಿಂದ, ಪ್ರಾಕೃತಿಕ ಸಂಪನ್ಮೂಲಗಳ ವಿಷಮುಕ್ತತೆಯಿಂದ, ಲಿಂಗ ಮತ್ತು ಆರ್ಥಿಕ ಸಮಾನತೆಯಿಂದ. ಲಂಚ, ಭ್ರಷ್ಟಾಚಾರರಹಿತ ಆಡಳಿತದಿಂದ. ಭ್ರಷ್ಟತೆಯಿಂದ ದೂರ ಉಳಿಯುವುದೇ ನಿಜವಾದ ದೇಶ ಸೇವೆ ಎಂದು ವೈಚಾರಿಕ ಚಿಂತಕ ಎಂ.ವಿ.ಕೃಷ್ಣ ಹೇಳಿದರು.

ಸರ್ಕಾರಿ ಪದವಿ ಪೂರ್ವ ಕಾಲೇಜು (ಮಾಜಿ ಪುರಸಭೆ) ಇವರು ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ 2026-27 ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡೆ ಹಾಗೂ ಎನ್.ಎಸ್.ಎಸ್ ಚಟುವಟಿಕೆಗಳ ಉದ್ಘಾಟನಾ ಸಮಾರಂಭ ಮತ್ತು ಪ್ರಥಮ ಪಿಯುಸಿ ವಿದ್ಯಾಥಿಗಳಿಗೆ ಸ್ವಾಗತ ಕಾರ್ಯಕ್ರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಮೂದಾಯದ ಕಷ್ಟಗಳಿಗೆ ಕಿವಿಗೊಡುವ, ಸಹಾಯಹಸ್ತ ಚಾಚುವುದೇ ನಿಜವಾದ ನಾಗರಿಕತ್ವ ಎಂದು ಅಭಿಪ್ರಾಯಪಟ್ಟರು.

ಓದಿಗೂ ಬದುಕಿಗೂ ಭಿನ್ನತೆಗಳಿವೆ. ಜಾತಿ ನಿರ್ಮೂಲನೆ ಕುರಿತು ಪಠ್ಯದಲ್ಲಿ ಓದುತ್ತೇವೆ. ಕಾಲೇಜಿನಿಂದ ಹೊರ ಬಂದಮೇಲೆ ಜಾತಿಯ ಕೂಪದಲ್ಲೇ ಬಿದ್ದು, ಹೊರಳಾಡುತ್ತೇವೆ. ಮೊಬೈಲ್ ಬಳಕೆಯಿಂದ ದಾರಿತಪ್ಪುವವರು ಹೆಚ್ಚುತ್ತಿದ್ದಾರೆ. ಆಚಾರಗಳಿಗಿಂತ ಅನಾಚಾರಗಳು ಏರುತ್ತಿವೆ. ಗುರುಗಳನ್ನು ಮಹಾ ಪೋಷಕರೆಂದು ಭಾವಿಸಿ. ಯಾವುದೇ ಅವಶ್ಯ ಕೆಲಸವನ್ನು ನಾಳೆ ಮಾಡೋಣ ಎಂದು ಉದಾಸೀನತೆ ತೋರಬೇಡಿ. ಓದುವಿಕೆಯನ್ನು ಮುಂದೂಡಬೇಡಿ. ಆಹಾರ, ಗಾಳಿಯಂತೆಯೇ ಪ್ರತಿದಿನ ಓದಿನಲ್ಲಿ ತೊಡಗಿಸಿಕೊಳ್ಳಿ. ಓದನ್ನು ನಿತ್ಯ ವ್ರತವಾಗಿ ಆಚರಿಸಿ. ಆಸ್ವಾದಿಸಿ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜಿಲ್ಲಾ ಪ್ರಾಂಶುಪಾಲರ ಸಂಘದ ನಿಕಟಪೂರ್ವ ಅಧ್ಯಕ್ಷ ಜಿ.ಶಿವಣ್ಣ ಮಾತನಾಡಿ, ಸಾಮಾಜಿಕ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಲು ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿಕೆ ಅತ್ಯಗತ್ಯ. ಸಮಯ ಹೊಂದಾಣಿಕೆ ಮಾಡಿಕೊಂಡು ಸಾಂಸ್ಕೃತಿಕ ಮತ್ತು ಎನ್. ಎಸ್.ಎಸ್ ಹಾಗೂ ಕ್ರೀಡಾ ಚಟುವಟಿಕೆಗಳನ್ನು ಭಾಗವಹಿಸಿದಾಗ ವ್ಯಕ್ತಿತ್ವದ ಸರ್ವತೋಮುಖ ಪ್ರಗತಿ ಸಾಧ್ಯವಾಗುತ್ತದೆ ಎಂದರು. ಸಾಂಸ್ಕೃತಿಕ ಪ್ರಜ್ಞೆ ಬೆಳೆಸಿ, ಸಾಮಾಜಿಕ ಮುಂದಾಳತ್ವದ ಗುಣವನ್ನು ವಿದ್ಯಾರ್ಥಿಗಳಲ್ಲಿ ಸಜ್ಜುಗೊಳಿಸುವುದು ಅತ್ಯಂತ ಮಹತ್ವದ ಕೆಲಸಗಳಲ್ಲಿ ಮುಖ್ಯವಾದುದಾಗಿದೆ. ಸಾಂಸ್ಕೃತಿಕವಾಗಿ ನಾವು ಆಹಾರ ಸಂಸ್ಕೃತಿ, ಬೇಸಾಯ ಸಂಸ್ಕೃತಿ, ಭಾಷಾ ಸಂಸ್ಕೃತಿ, ಜನಪದ ಸಂಸ್ಕೃತಿಯನ್ನು ಕಲಿತು, ಮುಂದಿನ ತಲೆಮಾರಿಗೆ ತಲುಪಿಸುವ ಜವಾಬ್ದಾರಿ ಉಪನ್ಯಾಸಕರ ಮೇಲಿದೆ. ಸಂಘಟಿತ ಹೋರಾಟ ರೂಪಿಸಲು, ಸಮನ್ವಯತೆಯಿಂದ ಬಾಳಲು, ಸೌಹಾರ್ದ ಮತ್ತು ಸಾಮರಸ್ಯದಿಂದ ದೇಶ ಕಟ್ಟಲು ಕ್ರೀಡಾ ಚಟುವಟಿಕೆಗಳಲ್ಲಿ ನೆರವಾಗುತ್ತವೆ. ದೈಹಿಕ ಮತ್ತು ಮಾನಸಿಕ ಸದೃಢತೆಗೆ ವೈಯಕ್ತಿಕ ಮತ್ತು ಸಾಮಾಜಿಕ ಸನ್ನಡತೆಗೆ ಹಾಗೂ ಸಮಾನತೆ ಮತ್ತು ಸಂವೃದ್ಧಿಗೆ ಶ್ರಮಿಸಬೇಕಾದ ಜವಾಬ್ದಾರಿ ಪ್ರತಿ ಪ್ರಜೆಯ ಮೇಲಿದೆ. ಶಿಕ್ಷಣ ಈ ಸಾಮಾಜಿಕ ಬದ್ಧತೆಯನ್ನು ನೀಡುವಲ್ಲಿ ಯಶಸ್ವಿಯಾದಾಗ ಸಮಾನತೆಯ ಮತ್ತು ಸ್ವಾಸ್ಥ್ಯ ಸಮಾಜವನ್ನು ಕಟ್ಟಲು ಸಾಧ್ಯವಾಗುತ್ತದೆ ಎಂದರು.

ಪ್ರಾಂಶುಪಾಲರಾದ ಡಾ.ದೊಡ್ಡ ಬೋರಯ್ಯ ಮಾತನಾಡಿ, ಸಮಷ್ಠಿ ಪ್ರಜ್ಞೆಯನ್ನು ಬೆಳೆಸುವುದೇ ಶಿಕ್ಷಣದ ನಿಜವಾದ ಗುರಿ. ನಮ್ಮ ಕಾಲೇಜಿನಲ್ಲಿ ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಮತ್ತು ಸಾಮಾಜಿಕ ಬದ್ಧತೆಯನ್ನು ಬೆಳೆಸುವಲ್ಲಿ ಯಶಸ್ವಿಯಾಗಿದ್ದೇವೆ. ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಿದಾಗ ಮುಂಬರುವ ಆಪತ್ತನ್ನು ದೂರ ಸರಿಸಿದಂತೆ. ಅನಾಗರಿಕ ವರ್ತನೆ ಬಿಟ್ಟು, ನಾಗರಿಕರಾಗಿ ಸಮಾಜದಲ್ಲಿ ಸದ್ವರ್ತನೆ ಬೆಳೆಸಿಕೊಳ್ಳಿ. ಅಸಹಾಯಕರ ಬಗ್ಗೆ ಸಹಾಯ ಹಸ್ತ ನೀಡಿ ಆಗ ಮಾತ್ರ ನೀವು ಪಡೆದ ಶಿಕ್ಷಣ ಸಾರ್ಥಕತೆ ಲಭ್ಯವಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ಉಪನ್ಯಾಸಕರ ಸಂಘದ ಜಿಲ್ಲಾಧ್ಯಕ್ಷ ಎಂ. ಎನ್.ಪ್ರದೀಪ್, ಕಲಾ, ವಾಣಿಜ್ಯ ಹಾಗೂ ವಿಜ್ಞಾನ ವಿಭಾಗಗಳಲ್ಲಿ ಅತ್ಯುನ್ನತ ಅಂಕಗಳಿಸಿದ ತಲಾ ಮೂವರಿಗೆ ವೈಯಕ್ತಿಕವಾಗಿ 10 ಸಾವಿರ ರೂ.ನಗದು ಬಹುಮಾನ ನೀಡಿದರು. ಕಾಲೇಜುವತಿಯಿಂದ ಅತ್ಯುನ್ನತಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ವಿದ್ಯಾಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಉಪನ್ಯಾಸಕರಾದ ಶಿವಕುಮಾರ್, ಶ್ರೀನಿವಾಸ್, ಸತ್ಯನಾರಾಯಣ, ಪದ್ಮನಾಭ, ರಾಮಚಂದ್ರ, ಲಂಕೇಶ್, ತಂಗರಾಣಿ, ಕೆ. ಸರಸ್ವತಿ, ಶಿಲ್ಪಾ, ಪಲ್ಲವಿ ಡಿ.ಸಿ. ನಂದಿನಿ, ಲಲನಾ, ಬಸವರಾಜ್, ಮಂಜುನಾಥ್, ನಾರಾಯಣ ಸ್ವಾಮಿ, ನವೀನ್ ಕುಮಾರ್ ಆರಾಧ್ಯ ಮೊದಲಾದವರು ಉಪಸ್ಥಿತರಿದ್ದರು.

# ಡೇರಿಗಳ ಪ್ರಗತಿಯಿಂದ ಗ್ರಾಮಗಳ ಅಭಿವೃದ್ಧಿ

## ಎಚ್.ಎಸ್. ಬಸವರಾಜು ಕರೆ | ಬಸವಾಪುರ ಡೇರಿ ನೂತನ ಕಟ್ಟಡ ಉದ್ಘಾಟನೆ

ಚಾಮರಾಜನಗರ: ರೈತರ ಸಂಸ್ಥೆಯಾಗಿರುವ ಹಾಲು ಉತ್ಪಾ ದಕರ ಸಹಕಾರ ಸಂಘಗಳ ಪ್ರಗತಿಯಿಂದ ರೈತರು ಹಾಗೂ ಗ್ರಾಮದ ಅಭಿವೃದ್ಧಿಯಾಗುತ್ತದೆ ಎಂದು ಚಾಮುಲ್ ಹಿರಿಯ ನಿರ್ದೇಶಕ ಎಚ್.ಎಸ್. ಬಸವರಾಜು ತಿಳಿಸಿದರು.

ತಾಲೂಕಿನ ಬಸವಾಪುರ ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಬಸವಾಪುರ ಗ್ರಾಮದ ಡೇರಿ ಲಾಭದಲ್ಲಿದ್ದು, ರೈತರು ಗುಣಮಟ್ಟದ ಹಾಲು ಸಬರಾಜು ಮಾಡಿದ ಪರಿಣಾಮ ಡೇರಿ ಸ್ವಂತ ಕಟ್ಟಡವನ್ನು ಹೊಂದಲು ಸಾಧ್ಯವಾಗಿದೆ. ಚಾಮುಲ್ ರೈತರ ಸಂಸ್ಥೆಯಾಗಿದ್ದು, ನೀವುಗಳು ಡೇರಿಗೆ ಹಾಕುವ ಪ್ರತಿ ಲೀಟರ್ ಹಾಲು ಸಹ ಸಂಸ್ಕರಣೆ ಗೊಂಡು ಹಾಲು, ಮೊಸರು, ಮಜ್ಜಿಗೆ ತುಪ್ಪ, ಬೆಣ್ಣೆ ಸೇರಿದಂತೆ ನಂದಿನಿ ಉಪ ಉತ್ಪನ್ನಗಳಾಗುತ್ತದೆ. ಹೊರ ರಾಜ್ಯ ಹಾಗೂ ದೇಶಗಳಿಗೆ ಹಾಲು ಪೂರೈಕೆಯಾಗುತ್ತದೆ. ಡೇರಿ ಪ್ರಗತಿ ಯಿಂದ ರೈತರು ಹಾಗೂ ಗ್ರಾಮದ ಅಭಿವೃದ್ಧಿಯಾಗುತ್ತದೆ ಎಂದರು.

ಮತ್ತೋರ್ವ ನಿರ್ದೇಶಕ ಸದಾಶಿವಮೂರ್ತಿ ಮಾತನಾಡಿ, ಹೈನುಗಾರಿಕೆಯನ್ನು ವೈಜ್ಞಾನಿಕ ಪದ್ಧತಿ



ಹಾಗೂ ತಾಂತ್ರಿಕತೆಯನ್ನು ಅಳವಡಿಸಿಕೊಂಡು ರೈತರು ಮುನ್ನಡೆದರೆ ಹೆಚ್ಚಿನ ಲಾಭ ಪಡೆದುಕೊಳ್ಳಲು ಸಾಧ್ಯವಿದೆ. ಹಾಲು ಉತ್ಪಾದನೆ ಬಹಳಷ್ಟು ರೈತರಿಗೆ ಮುಖ್ಯ ಕಸುಬಾಗಿದೆ. ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುತ್ತದೆ ಎಂದರು. ಚಾಮುಲ್ ವ್ಯವಸ್ಥಾಪಕ ನಿರ್ದೇಶಕ ರಾಜಕುಮಾರ್ ಮಾತನಾಡಿ, ಚಾಮುಲ್ ಸ್ಥಾಪನೆಯಿಂದ ಜಿಲ್ಲೆಯ ಅಭಿವೃದ್ಧಿ ವೇಗ ಪಡೆದುಕೊಂಡಿದೆ. ಕುದೇರಿನಲ್ಲಿರುವ ಚಾಮುಲ್ ಘಟಕ ಪ್ರತಿ ದಿನ 3 ಲಕ್ಷ ಲೀಟರ್ ಹಾಲು ಸಂಗ್ರಹಿಸುವ ಜೊತೆಗೆ ಮುಂದಿನ ದಿನಗಳಲ್ಲಿ ಐಸ್‌ಕ್ರಿಂ ಘಟಕವನ್ನು ಸ್ಥಾಪನೆ ಮಾಡಲಿದೆ. ಬರ ಹಾಗೂ ಗಡಿ ಜಿಲ್ಲೆಗೆ ಹೈನುಗಾರಿಕೆಯಿಂದ ಹೆಚ್ಚಿನ ಲಾಭವಾಗುತ್ತಿದೆ. ಇದನ್ನು ರೈತರು ಇನ್ನು ಹೆಚ್ಚಿನ ರೀತಿಯಲ್ಲಿ ಅವಲಂಭಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಶಿವಣ್ಣ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪ್ರಭಾರ ವ್ಯವಸ್ಥಾಪಕ ಎಚ್.ಸಿ.ಶರತ್‌ಕುಮಾರ್, ಉಪವ್ಯವಸ್ಥಾಪಕ ಡಾ. ಅಮರ್, ವಿಸ್ತಾರಣಾಧಿಕಾರಿ ಭಾಗ್ಯರಾಜ್, ಸಂಘದ ಉಪಾಧ್ಯಕ್ಷ ನಾಗಯ್ಯ, ನಿರ್ದೇಶಕರಾದ ಪುಟ್ಟಲಿಂಗನಾಯಕ, ಗುರುಸ್ವಾಮಿ, ರಂಗಸ್ವಾಮಿ, ಮಹದೇವಸ್ವಾಮಿ, ಮಹದೇವೇಗೌಡ, ಮಹದೇವಯ್ಯ, ಮಹದೇವಸ್ವಾಮಿ, ರೇಖಾಮ್ಮ, ನಾಗರಾಜಮ್ಮ, ಜ್ಯೋತಿ, ಜಯಲಕ್ಷ್ಮಿ, ಸಿಇಓ ಮರಮ್ಮ, ಸಂಘದ ಸದಸ್ಯರು ಗ್ರಾಮಸ್ಥರು ಉಪಸ್ಥಿತರಿದ್ದರು.

# ಪ್ರಜಾಪ್ರಭುತ್ವ ಯುವಜನರ ಮೈಗೂಡಲಿ

ಗುಂಡ್ಲುಪೇಟೆ.:– ಪ್ರಜಾಪ್ರಭುತ್ವವೆಂದರೆ ಕೇವಲ ಮತದಾನ ಮಾಡುವುದಷ್ಟೇ ಅಲ್ಲ. ಸಂವಿಧಾನದ ಆಶಯಗಳನ್ನು ಅರಿತು, ಹಕ್ಕು ಮತ್ತು ಕರ್ತವ್ಯಗಳನ್ನು ಜವಾಬ್ದಾರಿಯುತವಾಗಿ ಪಾಲಿಸುವುದೇ ನಿಜವಾದ ಪ್ರಜಾಪ್ರಭುತ್ವ ಎಂದು ತಹಶೀಲ್ದಾರ್ ಎಂ.ಎಸ್. ತನ್ಮಯ್ ಹೇಳಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ತಾಲೂಕು ಆಡಳಿತ, ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಉನ್ನತ ಶಿಕ್ಷಣ ಇಲಾಖೆ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ?2026 ಹಾಗೂ 'ಯುವ ಸಂಸತ್ತು' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಇಂದಿನ ಮಕ್ಕಳು ಹಾಗೂ ಯುವಜನರಲ್ಲಿ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೌಲ್ಯಗಳ ಕುರಿತು ಅರಿವು ಮೂಡಿಸುವ ಉದ್ದೇಶದಿಂದ 'ಯುವ ಸಂಸತ್ತು' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಮುಖ್ಯ ಭಾಷಣಕಾರ ಡಾ. ಮನುಕುಮಾರ್ ಮಾತನಾಡಿ, ಸ್ವಾತಂತ್ರ್ಯ, ಸಮಾನತೆ, ಸೋದರತೆ ಹಾಗೂ ನ್ಯಾಯ ಪ್ರಜಾಪ್ರಭುತ್ವದ ಪ್ರಮುಖ



ಮೌಲ್ಯಗಳಾಗಿವೆ. ಅಮೆರಿಕದ ಮಾಜಿ ಅಧ್ಯಕ್ಷ ಅಬ್ರಹಾಂ ಲಿಂಕನ್ ಪ್ರತಿಪಾದಿಸಿದ 'ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಸರ್ಕಾರ' ಎಂಬ ಪರಿಕಲ್ಪನೆ ಪ್ರಜಾಪ್ರಭುತ್ವದ ಮೂಲ ಆಶಯವನ್ನು ಪ್ರತಿಬಿಂಬಿಸುತ್ತದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಆರ್. ಸ್ವಾಮಿ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಮೋಹನ್ ಕುಮಾರ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಸತೀಶ್, ಪ್ರಾಚಾರ್ಯ ಮದನ್ ಕುಮಾರ್, ಸಿಡಿಪಿಒ ಹೇಮಾವತಿ, ಸೋಮಹಳ್ಳಿ ರವಿ, ಮುತ್ತಣ್ಣ, ಮೋಹನ್, ಶಂಕರ, ಗುಂಡ್ಲುಪೇಟೆ ಮಹದೇವಯ್ಯ, ನಿಟ್ರೆ ಚಿಕ್ಕಣ್ಣ, ಬೆಳಚವಾಡಿ ಅಬ್ದುಲ್ ಮಾಲಿಕ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಸಂಘ–ಸಂಸ್ಥೆಗಳ ಮುಖಂಡರು ಉಪಸ್ಥಿತರಿದ್ದರು.

## ಜನರ ಭಾಗವಹಿಸುವಿಕೆಯೇ ಪ್ರಜಾಪ್ರಭುತ್ವವೇ ಶಕ್ತಿ: ಕೆ.ಶಿವಕುಮಾರ್




ಮೈಸೂರು: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರೇ ಪ್ರಮುಖರಾಗಿದ್ದು, 18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬ ನಾಗರಿಕನಿಗೂ ಮತದಾನದ ಹಕ್ಕು ಇದೆ. ಜನರ ಮತದಾನದ ಮೂಲಕವೇ ಜನಪ್ರತಿನಿಧಿಗಳ ಆಯ್ಕೆ ನಡೆಯುತ್ತಿದ್ದು, ಮತದಾನ ಮತ್ತು ಜನರ ಭಾಗವಹಿಸುವಿಕೆಯೇ ಪ್ರಜಾಪ್ರಭುತ್ವದ ಶಕ್ತಿ ಎಂದು ವಿಧಾನ ಪರಿಷತ್ ಸದಸ್ಯ ಕೆ. ಶಿವಕುಮಾರ್ ಹೇಳಿದರು.

ಕಲಾಮಂದಿರದ ಆವರಣದಲ್ಲಿ ಇರುವ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತವು ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ. ಮಹಾತ್ಮ ಗಾಂಧೀಜಿ, ಡಾ.ಬಿ.ಆರ್. ಅಂಬೇಡ್ಕರ್, ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭಭಾಯಿ ಪಟೇಲ್ ಸೇರಿದಂತೆ ಅನೇಕ ಮಹನೀಯರ ಹೋರಾಟದಿಂದ ಪ್ರಜಾಪ್ರಭುತ್ವದ ಅಡಿಪಾಯ ಗಟ್ಟಿಯಾಗಿದೆ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬಲಪಡಿಸುವುದು, ಹಕ್ಕುಗಳ ಜತೆಗೆ ಕರ್ತವ್ಯಗಳನ್ನು ಅರಿತುಕೊಳ್ಳುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾ ರಿಯಾಗಿದೆ. ಯುವಜನರು ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮಹತ್ವವನ್ನು ಅರಿತು ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್ ಮಾತನಾಡಿ, ಭಾರತದ ಬಲಿಷ್ಠ ಸಂವಿಧಾನ ನಾಗರಿಕರಿಗೆ ವಾಕ್ ಸ್ವಾತಂತ್ರ?ಯ, ಆಲೋಚನಾ ಸ್ವಾತಂತ್ರ?ಯ ಹಾಗೂ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕುಗಳನ್ನು ನೀಡಿದೆ. ಆದರೆ ಈ ಹಕ್ಕುಗಳನ್ನು ಜವಾಬ್ದಾರಿಯಿಂದ ಬಳಸಬೇಕು. ಸಾಮಾಜಿಕ ಜಾಲತಾಣಗಳಲ್ಲಿ ಸ್ವಾತಂತ್ರ?ಯದ ಹೆಸರಿನಲ್ಲಿ ವ್ಯಕ್ತಿಗಳ ಅಥವಾ ಮಹಾಪುರುಷರ ಅವಹೇಳನಕ್ಕೆ ಅವಕಾಶವಿಲ್ಲ ಎಂದರು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಐಶ್ವರ್ಯ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯ ಉಪ ನಿರ್ದೇಶಕ ಉದಯ್ ಕುಮಾರ್, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ರಂಗೇಗೌಡ, ಮುಖಂಡರಾದ ಜವರಪ್ಪ ಸೇರಿ ಮತ್ತಿತರು ಉಪಸ್ಥಿತರಿದ್ದರು.



# ನಾಗರಿಕರು ಹಕ್ಕುಗಳನ್ನು ಚಲಾಯಿಸಿ

## ಸಚಿವ ಎಚ್.ಸಿ. ಬಾಲಕೃಷ್ಣ ಹೇಳಿಕೆ | ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನ ಆಚರಣೆ

ರಾಮನಗರ: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳೇ ಪ್ರಭುಗಳು, ಜನರಿಂದ–ಜನರಿಗಾಗಿ–ಜನರಿಗೋಸ್ಕರ ಇರುವ ವ್ಯವಸ್ಥೆ. ಹೀಗಾಗಿ ನಾಗರೀಕರು ಜವಾಬ್ದಾರಿಯುತವಾಗಿ ತಮ್ಮ ಮತ ಹಕ್ಕನ್ನು ಚಲಾಯಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚೀವರೂ ಆಗಿರುವ ಪೌರಾಡಳಿತ ಸಚಿವ ಎಚ್.ಸಿ.ಬಾಲಕೃಷ್ಣ ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ, ಉನ್ನತ ಶಿಕ್ಷಣ ಇಲಾಖೆ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಸಹಯೋಗದೊಂದಿಗೆ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಅಂಗವಾಗಿ ಆಯೋಜಿಸಲಾಗಿದ್ದ ಯುವ ಸಂಸತ್ತು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಸ್ಪರ್ಧೆಗಳಿಗೆ ಬೋಧಿವೃಕ್ಷಕ್ಕೆ ನೀರೆರೆಯುವ ಹಾಗೂ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಡಾ. ಬಿ.ಆರ್. ಅಂಬೇಡ್ಕರ್‌ರವರು ಬೃಹತ್ ಸಂವಿಧಾನವನ್ನು ಕೊಡುಗೆಯಾಗಿ ನೀಡಿದ್ದಾರೆ. ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ, ಹಾಗೂ ಹಕ್ಕುಗಳನ್ನು ಗೌರವಿಸಿ, ಸಂವಿಧಾನದ ಆಶಯಗಳನ್ನು ಪಾಲಿಸಬೇಕು. ಮನುಷ್ಯ ಹುಟ್ಟಿನಿಂದಾಗಿ ಸಾವಿನವರೆಗೂ ಹಾಗೂ



ತಮ್ಮ ಜೀವಿತದ ಪ್ರತಿಯೊಂದು ಹಂತದಲ್ಲೂ ಸಂವಿಧಾನವನ್ನು ಪಾಲಿಸಿ, ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನಾ ಅನುದಾನ ಸಮಿತಿ ಅಧ್ಯಕ್ಷರಾದ ಕೆ. ರಾಜು, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಕೆ. ಕೆಂಪಯ್ಯ, ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅನ್ಮೋಲ್ ಜೈನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ಉಪ ಅರಣ್ಯ ಸಂರಕ್ಷಣಾಧಿಕಾರಿ ರಾಮಕೃಷ್ಣ, ಅಪರ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಧನರಾಜ್, ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಬೋರೇಗೌಡ ಅವರು ಸ್ವಾಗತಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ. ಸತೀಶ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಕುಮಾರ್ ಎಚ್.ಎಸ್. ಅವರು ಸಂವಿಧಾನ ಪೀಠಿಕೆ ಬೋಧಿಸಿದರು ಹಾಗೂ ವಂದಿಸಿದರು. ನಿವೃತ್ತ ಶಿಕ್ಷಕರಾದ ನಾರಾಯಣಪ್ಪ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ವಿಷಯದ ಕುರಿತು ಉಪನ್ಯಾಸ ನೀಡಿದರು.

### ಮೂರ ಹಂತಗಳಲ್ಲಿ ಸರ್ಕಾರ

**ನಮ್ಮ ರಾಷ್ಟ್ರದಲ್ಲಿ ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸಂಸ್ಥೆ ಎಂಬ ಮೂರು ಹಂತದ ಸರ್ಕಾರಗಳಿವೆ. ಈ ಸರ್ಕಾರಿ ವ್ಯವಸ್ಥೆಯಲ್ಲಿ ಆರಿಸಿ ಬಂದ ಜನಪ್ರತಿನಿಧಿಗಳು, ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ ಪರಿಹಾರ ನೀಡಬೇಕು ಇದು ಸಾಂವಿಧಾನಿಕ ಹೊಣೆ ಎಂದರು.**

### ಯುವ ಸಂಸತ್: ತಾಲ್ಲೂಕು, ಜಿಲ್ಲಾ ಮಟ್ಟದ ಸ್ಪರ್ಧೆ

**ಯುವ ಜನರಿಗೆ ಸಂಸತ್ತಿನ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ತಿಳಿಸಲು ಯುವ ಸಂಸತ್, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಸ್ಪರ್ಧೆಯನ್ನು ಆಯೋಜಿಸಲಾಗಿದ್ದು, ಇದರಲ್ಲಿ ಭಾಗವಹಿಸಿ, ಉತ್ತಮ ವಿಷಯ ಮಂಡನೆ ಮಾಡಿದವರಿಗೆ ಬಹುಮಾನ ನೀಡಲಾಗುವುದು ಎಂದು ಹೇಳಿದರು**

### ಸಂವಿಧಾನದ ಆಶಯವನ್ನು ಈಡೇರಿಸಿ

**ಶಾಸಕ ಇಕ್ಬಾಲ್ ಹುಸೇನ್**

**ರಾಮನಗರ ವಿಧಾನಸಭಾ ಕ್ಷೇತ್ರ ಶಾಸಕರಾದ ಎಚ್.ಎ. ಇಕ್ಬಾಲ್ ಹುಸೇನ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ಮಾತನಾಡಿ, ಸಂವಿಧಾನದ ಆಶಯದಂತೆ ಪ್ರತಿಯೊಬ್ಬರೂ ಬದುಕಬೇಕು ಹಾಗೂ ಸಂವಿಧಾನವನ್ನು ರಕ್ಷಿಸುವುದು ಪ್ರತಿಯೊಬ್ಬ ನಾಗರಿಕರಿಕನ ಜವಾಬ್ದಾರಿಯಾಗಿದೆ. ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ದೇಶದ ಅಭಿವೃದ್ಧಿ ಶಾಂತಿ ಮತ್ತು ನೆಮ್ಮದಿಗಾಗಿ ವಿದ್ಯಾರ್ಥಿಗಳು ವಿದ್ಯಾವಂತರಾಗಿ, ಜ್ಞಾನವಂತರಾಗಿ ಹಾಗೂ ಪ್ರಜ್ಞಾವಂತ ನಾಗರೀಕರಾಗಿ ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ತಿಳಿಸಿದರು.**

# 61ನೇ ವರ್ಷದ ಗಣೇಶ ಮೆರವಣಿಗೆ



ಗುಂಡ್ಲುಪೇಟೆ: ಪಟ್ಟಣದ ಅಂಗಡಿ ಬೀದಿಯಲ್ಲಿ 61ನೇ ವರ್ಷದ ಅದ್ದೂರಿ ಗಣೇಶೋತ್ಸವದ ಅಂಗವಾಗಿ ಗಣೇಶ ಮೂರ್ತಿಯನ್ನು ಭವ್ಯ ಮೆರವಣಿಗೆಯ ಮೂಲಕ ಸಾಗಿಸಲಾಯಿತು.

ಮೆರವಣಿಗೆಯುದ್ದಕ್ಕೂ ಭಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಗಣೇಶನ ದರ್ಶನ ಪಡೆದು ಭಕ್ತಿಭಾವ ಮೆರೆದರು.

ವಾದ್ಯಗಳ ನಾದ, ಜೈಕಾರದ ಘೋಷಣೆ ಹಾಗೂ ಸಂಭ್ರಮದ ವಾತಾವರಣದ ನಡುವೆ ಮೆರವಣಿಗೆ ಸಾಗಿದ್ದು, ಅಂಗಡಿ ಬೀದಿಯು ಹಬ್ಬದ ವಾತಾವರಣದಿಂದ ಕಳೆಗಟ್ಟಿತ್ತು. ಗಣೇಶೋತ್ಸವ ಸಮಿತಿಯ ಹಿರಿಯ ಮುಖಂಡರು ಮತ್ತು ಪದಾಧಿಕಾರಿಗಳು ಹಾಗೂ ಭಕ್ತರು ಮೆರವಣಿಗೆಯನ್ನು ಯಶಸ್ವಿಗೊಳಿಸಿದರು

# ಜಿಲ್ಲಾ ಕಾಂಗ್ರೆಸ್ ನೂತನ ಕಟ್ಟಡ ಪರಿಶೀಲಿಸಿದ ಮಾಜಿ ಸಿಎಂ

ಮೈಸೂರು: ರೈಲ್ವೆ ನಿಲ್ದಾಣದ ಸಮೀಪದಲ್ಲಿ ನಿರ್ಮಾಣ ಹಂತದಲ್ಲಿರುವ ನೂತನ ಕಾಂಗ್ರೆಸ್ ಕಚೇರಿ ಕಟ್ಟಡ ಕಾಮಗಾರಿಯನ್ನು ಮಂಗಳವಾರ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡಿ ಪರಿಶೀಲಿಸಿದರು.

ಈ ವೇಳೆ ಸಿದ್ದರಾಮಯ್ಯ ಪರ ನಾನಾ ಘೋಷಣೆಗಳನ್ನು ಕೂಗಿದ ಕಾರ್ಯಕರ್ತರು ಅವರನ್ನು ಅದ್ದೂರಿಯಾಗಿ ಬರ ಮಾಡಿಕೊಂಡರು. ಬಳಿಕ ಕಾಮಗಾರಿಯ ಪ್ರಗತಿ ಕುರಿತು ಶಾಸಕ ತನ್ವೀರ್‌ಸೇಠ್ ಹಾಗೂ ಜಿಲ್ಲಾ ಗ್ರಾಮಾಂತರ ನಿಕಟ ಪೂರ್ವ ಅಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್ ಸಿದ್ದರಾಮಯ್ಯರಿಗೆ ವಿವರಿಸಿದರು. ಎಲ್ಲವನ್ನು ಆಲಿಸಿದ ಮಾಜಿ ಸಿಎಂ ಸಿದ್ದರಾಮಯ್ಯ ಗುಣಮಟ್ಟದ ಕಾಮಗಾರಿ ನಡೆಸಿ ತ್ವರಿತವಾಗಿ ಕಟ್ಟಡ ಲೋಕಾರ್ಪಣೆಗೆ ಸಿದ್ಧಗೊಳಿಸುವಂತೆ ಸೂಚಿಸಿದರು.

ಇದೇ ವೇಳೆ ಮಾಧ್ಯಮಗಳಿಗೆ ಯಾವುದೇ ಪ್ರತಿಕ್ರಿಯೆ ನೀಡಲು ನಿರಾಕರಿಸಿದರು.

ಶಾಸಕ ಕೆ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಬೀರಿಹುಂಡಿ ಬಸವಣ್ಣ, ನಗರಾಧ್ಯಕ್ಷ ಆರ್.ಮೂರ್ತಿ, ನಗರ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಕೆಪಿಸಿಸಿ ಸಂಯೋಜಕ ಎನ್.ಭಾಸ್ಕರ್, ನಗರಪಾಲಿಕೆ ಮಾಜಿ ಸದಸ್ಯ ಗೋಪಿ, ಡೈರಿ ವೆಂಕಟೇಶ್, ಬಸವಣ್ಣ, ಶಿವಪ್ರಸಾದ್, ಈಶ್ವರ್ ಚಕ್ಕಡಿ, ಮೋದಾಮಣಿ, ಒಬಿಸಿ ನಗರ ಮೋರ್ಚಾ ಅಧ್ಯಕ್ಷ ನಾಗೇಶ್, ಚಾಮುಂಡೇಶ್ವರಿ ಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರುಸ್ವಾಮಿ, ಕೆ.ಆರ್.ಕ್ಷೇತ್ರದ ಮೋಹನ್ ಮುಂತಾದವರಿದ್ದರು.



## ಮಾಜಿ ಮೇಯರ್ ಸಂದೇಶ್ ಸ್ವಾಮಿ ಕರೆ

# ಸರ್‌ಎಂವಿ ಆದರ್ಶ ಯುವಜನತೆಗೆ ತಲುಪಲಿ

ಮೈಸೂರು: ಮುಂದಿನ ಪೀಳಿಗೆಗೆ ಸರ್. ಎಂ. ವಿಶ್ವೇಶ್ವರಯ್ಯರ ಕೊಡುಗೆಗಳನ್ನು ಸ್ಮರಿಸುವ ನಿಟ್ಟಿನಲ್ಲಿ ಅವರ ಪ್ರತಿಮೆಯನ್ನು ಸರ್ಕಾರದವತಿಯಿಂದ ನಿರ್ಮಿಸಲಿ ಎಂದರು ಮಾಜಿ ಮೇಯರ್ ಸಂದೇಶ್ ಸ್ವಾಮಿ ತಿಳಿಸಿದರು.

ಜೀವದಾರ ರಕ್ತ ನಿಧಿ ಕೇಂದ್ರ ಹಾಗೂ ಸರ್ ಎಂವಿ ಅಭಿಮಾನಿ ಬಳಗದಿಂದ ದಿವಾನ್ ಸರ್.ಎಂ.ವಿಶ್ವೇಶ್ವರಯ್ಯರ 166ನೇ ಜಯಂತಿಯ ಅಂಗವಾಗಿ ಸಯ್ಯಾಜಿರಾವ್ ರಸ್ತೆಯಲ್ಲಿರುವ ಸರ್. ಎಂ.ವಿ ವೃತ್ತದಲ್ಲಿ ಸರ್ ಎಂವಿ ಭಾವಚಿತ್ರ ಹಿಡಿದು ಮೈಸೂರು ಪಾಕ್ ವಿತರಿಸಿ ಮಾತನಾಡಿದರು. ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜೊತೆಗೂಡಿ ಆಧುನಿಕ ಮೈಸೂರು ರಾಜ್ಯದ ನಿರ್ಮಾತೃ ಸರ್.ಎಂ.ವಿಶ್ವೇಶ್ವರಯ್ಯ ಮೈಸೂರಿನ ಅಭಿವೃದ್ಧಿಗಾಗಿ ಹಲವಾರು




ಯೋಜನೆಗಳನ್ನ ಜಾರಿಗೆ ತಂದು ಕನ್ನಡಿಗರ ಜನಮನದಲ್ಲಿ ಶಾಶ್ವತವಾಗಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯ, ಕೆ.ಆರ್.ಎಸ್ ಜಲಾಶಯ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಮೈಸೂರು ಸ್ಯಾಂಡಲ್ ಸೋಪ್ ಸೇರಿ ಎಲ್ಲಾ ಕ್ಷೇತ್ರದಲ್ಲೂ ಮೈಸೂರನ್ನು ಅಭಿವೃದ್ಧಿಗೊಳಿಸಿದ್ದಾರೆ. ಆದರೆ, ಅವರ ಜಯಂತಿಯನ್ನು ಆಚರಿಸಲು ಮೈಸೂರು ಜಿಲ್ಲಾಡಳಿತ ನಗರಪಾಲಿಕೆ ಮುಂದಾಗದಿರುವುದು ಶೋಚನೀಯ. ಮೈಸೂರಿನ ಮಹಾಪೌರನಾಗಿದ್ದಾಗ ನಾನು ಸರ್.ಎಂ.ವಿ ವೃತ್ತದಲ್ಲಿ ಅವರ ಪ್ರತಿಮೆ ನಿರ್ಮಾಣಕ್ಕೆ ಗುದ್ದಲಿ ಪೂಜೆ ನಡೆಸಿದ್ದೆನು. ಆದರೆ, ಕೆಲವರ ದುಷ್ಟ ಬೆಳವಣಿಗೆಯಿಂದ ಕೈತಪ್ಪಿತೆಂದು ಸ್ಮರಿಸಿದರು.

ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್ ಮಾತನಾಡಿದರು. ನಗರಪಾಲಿಕೆ ಮಾಜಿ ಸದಸ್ಯರಾದ ಮಾ.ವಿ.ರಾಮ್ ಪ್ರಸಾದ್, ಎಂ.ಡಿ.ಪಾರ್ಥಸಾರಥಿ, ಜಗದೀಶ್, ಎಂ.ಚಿಕ್ಕವೆಂಕಟು, ಗುರುವಿನಾಯಕ, ಜೀವಾಧಾರ ರಕ್ತನಿಧಿ ಕೇಂದ್ರ ಜೀವದಾರ ಗಿರೀಶ್, ಜೋಗಿ ಮಂಜು, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕ ಎ.ರವಿ. ನಿರೂಪಕ ಅಜಯ್ ಶಾಸ್ತ್ರಿ, ವಿದ್ವಾನ್ ಕೃಷ್ಣಮೂರ್ತಿ, ಜಯಸಿಂಹ, ವಿಜಯ್ ಕುಮಾರ್, ಶಿವರಾಜ್, ಎಸ್. ಎನ್.ರಾಜೇಶ್, ಎಂ.ಪಿ.ಸಚಿನ್ ನಾಯಕ್, ಸುಚೇಂದ್ರ, ಗೋಪಾಲ್, ಶ್ರೀಕಂಠ ಕೌಶಿಕ್ ಇನ್ನಿತರರು ಭಾಗವಹಿಸಿದ್ದರು.

# ನಿವೇಶನಕ್ಕಾಗಿ ಆಗ್ರಹಿಸಿ ವಿಶೇಷಚೇತನರ ಪ್ರತಿಭಟನೆ

**ಮೈಸೂರು:** ನಗರದ ಹೊರವಲಯ ದಡದಹಳ್ಳಿ ಸರ್ವೆ ನಂ.66 ರಲ್ಲಿ ವಿಶೇಷ ಚೇತನರ ನಿವೇಶನಕ್ಕಾಗಿ ಒಂದು ವರ್ಷದ ಹಿಂದೆ ಮೈಸೂರು ಜಿಲ್ಲಾಧಿಕಾರಿಗಳು ಮೀಸಲಿಟ್ಟಿರುವ ಸುಮಾರು 4 ಎಕರೆ ಜಮೀನನ್ನು ಮಹಾನಗರಪಾಲಿಕೆ ಇದುವರೆಗೂ ಅಭಿವೃದ್ಧಿಪಡಿಸಿಲ್ಲ ಎಂದು ಆರೋಪಿಸಿ ಸ್ವಾಭಿಮಾನಿ ವಿಶೇಷಚೇತನರ ಹಕ್ಕುಗಳ ಹೋರಾಟ ಸಮಿತಿ ನಗರದಲ್ಲಿ ಪ್ರತಿಭಟಿಸಿತು.

ಮಂಗಳವಾರ ಮಹಾನಗರಪಾಲಿಕೆ ಕಚೇರಿ ಎದುರು ನೂರಕ್ಕೂ ಹೆಚ್ಚು ವಿಶೇಷಚೇತನರು ನಾನಾ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು. ಈ ಸಂದರ್ಭದಲ್ಲಿ ಸಮಿತಿಯ ಗೌರವಾಧ್ಯಕ್ಷ ಪ್ರಭುಸ್ವಾಮಿ ಮಾತನಾಡಿ, ನಗರದ ಸುಮಾರು ಮುನ್ನೂರಕ್ಕೂ ಹೆಚ್ಚು ನಿವೇಶನರಹಿತ ವಿಶೇಷ ಚೇತನರು ಹತ್ತಾರು ವರ್ಷಗಳಿಂದ ನಿವೇಶನ ನೀಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು, ದೆಹಲಿಯ ಜಂತರ್ ಮಂತರ್‌ನಲ್ಲೂ ಹೋರಾಟ ನಡೆಸಿದ್ದೆವು, ಇದರ ಪರಿಣಾಮ ಮೈಸೂರು ಜಿಲ್ಲಾಧಿಕಾರಿಗಳು ವಿಶೇಷ ಚೇತನರ ನಿವೇಶನಕ್ಕಾಗಿ ದಡದಹಳ್ಳಿ ಸರ್ವೆ 66 ರಲ್ಲಿ 4 ಎಕರೆ ಜಮೀನು ಕಾಯ್ದಿರಿಸಿದ್ದರು. ಆದರೆ ಒಂದು ವರ್ಷವಾದರೂ ಆ ಜಮೀನಿನಲ್ಲಿ ನಿವೇಶನ ನಿರ್ಮಾಣದ ಯಾವ




ಮುನ್ಸೂಚನೆಯೂ ಕಾಣುತ್ತಿಲ್ಲ, ನಮ್ಮ ಸಂಘದ ಸುಮಾರು 7 ಜನ ನಿವೇಶನ ಆಕಾಂಕ್ಷಿಗಳು ಮರಣಹೊಂದಿದ್ದಾರೆ. ಆದರೂ ನಿವೇಶನಗಳನ್ನು ಪಾಲಿಕೆ ನೀಡುತ್ತಿಲ್ಲ, ಕನಿಷ್ಠ ಯಾವ ಹಂತದಲ್ಲಿದೆ ಎಂಬುದೂ ತಿಳಿಯುತ್ತಿಲ್ಲ, ಈ ಕಾರಣಕ್ಕಾಗಿ ಇಂದು ಅನಿರ್ಧಿಷ್ಟಾವಧಿ ಮುಷ್ಕರ ಕೈಗೊಂಡಿದ್ದೇವೆ. ನಮಗೆ ಲಿಖಿತ ರೂಪದಲ್ಲಿ ಭರವಸೆ ನೀಡುವತನಕವೂ ನಾವು ಇಲ್ಲಿಂದ ಕದಲುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಸಮಿತಿ ಕಾರ್ಯದರ್ಶಿ ದಿಲೀಪ್ ಇನ್ನಿತರರು ಇದ್ದರು.

# ಶ್ರೀಸಿಂಹರೂಢ ವೀರ ಗಣಪತಿಮೂರ್ತಿ ಪ್ರತಿಷ್ಠಾಪನೆ

## ಸದ್ಯದಲ್ಲೇ ವೇದಿಕೆ ಕಾರ್ಯಕ್ರಮ, ಗಣಪತಿ ಮೂರ್ತಿ ವಿಸರ್ಜನೆಗೆ ದಿನಾಂಕ ನಿಗದಿ: ನವೀನ್ ಕುಮಾರ್



ಚಾಮರಾಜನಗರ: ಗಣೇಶ ಚತುರ್ಥಿ ಅಂಗವಾಗಿ ನಗರದ ರಥದ ಬೀದಿಯಲ್ಲಿ ಶ್ರೀವಿದ್ಯಾಗಣಪತಿ ಮಂಡಳಿ ವತಿಯಿಂದ ನಗರದ ಗುರುನಂಜಶೆಟ್ಟಿ ಛತ್ರದ ಮುಂಭಾಗದಲ್ಲಿ 64ನೇ ವರ್ಷದ ಶ್ರೀಸಿಂಹರೂಢ ವೀರ ಗಣೇಶಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು.

ಹೆಚ್ಚುವರಿ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಶಶಿಧರ್, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ನಗರಸಭಾ ಮಾಜಿ ಅಧ್ಯಕ್ಷರಾದ ಸುರೇಶ್, ಸುರೇಶ್‌ನಾಯಕ, ಮಾಜಿ ಚುಡಾ ಅಧ್ಯಕ್ಷರಾದ ಶಾಂತಮೂರ್ತಿ ಕುಲಗಾಣ, ಬಾಲಸುಬ್ರಹ್ಮಣ್ಯ, ಶ್ರೀನಿವಾಸಗೌಡ, ಡಾ. ಎ.ಆರ್.ಬಾಬು, ಮುಖಂಡರಾದ ಬಂಗಾರಸ್ವಾಮಿನಾಯಕ, ಮೂಡ್ನಾಕೂಡ ಪ್ರಕಾಶ್, ನಗರಸಭಾ ಮಾಜಿ ಸದಸ್ಯರಾದ ಶಿವಣ್ಣ, ಸುದರ್ಶನಗೌಡ, ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ಮೂಡ್ಲುಪುರನಂದೀಶ್, ಉದ್ಯಮಿ ಶ್ರೀನಿಧಿಕುದರ್, ಪ್ರತಾಪ್ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಗಮನ ಸೆಳೆದರು. ಇದಕ್ಕೂ ಮುನ್ನಾ ನಗರದ ಸಂತೇಮರಹಳ್ಳಿ ರಸ್ತೆಯಲ್ಲಿರುವ ಆದಿಶಕ್ತಿ ದೇವಸ್ಥಾನದಿಂದ ಸಂತೇಮರಹಳ್ಳಿ ವೃತ್ತ, ಚಿಕ್ಕಂಗಡಿ ಬೀದಿ, ನಗರಸಭೆ ಕಚೇರಿ, ರಥಬೀದಿಯವರಗೆ ಮೆರವಣಿಗೆ ನಡೆಸಿ, ಪ್ರತಿಷ್ಠಾಪಿಸಿ, ಪೂಜೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀವಿದ್ಯಾ ಗಣಪತಿ ಮಂಡಳಿ ಅಧ್ಯಕ್ಷ ನವೀನ್ ಕುಮಾರ್ ಮಾತನಾಡಿ, ಪ್ರತಿ ವರ್ಷದಂತೆ ಒಂದಲ್ಲ ಒಂದು ವೈವಿದ್ಯಮಯ ಗಣಪತಿ ಪ್ರತಿಷ್ಠಾಪನೆ ಮಾಡಿಕೊಂಡು ಬಂದಿದ್ದು, ಈ ಬಾರಿಯೂ ಶ್ರೀಸಿಂಹರೂಢ ವೀರ ಗಣಪತಿ ಪ್ರತಿ ಪ್ರತಿಷ್ಠಾಪಿಸಲಾಗಿದೆ. ಕಳೆದ 64 ವರ್ಷಗಳಿಂದ ವಿಜೃಂಭಣೆಯಿಂದ ಗಣಪತಿ ಮೂರ್ತಿ ಪ್ರತಿಷ್ಠಾಪಿಸಿ ಕೊಂಡು ಬರಲಾಗಿದ್ದು,ಸದ್ಯದಲ್ಲೇ ವೇದಿಕೆ ಕಾರ್ಯಕ್ರಮಗಳು, ಗಣಪತಿಮೂರ್ತಿ ವಿಸರ್ಜನೆಗೆ ದಿನಾಂಕ ನಿರ್ಧರಿಸಲಾಗುವುದು ಎಂದರು ಶ್ರೀವಿದ್ಯಾಗಣಪತಿ ಮಂಡಳಿ ಗೌರವಾಧ್ಯಕ್ಷ ಗುರುನಾಥ್, ಗೌರವ ಕಾರ್ಯದರ್ಶಿ ಮಾದ, ಕಾರ್ಯಾಧ್ಯಕ್ಷ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಆನಂದ್‌ಭಗೀರಥ, ರಾಜು ಭಕ್ತ, ಖಜಾಂಚಿ ಮನೋಜ್‌ಪಟೇಲ್, ಉಪಾಧ್ಯಕ್ಷ ಬುಲೆಟ್‌ಚಂದು, ಶಂಕರ್, ಶಿವರಾಜು, ಮಣಿಕಂಠ, ರಮೇಶ್, ರಂಗಸ್ವಾಮಿ, ಗಿರೀಶ್‌ರಾಮಸಮುದ್ರ, ಮಂಜು ಇತರರು ಭಾಗವಹಿಸಿದ್ದರು.

# 15 ಅಡಿ ಗಣೇಶ ಪ್ರತಿಷ್ಠಾಪನೆ





ಸರಗೂರು: ತಾಲೂಕಿನ ಸಮೀಪದ ಕೆ.ಬೆಳತ್ತೂರು ಗ್ರಾಮದಲ್ಲಿ 11ನೇ ವರ್ಷದ ಗಣೇಶ ಪ್ರತಿಷ್ಠಾನೆ ಅಂಗವಾಗಿ, ಸರ್ಕಲ್ ಬಾಯ್ಸ್ ಅವರು ಹದಿನೈದು ಅಡಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿದರು.

ಗ್ರಾಮದ ಯುವಕರಾದ ಗೋಪಾಲ್ ರಾಜ್, ಪ್ರತಾಪ್,ಹರೀಶ್, ಭರತ್ ವಾಸು, ನಾಗರಾಜು, ಕಿಚ್ಚ ಅಮಿತ್, ವಿಶಾಲ್, ಮೋಹನ್ ರಾಜ್, ಚಿದನ್, ಮನೋಜ್, ಗುರುಸಿದ್ದ, ಶಿವು, ಕುಮಾರ, ಹರ್ಷ, ಮಧು, ದೀಪಕ್, ಲೋಕೇಶ್, ಆಕಾಶ್ , ಮಹೇಶ್ ಜಿಂಗ್ಗಾ, ಕಾಂತನಾಯಕ, ಸುರೇಶ್, ದೀಪು, ಸಿದ್ದರಾಜು, ಶ್ರೀಕಾಂತ್, ಚಿದನ್ ಸೇರಿದಂತೆ ಅನೇಕರು ಇದ್ದಾರೆ.

# ಗಣೇಶ ಹಬ್ಬದಂದೇ ಕಾಡಾನೆ ದಾಳಿ: ರೈತ ಬಲಿ

## ಕೋಟೆಕೆರೆ ಗ್ರಾಮದಲ್ಲಿ ಮುಂಜಾನೆ ಘಟನೆ । 20 ಲಕ್ಷ ಪರಿಹಾರ ಘೋಷಣೆ

ಗುಂಡ್ಲುಪೇಟೆ: ಗಣೇಶ ಹಬ್ಬದ ಸಂಭ್ರಮದಲ್ಲಿದ್ದ ಕೋಟೆಕೆರೆ ಗ್ರಾಮದಲ್ಲಿ ಸೋಮವಾರ ಮುಂಜಾನೆ ಕಾಡಾನೆ ದಾಳಿ ನಡೆಸಿ ರೈತನೊಬ್ಬ ಮೃತಪಟ್ಟಿರುವ ಹೃದಯವಿದ್ರಾವಕ ಘಟನೆ ನಡೆದಿದೆ.

ಕೋಟೆಕೆರೆ ಗ್ರಾಮದ ರೈತ ಜನ್ನೂರ ನಾಯಕ ಬಿನ್ ಚನ್ನನಾಯಕ (62) ಅವರು ಸೋಮವಾರ ಬೆಳಗ್ಗೆ ತಮ್ಮ ಜಮೀನಿನಲ್ಲಿ ಕೆಲಸಕ್ಕೆ ತೆರಳಿದ್ದರು. ಈ ವೇಳೆ ಜಮೀನಿನಲ್ಲಿ ಸಂಗ್ರಹಿಸಿಟ್ಟಿದ್ದ ಮೆಕ್ಕೆಜೋಳದ ಕಡ್ಡಿಯ ಮೆದೆ ಬಳಿ ಶಬ್ದ ಕೇಳಿಬಂದ ಹಿನ್ನೆಲೆಯಲ್ಲಿ ಅಲ್ಲಿಗೆ ತೆರಳಿದಾಗ, ಕಾಡಾನೆ ಮೆಕ್ಕೆಜೋಳವನ್ನು ಮೇಯುತ್ತಿರುವುದು ಕಂಡುಬಂದಿದೆ.

ಕಾಡಾನೆಯನ್ನು ಓಡಿಸಲು ಜನ್ನೂರ ನಾಯಕ ಯತ್ನಿಸಿದಾಗ, ಏಕಾಏಕಿ ಕಾಡಾನೆ ಅವರ ಮೇಲೆ ದಾಳಿ ನಡೆಸಿ ಎತ್ತಿ ಬಿಸಾಕಿದೆ. ದಾಳಿಯಿಂದ ಗಂಭೀರವಾಗಿ ಗಾಯಗೊಂಡು ನಿತ್ರಾಣಗೊಂಡಿದ್ದ ರೈತನನ್ನು ಕಂಡು ಅವರ ಅಳಿಯ ಸ್ಥಳಕ್ಕೆ ಧಾವಿಸಿದಾಗ, ಕಾಡಾನೆ ಅಲ್ಲಿಂದ ಕಾಡಿನತ್ತ ಓಡಿ ಹೋಗಿದೆ.

ತಕ್ಷಣ ಅರಣ್ಯ ಇಲಾಖೆಯ ಜೀಪಿನಲ್ಲಿ ಗಾಯಾಳುವನ್ನು ಬೇಗೂರು ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ನೀಡಲಾಯಿತು. ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ, ಆಸ್ಪತ್ರೆ ತಲುಪಿದ ನಂತರ ವೈದ್ಯರು ಪರೀಕ್ಷಿಸಿ ಜನ್ನೂರ ನಾಯಕ ಮೃತಪಟ್ಟಿರುವುದಾಗಿ ತಿಳಿಸಿದ್ದಾರೆ.



**ಅರಣ್ಯ ಇಲಾಖೆ ವಿರುದ್ಧ ರೈತರ ಆಕ್ರೋಶ**

ಘಟನೆ ಸುದ್ದಿ ತಿಳಿಯುತ್ತಿದ್ದಂತೆ ರೈತ ಮುಖಂಡರು ಓಂಕಾರ್ ವಲಯಾಧಿಕಾರಿ ಕಚೇರಿ ಮುಂದೆ ಜಮಾಯಿಸಿ ಅರಣ್ಯ ಇಲಾಖೆ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕಾಡುಪ್ರಾಣಿಗಳ ನಿಯಂತ್ರಣಕ್ಕೆ ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಳ್ಳದಿರುವುದರಿಂದ ಅವು ಗ್ರಾಮಗಳತ್ತ ನುಗ್ಗುತ್ತಿವೆ. ರೈತರು ಬೆಳೆದ ಬೆಳೆಗಳನ್ನು ನಾಶಪಡಿಸುವುದರ ಜೊತೆಗೆ ಇದೀಗ ರೈತರ ಮೇಲೂ ದಾಳಿ ನಡೆಸುತ್ತಿವೆ ಎಂದು ರೈತರು ಅಸಮಾಧಾನ ವ್ಯಕ್ತಪಡಿಸಿದರು.

ಕಾಡುಪ್ರಾಣಿಗಳ ಚಲನವಲನವನ್ನು ಡ್ರೋಣ್ ಮೂಲಕ ನಿರಂತರವಾಗಿ ಮೇಲ್ವಿಚಾರಣೆ ನಡೆಸಬೇಕು. ಕಾಡಾನೆಗಳು ಹಾಗೂ ಇತರೆ ಕಾಡುಪ್ರಾಣಿಗಳು ನಾಡಿನತ್ತ ಮುಖ ಮಾಡುವ ಮುನ್ನವೇ ಅವುಗಳನ್ನು ಕಾಡಿನತ್ತ ಓಡಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ರೈತರ ಸಮಸ್ಯೆಗಳಿಗೆ ಅರಣ್ಯ ಇಲಾಖೆ ತುರ್ತಾಗಿ ಸ್ಪಂದಿಸುವುದರ ಜೊತೆಗೆ ಪರಿಹಾರವನ್ನು ವಿಳಂಬವಿಲ್ಲದೆ ನೀಡಬೇಕು ಎಂದು ರೈತ ಮುಖಂಡರು ಒತ್ತಾಯಿಸಿದರು

**20 ಲಕ್ಷ ಪರಿಹಾರ ಘೋಷಣೆ**

ಈ ಕುರಿತು ಪ್ರತಿಕ್ರಿಯಿಸಿದ ಓಂಕಾರ್ ವಲಯದ ಅರಣ್ಯಾಧಿಕಾರಿ ಹನುಮಂತಪ್ಪ ಪಾಟೀಲ್, ಕೋಟೆಕೆರೆ ಗ್ರಾಮದ ರೈತ ಜನ್ನೂರ ನಾಯಕ ಅವರು ಕಾಡಾನೆ ದಾಳಿಗೆ ಮೃತಪಟ್ಟಿರುವುದನ್ನು ದೃಢಪಡಿಸಿದರು.

ಜಮೀನಿನಲ್ಲಿ ಕಾಡಾನೆ ಕಾಣಿಸಿಕೊಂಡಾಗ ಅದನ್ನು ಓಡಿಸಲು ಯತ್ನಿಸಿದ ಸಂದರ್ಭದಲ್ಲಿ ಒಂಟಿ ಕಾಡಾನೆ ರೈತನ ಮೇಲೆ ದಾಳಿ ನಡೆಸಿದೆ. ಮೃತರ ಕುಟುಂಬಕ್ಕೆ ಅರಣ್ಯ ಇಲಾಖೆಯಿಂದ ?20 ಲಕ್ಷ ಪರಿಹಾರ ನೀಡಲಾಗುವುದು ಎಂದು ಅವರು ತಿಳಿಸಿದರು. ಗಣೇಶ ಹಬ್ಬದ ದಿನವೇ ನಡೆದ ಈ ದುರಂತದಿಂದ ಕೋಟೆಕೆರೆ ಗ್ರಾಮದಲ್ಲಿ ಶೋಕದ ವಾತಾವರಣ ನಿರ್ಮಾಣವಾಗಿದೆ.

# ಇಲಾಖೆ ನಿರ್ಲಕ್ಷ್ಯದಿಂದ ಸಾವು

## ಸಿ.ಎಸ್. ನಿರಂಜನ್‌ಕುಮಾರ್ ಆರೋಪ । ಶವಾಗಾರಕ್ಕೆ ಭೇಟಿ

ಚಾಮರಾಜನಗರ: ಅರಣ್ಯ ಇಲಾಖೆಯವರು ಹುಲಿಯನ್ನು ಸೆರೆಹಿಡಿದಿದ್ದರೆ ಬಡಗಲಪುರ ಗ್ರಾಮದ ರೈತ ಬಸವಣ್ಣ ಅವರ ಸಾವು ಆಗುತ್ತಿರಲಿಲ್ಲ. ಈ ಘಟನೆಗೆ ರಾಜ್ಯ ಸರ್ಕಾರವೇ ನೇರ ಹೊಣೆಯಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸಿ. ಎಸ್. ನಿರಂಜನ್ ಕುಮಾರ್ ಆರೋಪಿಸಿದರು. ನಗರದ ಸಿಮ್ಸ್ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ, ಮೃತ ರೈತನ ಅಂತಿಮ ದರ್ಶನ ಪಡೆದ ಅವರು, ಕುಟುಂಬದವರಿಗೆ ಧನಸಹಾಯ ಮಾಡಿ ಸಾಂತ್ವನ ಹೇಳಿದರು. ತಾಲೂಕಿನ ಬಡಗಲಪುರ ರೈತನನ್ನು ಅವರ ಜಮೀನಿನಲ್ಲಿಯೇ ಹುಲಿ ದಾಳಿ ನಡೆಸಿ ತಿಂದು ಹಾಕಿರುವುದು ತುಂಬಾ ನೋವಿನ ಸಂಗತಿಯಾಗಿದೆ. ಸುಮಾರು 2 ವರ್ಷಗಳ ಹಿಂದೆ ಆ ಭಾಗದಲ್ಲಿ ಹುಲಿ ಅನೇಕ ಬಾರಿ ಕಾಣಿಸಿಕೊಂಡಿದ್ದು, ಮೃತ ರೈತನ ಹಸುವಿನ ಮೇಲೂ ದಾಳಿ ನಡೆಸಿತ್ತು. ಆ ಬಗ್ಗೆ ಅರಣ್ಯಾಧಿಕಾರಿಗಳಿಗೆ ತಿಳಿಸಿ ಹುಲಿ ಸೆರೆ ಹಿಡಿಯುವಂತೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ ಹಾಗೂ ಅವರ ನಿರ್ಲಕ್ಷ್ಯದಿಂದಾಗಿಯೇ ರೈತನ ಸಾವು ಸಂಭವಿಸಿದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.



ಈ ಸಂದರ್ಭದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ, ಕೇಂದ್ರ ಪರಿಹಾರ ಸಮಿತಿಯ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಮೂಡ್ನಾಕೂಡು ಪ್ರಕಾಶ್, ಹೊನ್ನೂರು ಮಹದೇವ ಸ್ವಾಮಿ, ಗ್ರಾಮಾಂತರ ಮಂಡಲ ಅಧ್ಯಕ್ಷ ಕಾಡಹಳ್ಳಿ ಕುಮಾರ್, ಮೂಡಹಳ್ಳಿ ಮೂರ್ತಿ, ವಕೀಲ ಬೂದಿತಿಟ್ಟು, ರಾಜೇಂದ್ರ, ರಾಮಸಮುದ್ರ ಶಿವಣ್ಣ, ವೇಣುಗೋಪಾಲ್ ಸೇರಿದಂತೆ ಇತರರು ಹಾಜರಿದ್ದರು.

### 1 ಕೋಟಿ ರೂ. ಪರಿಹಾರ,ಸರ್ಕಾರಿ ಉದ್ಯೋಗಕ್ಕೆ ಆಗ್ರಹ

**ಅರಣ್ಯಾಧಿಕಾರಿಗಳು ಯಾವುದೇ ಜವಾಬ್ದಾರಿ ಇಲ್ಲದಂತೆ ವರ್ತನೆ ಮಾಡುತ್ತಿದ್ದು, ಹುಲಿ ಕಾಣಿಸಿ ಕೊಂಡ ಮಾಹಿತಿ ನೀಡಿದರೂ ನಿರ್ಲಕ್ಷ್ಯದಿಂದ ನಡೆದುಕೊಳ್ಳುತ್ತಾರೆ. ಕಾಡುಪ್ರಾಣಿ ದಾಳಿಯಿಂದ ಸಾವನ್ನಪ್ಪಿದರೆ 20 ಲಕ್ಷ ರೂ. ಪರಿಹಾರ ನೀಡುವುದಾಗಿ ಹೇಳುತ್ತಾರೆ. ಆದರೆ, ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ರೈತನನ್ನು ಕೊಂದು ಹಾಕಿದ ಮೇಲೆ ಆತನ ಇಡೀ ಕುಟುಂಬ ಬೀದಿಗೆ ಬಂದಿದ್ದು, ಮನೆಯಲ್ಲಿ ದುಡಿಯುವವರೇ ಇಲ್ಲದಂತಾಗಿದೆ. ಆದ್ದರಿಂದ ಮೃತರ ಕುಟುಂಬಕ್ಕೆ 20 ಲಕ್ಷ ರೂ. ಪರಿಹಾರ ಸಾಲದು. ಗ್ರಾಮಸ್ಥರ ಬೇಡಿಕೆಯಂತೆ ಮೃತ ರೈತನ ಕುಟುಂಬಕ್ಕೆ 1 ಕೋಟಿ ರೂ. ಪರಿಹಾರ ನೀಡಬೇಕು. ಸಚಿವ ಸಿ. ಪುಟ್ಟರಂಗಶೆಟ್ಟಿ ಅವರು ಮೃತನ ಕುಟುಂಬಕ್ಕೆ ಸರ್ಕಾರಿ ನೌಕರಿ ಕೊಡಿಸುವ ಭರವಸೆ ನೀಡಿದ್ದು, ಆ ಮಾತಿನಂತೆ ಮೃತರ ಪುತ್ರನಿಗೆ ನೌಕರಿ ನೀಡಿ ನ್ಯಾಯ ಒದಗಿಸುವ ಕೆಲಸ ಮಾಡಬೇಕು ಎಂದು ಆಗ್ರಹಿಸಿದರು.**

### ಮಾನವ-ಪ್ರಾಣಿ ಸಂಘರ್ಷ ಸರ್ಕಾರದ ನಿರ್ಲಕ್ಷ್ಯ

**ಜಿಲ್ಲೆಯಲ್ಲಿ ಪ್ರಾಣಿ ಮತ್ತು ಮಾನವ ಸಂಘರ್ಷ ಆಗಾಗ ನಡೆಯುತ್ತಲೇ ಇದೆ. ನಿನ್ನೆ ಬೆಳಗ್ಗೆ ಗುಂಡ್ಲುಪೇಟೆ ತಾಲೂಕಿನ ಕೊಟಗೆರೆಯಲ್ಲಿ ಆನೆ ದಾಳಿಗೆ ವ್ಯಕ್ತಿಯೊಬ್ಬ ಬಲಿಯಾಗಿದ್ದರೆ, ಸಂಜೆ ವೇಳೆಗೆ ಬಡಗಲಪುರದಲ್ಲಿ ಹುಲಿ ದಾಳಿಗೆ ರೈತನ ಸಾವು ಆಗಿದೆ. ಹುಲಿ ಕಾಣಿಸಿಕೊಂಡ ಸಂದರ್ಭದಲ್ಲಿ ಅರಣ್ಯ ಇಲಾಖೆಯವರು ಬೋನ್ ಇಟ್ಟು ಅದನ್ನು ಸೆರೆಹಿಡಿಯಲು ಕ್ರಮವಹಿಸಿದ್ದರೆ, ಇಂತಹ ಸನ್ನಿವೇಶ ನಿರ್ಮಾಣವಾಗುತ್ತಿರಲಿಲ್ಲ ಮತ್ತು ಪ್ರಾಣಹಾನಿ ತಪ್ಪಿಸಬಹುದಿತ್ತು. ಸರ್ಕಾರವು ನಾವು ಏನೆಲ್ಲಾ ಕ್ರಮ ಹಾಗೂ ಸುರಕ್ಷತಾ ಕ್ರಮಗಳನ್ನು ಕೈಗೊಂಡಿದ್ದೇವೆ ಎಂದು ಹೇಳಿಕೊಳ್ಳುತ್ತದೆ. ಆದರೆ, ಅನೇಕ ಬಾರಿ ದೂರು ಸಲ್ಲಿಸಿದ್ದರೂ ಅರಣ್ಯ ಇಲಾಖೆ ನಿರ್ಲಕ್ಷ್ಯ ವಹಿಸಿರುವುದನ್ನು ನೋಡಿದರೆ ಇದಕ್ಕೆ ನೇರ ಸರ್ಕಾರವೇ ಹೊಣೆಯಾಗಿದೆ ಎಂದು ಅವರು ದೂರಿದರು.**

# ವಂದೇ ಮಾತರಂಗೆ ಕತ್ತರಿ: ಮೈಸೂರಲ್ಲೂ ಪ್ರತಿಭಟನೆ

ಮೈಸೂರು: ರಾಷ್ಟ್ರಭಕ್ತಿಯ ಪ್ರತೀಕವಾದ ವಂದೇ ಮಾತರಂ ಗೀತೆಯನ್ನು ಮೊಟಕುಗೊಳಿಸಿರುವ ರಾಜ್ಯ ಸರ್ಕಾರದ ನಿಲುವನ್ನು ಖಂಡಿಸಿ, ಗೀತೆಯ ಪೂರ್ಣರೂಪವನ್ನು ಗೌರವಪೂರ್ವಕವಾಗಿ ಪಾಲಿಸುವಂತೆ ಆಗ್ರಹಿಸಿ ಪಾದಯಾತ್ರೆ ಐದು ದಿನಗಳ ರಾಜ್ಯ ಬಿಜೆಪಿ ಕರೆ ನೀಡಿರುವ ಪಾದಯಾತ್ರೆ ಬೆಂಬಲಿಸಿ ಮೈಸೂರು ವಿಭಾಗದಲ್ಲಿಯೂ ಪಾದಯಾತ್ರೆ ನಡೆಸುವುದಾಗಿ ಮೈಸೂರು ವಿಭಾಗದ ಬಿಜೆಪಿ ಸಹ ಪ್ರಭಾರಿ ಡಾ.ಈ.ಸಿ.ನಿಂಗರಾಜ್ ಗೌಡ ತಿಳಿಸಿದ್ದಾರೆ.

ರಾಷ್ಟ್ರೀಯ ಗೀತೆ ವಂದೇ ಮಾತರಂ ಅನ್ನು ಕೇವಲ ಎರಡು ಚರಣಗಳಿಗೆ ಸೀಮಿತಗೊಳಿಸಿ ಹಾಡುವಂತೆ ಆದೇಶ ಹೊರಡಿಸಿರುವ ರಾಜ್ಯ ಸರ್ಕಾರದ ತೀರ್ಮಾನವನ್ನು ಖಂಡಿಸಿ ಇದೇ ಸೆ.15ರಿಂದ 5 ದಿನಗಳ ಕಾಲ ಎಲ್ಲಾ 224 ವಿಧಾನಸಭಾ ಕ್ಷೇತ್ರಗಳಲ್ಲಿ ಒಂದರಿಂದ 2 ಕಿ.ಮೀ. ಪಾದಯಾತ್ರೆ ನಡೆಸಲಾಗುತ್ತಿದೆ. ಅದರಂತೆ ಮೈಸೂರು ವಿಭಾಗದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ಸೆ.15ರಿಂದ 19ರವರೆಗೆ ಪಾದಯಾತ್ರೆಯನ್ನು ನಡೆಸಲಾಗುತ್ತದೆ. ರಾಜ್ಯ ಕಾಂಗ್ರೆಸ್ ಸರ್ಕಾರದ ನಿಲುವು ಖಂಡನೀಯ. ವಂದೇ ಮಾತರಂನ 150 ವರ್ಷಾಚರಣೆ ಸಂದರ್ಭದಲ್ಲಿ ಕೈಗೊಂಡಿರುವ ಈ ತೀರ್ಮಾನವನ್ನು ಭಾರತೀಯ ಜನತಾ ಪಕ್ಷವು ತೀವ್ರವಾಗಿ ಖಂಡಿಸಿದೆ. ಸರ್ಕಾರದ ನಿರ್ಧಾರ ದುರದೃಷ್ಟಕರವಾಗಿದ್ದು, ಇದು ವಂದೇ ಮಾತರಂ ಗೀತೆಗೆ ಮಾತ್ರವದಲ್ಲದೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಅಸಂಖ್ಯಾತ ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಡಿರುವ ಘೋರ ಅವಮಾನವಾಗಿದೆ ಎಂದು ಕಿಡಿಕಾರಿದರು.

ರಾಷ್ಟ್ರಕವಿ ಕುವೆಂಪು ವಿರಚಿತ ನಾಡಗೀತೆಯಲ್ಲಿಯೂ ಭಾರತೀಯ ಸಂಸ್ಕೃತಿ, ಪರಂಪರೆ ಮತ್ತು ಮಹಾಪುರುಷರ ಉಲ್ಲೇಖಗಳಿವೆ. ನಾಳೆ ಅಸಂಖ್ಯಾತರು ಆ ಉಲ್ಲೇಖಗಳಿಗೆ ಆಕ್ಷೇಪ ವ್ಯಕ್ತಪಡಿಸಿದರೆ, ನಾಡಗೀತೆಯ ಸಾಲುಗಳಿಗೂ ಕತ್ತರಿ ಹಾಕುತ್ತೀರಾ? ಕಾಂಗ್ರೆಸ್ ಸರ್ಕಾರ ಇದಕ್ಕೆ ರಾಜ್ಯದ ಜನತೆಗೆ ಉತ್ತರಿಸಬೇಕು. ಎಂತಹ ದುರವಸ್ಥೆಗೆ ಕಾಂಗ್ರೆಸ್ ಕುಸಿದಿದೆಯಂದರೆ, ಸ್ವಾತಂತ್ರ ಪೂರ್ವದಲ್ಲಿ ಕಾಂಗ್ರೆಸ್ ನಾಯಕರು ನೇಣುಗಂಬವೇರಿಸಿದರೂ ವಂದೇ ಮಾತರಂ ಹಾಡೇ ಹಾಡುತ್ತೇವೆ ಎನ್ನುತ್ತಿದ್ದರು.ಈಗ, ನೇಣುಗಂಬಕ್ಕೆ ಏರಿಸಿದರೂ ವಂದೇ ಮಾತರಂ ಹಾಡುವುದಿಲ್ಲ. ಎಂದು ಕೆಪಿಸಿಸಿ ಅಧ್ಯಕ್ಷ ಬಿ. ಕೆ. ಹರಿಪ್ರಸಾದ್ ನೀಡಿರುವ ಹೇಳಿಕೆಯು ಅತ್ಯಂತ ಶೋಚನಿಯ ಹಾಗೂ ಖಂಡನೀಯವಾಗಿದೆ.



# ಇಂದು ವಿಶ್ವಕರ್ಮ ಜಯಂತಿ

ಮೈಸೂರು: ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಯಂತ್ಯೋತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಸೆ.17 ರಂದು ನಗರದ ಕಲಾ ಮಂದಿರದಲ್ಲಿ ವಿಶ್ವಕರ್ಮ ಜಯಂತಿ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಸಮಿತಿ ಅಧ್ಯಕ್ಷ ಸಿದ್ದಪ್ಪಾಜಿ ವಿಶ್ವಕರ್ಮ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಅಂದು ಬೆಳಗ್ಗೆ 9 ಕ್ಕೆ ಇರ್ವಿನ್ ರಸ್ತೆ ಕಾಳಿಕಾಂಬ ಕಮಠೇಶ್ವರ ಸ್ವಾಮಿ ದೇವಸ್ಥಾನದಿಂದ ಭವ್ಯ ಮೆರವಣಿಗೆ ಹೊರಟು ಕಲಾಮಂದಿರದ ತಲುಪಲಿದೆ. ಅಲ್ಲಿ ಮಧ್ಯಾಹ್ನ 12.30ಕ್ಕೆ ವೇದಿಕೆ ಕಾರ್ಯಕ್ರಮ ಆರಂಭವಾಗಲಿದೆ. ಡಾ. ಕುಮಾರಸ್ವಾಮಿ ಸ್ವಾಮೀಜಿ ಸಾನ್ನಿಧ್ಯ ವಹಿಸುವರು, ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸುವರು, ಮಾಜಿ ಸಿಎಂ ಸಿದ್ದರಾಮಯ್ಯ ಉಪಸ್ಥಿತರಿರುವರು, ಶಾಸಕ ಕೆ. ಹರೀಶ್‌ಗೌಡ ಅಧ್ಯಕ್ಷತೆ ವಹಿಸುವರು, ಸಂಸದ ಯದುವೀರ್, ಸುನೀಲ್ ಬೋಸ್, ಡಾ. ಮಾನಸ, ಎಂ. ರಾಮಪ್ಪ, ಎಚ್.ಡಿ ಗಣೇಶ್, ಕೆ. ರಂಗಸ್ವಾಮಿ ಇನ್ನಿತರರು ವೇದಿಕೆಯಲ್ಲಿರುವರೆಂದರು. ಹಿನಕಲ್ ಮಹೇಶ್, ಚಂದ್ರು, ಜನಾರ್ದನ, ಆಯರಹಳ್ಳಿ ಸತೀಶ್, ಟೈಲರ್ ರವಿ, ಸಿದ್ದರಾಜಾಚಾರಿ, ವಸಂತಕುಮಾರ್, ಮೀನಮ್ಮ, ಸರಸ್ವತಿ, ಎಚ್.ಪಿ.ಶೋಭಾ ಇನ್ನಿತರರು ಇದ್ದರು.

# ಸುಮಂಗಲಿಯರಿಂದ ಸ್ವರ್ಣಗೌರಿಗೆ ಬಾಗಿನ



ಚಾಮರಾಜನಗರ: ನಗರದಲ್ಲಿ ಗೌರಿಗಣೇಶ ಹಬ್ಬವನ್ನ ಸಡಗರ,ಸಂಭ್ರಮದಿಂದ ಆಚರಣೆ ಮಾಡಲಾಯಿತು.

ಗೌರಿ ಗಣೇಶ ಹಬ್ಬದ ಅಂಗವಾಗಿ ಚಾಮರಾಜೇಶ್ವರ ದೇವಸ್ಥಾನದಲ್ಲಿ ಮಹಿಳೆಯರು ಅತ್ಯಂತ ಸಡಗರ-ಸಂಭ್ರಮದಿಂದ ಗಣೇಶಗೌರಿಗೆ ಪೂಜೆ ಸಲ್ಲಿಸಿ, ಸುಮಂಗಲಿಯರು ಸ್ವರ್ಣಗೌರಿ ದೇವಿಗೆ ಬಾಗಿನ ಸಮರ್ಪಿಸಿದರು. ಗೌರಮ್ಮನಿಗೆ ಸಾಂಪ್ರದಾಯಿಕವಾಗಿ ಮೊರದ ಬಾಗಿನ ನೀಡುವ ಮೂಲಕ ಸೌಭಾಗ್ಯ, ನೆಮ್ಮದಿ ಮತ್ತು ಕುಟುಂಬದ ಕಲ್ಯಾಣಕ್ಕಾಗಿ ಪ್ರಾರ್ಥಿಸುತ್ತಿದ್ದಾರೆ. ಗೌರಿದೇವಿಗೆ ಬಾಗಿನ ಅರ್ಪಣೆ ವಿಶೇಷವಾದ್ದದು : ಅರ್ಚಕ ರಾಮಕೃಷ್ಣಭಾರದ್ವಜ್ ಮಾತನಾಡಿ, ಪ್ರತಿವರ್ಷದಂತೆ ಈ ವರ್ಷವೂ ಕೂಡ ಸ್ವರ್ಣಗೌರಿ, ಗಣೇಶ ಮೂರ್ತಿ ಪ್ರತಿಷ್ಠಾಪಿಸಲಾಯಿತು, ಸ್ವರ್ಣಗೌರಿ ಮಾಂಗಲ್ಯಸೂತ್ರದ ಮುಖಾಂತರ ಬಂದಿದೆ ಎಂದು ಸುಮಂಗಲಿಯರು ಭಗವಂತನಲ್ಲಿ ಪ್ರಾರ್ಥಿಸಿ ಬೆಳಿಗ್ಗೆ ಪೂಜೆ ಸಲ್ಲಿಸಲ್ಲಿ ದೇವಿಗೆ ಬಾಗಿನ ಅರ್ಪಿಸಿದರು. ಸ್ವರ್ಣಗೌರಿಯ ಕೃಪಾಕಟಾಕ್ಷ ಎಲ್ಲ ಸುಮಂಗಲಿಯರ ಮೇಲೆ ಇರಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುವೆ ಎಂದರು. ಬಾಗಿನ ಸೌಭಾಗ್ಯದ ಸಂಕೇತ: ಸುಮಂಗಲಿ ಮಹಿಳೆಯರು ತಾಯಿಯ ಮನೆಗೆ ಬಂದ ಗೌರಿಯನ್ನು ಸತ್ಕರಿಸಿ, ಮತ್ತೊಬ್ಬ ಮುತ್ತೈದೆಗೆ ಬಾಗಿನ ನೀಡುವ ಮೂಲಕ ಸೌಭಾಗ್ಯ ವೃದ್ಧಿಯಾಗುತ್ತದೆ ಎಂಬುದು ಧಾರ್ಮಿಕ ನಂಬಿಕೆ. ಮೊರದ ಬಾಗಿನದಲ್ಲಿ ಅಕ್ಕಿ, ಬೇಳೆ, ತೊಗರಿಬೇಳೆ, ಕಡಲೆಬೇಳೆ ಸೇರಿದಂತೆ ನವಧಾನ್ಯಗಳು, ಬೆಲ್ಲ, ಅರಿಶಿನ-ಕುಂಕುಮ, ಗಾಜಿನ ಬಳೆಗಳು, ಕನ್ನಡಿ, ಬಾಚಣಿಗೆ ಮತ್ತು ಬ್ಲೌಸ್ ಪೀಸ್ ಇಟ್ಟು ಗೌರವಪೂರ್ವಕವಾಗಿ ನೀಡಲಾಗುತ್ತದೆ ಎಂದರು.ಸ್ವರ್ಣಗೌರಿಗೆ ಬಾಗಿನ ಅರ್ಪಿಸಿದ ಚಾಮರಾಜನಗರ ಹರ್ಷಿತ ಮಾತನಾಡಿ, ಗೌರಿಗಣೇಶ ಹಬ್ಬ ಎಂದರೆ ಸೌಭಾಗ್ಯದ ಸಂಕೇತ. ಭಾದ್ರಪದಮಾಸದ ಶುಕ್ಲ ತೃತೀಯಾದಂದು ಆಚರಿಸಲಾಗುವ ಈ ಹಬ್ಬದಲ್ಲಿ ಸುಮಂಗಲಿಯರು ಗೌರಿಗೆ. ಪೂಜೆಸಲಿಸಿ ಬಾಗಿನ ಅರ್ಪಿಸುವುದು ಅತ್ಯಂತ ಸಾಂಪ್ರದಾಯಕ ಆಚರಣೆಯಾಗಿದ್ದು. ನಾವು ಕೂಡ ಚಾಮರಾಜೇಶ್ವರ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿರುವ ಗೌರಮ್ಮಗೆ ಪೂಜೆ ಸಲ್ಲಿಸಿ ಬಾಗಿನ ಅರ್ಪಿಸಿ ಗೌರಿಗಣೇಶ ಆಶೀರ್ವಾದ ಪಡೆಯಲಾಯಿತು ಎಂದರು.

### ಗುಂಡ್ಲುಪೇಟೆ ತಾಲೂಕಿನ ಕೋಟೆಕೆರೆ ಗ್ರಾಮದಲ್ಲಿ ಘಟನೆ

# ಕಾಡು ಪ್ರಾಣಿಗಳ ದಾಳಿ: ರೈತರು ಸಾವು

ಚಾಮರಾಜನಗರ: ಗಡಿಜಿಲ್ಲೆ ಚಾಮರಾಜನಗರದಲ್ಲಿ ಮಾನವ ಮತ್ತು ವನ್ಯಜೀವಿ ಸಂಘರ್ಷ ಮುಂದುವರೆದಿದ್ದು ಗೌರಿ ಗಣೇಶ ಹಬ್ಬದ ಸಡಗವರನ್ನು ವನ್ಯಜೀವಿ ದಾಳಿಗಳು ಕಸಿದಿವೆ. ಬೆಳಗ್ಗೆ ಆನೆ ದಾಳಿಗೆ ರೈತ ಮೃತಪಟ್ಟರೇ ಸಂಜೆ ಹುಲಿ ದಾಳಿಗೆ ಅನ್ನದಾತ ಅಸುನೀಗಿದ್ದಾರೆ.

ಗಣೇಶ ಚತುರ್ಥಿ ದಿನದಂದೇ ಆನೆ ದಾಳಿ ನಡೆಸಿ ರೈತನನ್ನು ಬಲಿ ಪಡೆದ ಘಟನೆ ಗುಂಡ್ಲುಪೇಟೆ ತಾಲೂಕಿನ ಕೋಟೆಕೆರೆ ಗ್ರಾಮದಲ್ಲಿ ನಡೆದಿದೆ. ಕೋಟೆಕೆರೆ ಗ್ರಾಮದ ಜನ್ನೂರನಾಯಕ (68) ಮೃತ ವೃದ್ಧ. ಇವರು ಸೋಮವಾರ ಹಸುಗಳನ್ನು ಜಮೀನಿನಲ್ಲಿ ಕಟ್ಟುತ್ತಿದ್ದಾಗ ಏಕಾಏಕಿ ಕಾಡಾನೆ ದಾಳಿ ನಡೆಸಿದ್ದು, ತುಳಿದು ಬಿಸಾಡಿದೆ. ತೀವ್ರವಾಗಿ ಅಸ್ವಸ್ಥಗೊಂಡಿದ್ದ ಇವರನ್ನು ಮೈಸೂರಿನ ಆಸ್ಪತ್ರೆಗೆ ರವಾನಿಸಿತರಾದರೂ ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದಾರೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಓಂಕಾರ್ ವನ್ಯಜೀವಿ ವಲಯ ವ್ಯಾಪ್ತಿಗೆ ಕೋಟೆಕೆರೆ ಗ್ರಾಮ ಒಳಪಡಲಿದೆ.





ಆನೆ ದಾಳಿಗೊಳಗಾಗಿ ರೈತ ಮೃತಪಟ್ಟ ಘಟನೆ ಖಂಡಿಸಿ ಓಂಕಾರ್ ವಲಯ ಅರಣ್ಯಾಧಿಕಾರಿ ಕಚೇರಿ ಎದುರು ರೈತರು ಪ್ರತಿಭಟಿಸಿ ಆಕ್ರೋಶ ಹೊರಹಾಕಿದ್ದಾರೆ. ಕಳೆದ ಮಾರ್ಚ್ ತಿಂಗಳಿನಿಂದಲೂ ಕಾಡಾನೆ ಉಪಟಳ ಕೊಡುತ್ತಿದ್ದರೂ ಅರಣ್ಯ ಇಲಾಖೆ ಯಾವುದೇ ಕ್ರಮ ವಹಿಸಿಲ್ಲ. ಸಾಕಷ್ಟು ಬೆಳೆ ಕೂಡ ನಾಶ ಮಾಡಿರುವ ಬಗ್ಗೆ ಮನವಿ ಕೊಟ್ಟರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಓಂಕಾರ ಅರಣ್ಯ ಕಚೇರಿಗೆ ಮುತ್ತಿಗೆ ಹಾಕಿ ರೈತರು ಕಿಡಿಕಾರಿದ್ದಾರೆ.

ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು, ಕಾಡು ಪ್ರಾಣಿಗಳ ಹಾವಳಿ ತಡೆಯಲು ವಿಫಲರಾಗಿರುವ ಅಧಿಕಾರಿಗಳ ವಿರುದ್ಧ ಕೂಡ ಪ್ರಕರಣ ದಾಖಲು ಮಾಡಬೇಕು ಎಂದು ಪಟ್ಟು ಹಿಡಿದಿದ್ದರು. ಸರ್ಕಾರದಿಂದ ಪರಿಹಾರ ಚೆಕ್ ವಿತರಿಸಿ, ಕಾಡಾನೆ ಉಪಟಳಕ್ಕೆ ಕ್ರಮ ಕೈಗೊಳ್ಳುವ ಭರವಸೆ ಬಳಿಕ ಪ್ರತಿಭಟನೆ ಕೈಬಿಟ್ಟರು

# ಇಂದು ಗೀತೆ ಗಾಯನ

ಮೈಸೂರು: ಜನಚೈತನ್ಯ ಫೌಂಡೇಷನ್ ವತಿಯಿಂದ ಸೆ.16 ರ ಮಧ್ಯಾಹ್ನ 2 ರಿಂದ ರಾತ್ರಿ 9 ರವರೆಗೆ ನಗರದ ಪುರಭವನದಲ್ಲಿ ಡಾ. ವಿಷ್ಣುವರ್ಧನ್ ನೆನಪಿನಲ್ಲಿ ನೂರೊಂದು ನೆನಪು ಶೀರ್ಷಿಕೆ ಅಡಿಯಲ್ಲಿ ವಿಷ್ಣುವರ್ಧನ್ ಚಿತ್ರಗಳ ಗೀತೆ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಆರ್.ಲಕ್ಷ್ಮಣ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ನಾಗರಾಜ್ ವಿ. ಬೈರಿ ಅಧ್ಯಕ್ಷತೆ ವಹಿಸುವರು, ಕೆ. ರಘುರಾಂ ವಾಜಪೇಯಿ, ಲಕ್ಷ?ಮಣ್ ಪ್ರಭು, ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಇನ್ನಿತರರು ವೇದಿಕೆಯಲ್ಲಿರುವರು, 26 ಮಂದಿ ಗಾಯಕ ಗಾಯಕಿಯರು ಒಟ್ಟಾರೆ 70 ಹಾಡು ಹಾಡುವರು. ವಿಷ್ಣುವರ್ಧನ ಹಾಡಿರುವ ತುತ್ತು ಅನ್ನ ತಿನ್ನೋಕೆ ಸೇರಿದಂತೆ ಅವರ ಚಿತ್ರಗಳ ಎಲ್ಲ ಕನ್ನಡ ಹಾಡುಗಳನ್ನೇ ಹಾಡಲಾಗುವುದೆಂದರು. ಜಾಯ್ಸ್ ವೈಶಾಕ್, ಬಿ.ಎಸ್.ವಿಜಯ್‌ಆನಂದ್, ರೇಖಾ ಗೌತಮ್, ಬಸವರಾಜು ಎಸ್.ಬೆಳ್ಳಿಕಟ್ಟೆಗೆ ಮೊದಲಾದವರು ಇದ್ದರು.

## ಶ್ರೀರಂಗಪಟ್ಟಣ ದಸರಾ: ಅ.12 - 13ರಂದು ಯುವ ಸಂಭ್ರಮ ಕಾರ್ಯಕ್ರಮ

# ಐತಿಹಾಸಿಕ ಹಿನ್ನೆಲೆಗೆ ತಕ್ಕಂತೆ ಈ ಬಾರಿ ದಸರಾಗೆ ವಿಶೇಷ ರೂಪ: ಸಚಿವ ಎನ್. ಚೆಲುವರಾಯಸ್ವಾಮಿ

**ಮಂಡ್ಯ:** ಶ್ರೀರಂಗಪಟ್ಟಣ ದಸರಾ ಮಹೋತ್ಸವವನ್ನು ಐತಿಹಾಸಿಕ ಹಿನ್ನೆಲೆ ಹಾಗೂ ಸಾಂಸ್ಕೃತಿಕ ಪರಂಪರೆಗೆ ತಕ್ಕಂತೆ ಈ ಬಾರಿ ಇನ್ನಷ್ಟು ವೈಭವಯುತವಾಗಿ ಹಾಗೂ ವಿಶೇಷವಾಗಿ ಆಯೋಜಿಸಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಬೇಕು ಎಂದು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚೆಲುವರಾಯಸ್ವಾಮಿ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮಂಗಳವಾರ ನಡೆದ ಶ್ರೀರಂಗಪಟ್ಟಣ ದಸರಾ ಪೂರ್ವಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ಮೈಸೂರು ದಸರಾ ತನ್ನ ಪುರಾತನ ಇತಿಹಾಸ, ಪರಂಪರೆ ಹಾಗೂ ವೈಭವದಿಂದ ವಿಶ್ವದಾದ್ಯಂತ ಪ್ರಸಿದ್ಧಿ ಪಡೆದಿದೆ. ಅದೇ ರೀತಿ ಶ್ರೀರಂಗಪಟ್ಟಣ ದಸರಾಗೂ ತನ್ನದೇ ಆದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಮಹತ್ವವಿದೆ. ಈ ಹಿನ್ನೆಲೆಯಲ್ಲಿ ದಸರಾವನ್ನು ಪ್ರತಿವರ್ಷದ ಮಾದರಿಯಲ್ಲಿ ನಡೆಸುವುದರ ಬದಲಾಗಿ, ಈ ಬಾರಿ ಹೊಸತನ ಹಾಗೂ ವೈಶಿಷ್ಟ್ಯವನ್ನು ಒಳಗೊಂಡಂತೆ ರೂಪಿಸಲು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ ಹಲವು ಆಲೋಚನೆಗಳನ್ನು ಮಾಡಲಾಗಿದೆ ಎಂದರು.

ಇದರ ಭಾಗವಾಗಿ ಅ.12 ಹಾಗೂ 13ರಂದು ಶ್ರೀರಂಗಪಟ್ಟಣ ತಾಲ್ಲೂಕು ಕ್ರೀಡಾಂಗಣದಲ್ಲಿ ಯುವ ಸಂಭ್ರಮ ಕಾರ್ಯಕ್ರಮ ಆಯೋಜಿಸಲಾಗುವುದು ಮೈಸೂರಿನಲ್ಲಿ ನಡೆಯುವ ಯುವ ಸಂಭ್ರಮದ ಮಾದರಿಯಲ್ಲಿ ಮಂಡ್ಯ ಜಿಲ್ಲೆಯ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳಿಗೆ ತಮ್ಮ ಕಲಾ ಪ್ರತಿಭೆಯನ್ನು ಪ್ರದರ್ಶಿಸಲು ಉತ್ತಮ ವೇದಿಕೆ ಕಲ್ಪಿಸುವುದು ಇದರ ಉದ್ದೇಶವಾಗಿದೆ. ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸಚಿವರು ತಿಳಿಸಿದರು.

ಯುವ ಸಂಭ್ರಮದ ಮೂಲಕ ಸ್ಥಳೀಯ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವುದರ ಜೊತೆಗೆ, ದಸರಾ ಮಹೋತ್ಸವದಲ್ಲಿ ಯುವಜನರ ಸಕ್ರಿಯ ಪಾಲ್ಗೊಳ್ಳುವಿಕೆಗೆ ಅವಕಾಶ ಕಲ್ಪಿಸಲಾಗುವುದು. ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು, ಕಲಾ ತಂಡಗಳು ಹಾಗೂ ಸಂಬಂಧಪಟ್ಟ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದರು.




**ಅ.15ರಂದು ದಸರಾ ಉದ್ಘಾಟನೆ; ಅ.18ರಂದು ಸಮಾರೋಪ**

**ಅ.15ರಂದು ದಸರಾ ಉದ್ಘಾಟನೆ; ಅ.18ರಂದು ಸಮಾರೋಪ**

ಶ್ರೀರಂಗಪಟ್ಟಣ ದಸರಾ ಮಹೋತ್ಸವದ ಉದ್ಘಾಟನಾ ಕಾರ್ಯಕ್ರಮ ಅ.15ರಂದು ಹಾಗೂ ಸಮಾರೋಪ ಕಾರ್ಯಕ್ರಮ ಅ.18ರಂದು ನಡೆಯಲಿದೆ. ಅ.15ರಿಂದ ಅ.18ರವರೆಗೆ ಸ್ಥಳೀಯ ಕಲೆ, ಸಂಸ್ಕೃತಿ ಹಾಗೂ ಪರಂಪರೆಯನ್ನು ಬಿಂಬಿಸುವ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು.

ದಸರಾ ಉದ್ಘಾಟನೆಗೆ ಗಣ್ಯರನ್ನು ಆಹ್ವಾನಿಸುವುದು ಸೇರಿದಂತೆ ಕಾರ್ಯಕ್ರಮದ ರೂಪುರೇಷೆಗಳ ಕುರಿತು ಇನ್ನೂ ಚರ್ಚೆಗಳು ನಡೆಯುತ್ತಿವೆ. ಮುಖ್ಯಮಂತ್ರಿಗಳು ಹಾಗೂ ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ಎಲ್ಲರ ಸಲಹೆಗಳನ್ನು ಪರಿಗಣಿಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಚಿವರು ತಿಳಿಸಿದರು.

ಶ್ರೀರಂಗಪಟ್ಟಣ ದಸರಾ ಕೇವಲ ಒಂದು ಉತ್ಸವವಾಗಿರದೆ, ಈ ಭಾಗದ ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಪರಂಪರೆಯ ವೈಭವವನ್ನು ಪ್ರತಿಬಿಂಬಿಸುವ ಮಹೋತ್ಸವವಾಗಬೇಕು ಎಂಬುದು ಸರ್ಕಾರದ ಆಶಯವಾಗಿದೆ. ದಸರಾ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಡೆಸಲು ಎಲ್ಲ ಇಲಾಖೆಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು.

ದಸರಾ ಸಂದರ್ಭದಲ್ಲಿ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಸ್ವಚ್ಛತೆ, ಕುಡಿಯುವ ನೀರು, ವಿದ್ಯುತ್, ಸಂಚಾರ ವ್ಯವಸ್ಥೆ ಹಾಗೂ ಸಾರ್ವಜನಿಕರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

ಹೊಸ ರೂಪದೊಂದಿಗೆ ಸಮನ್ವಯದಿಂದ ದಸರಾ ಯಶಸ್ವಿಗೊಳಿಸಿ: ಶಾಸಕ ರಮೇಶ್ ಬಂಡಿಸಿದ್ದೆಗೌಡಶ್ರೀರಂಗಪಟ್ಟಣ ದಸರಾ ಹಾಗೂ ಯುವ ಸಂಭ್ರಮ ಕಾರ್ಯಕ್ರಮವನ್ನು ಅತ್ಯಂತ ಸಮನ್ವಯದಿಂದ ಆಯೋಜಿಸಬೇಕು ಎಂದು ಶಾಸಕ ರಮೇಶ್ ಬಂಡಿಸಿದ್ದೆಗೌಡ ಹೇಳಿದರು.

ಮಂಡ್ಯ ಜಿಲ್ಲೆಯ ವಿದ್ಯಾರ್ಥಿಗಳಿಗೆ ತಮ್ಮ ಪ್ರತಿಭೆ ಪ್ರದರ್ಶಿಸಲು ಉತ್ತಮ ವೇದಿಕೆ ಕಲ್ಪಿಸುವ ಉದ್ದೇಶದಿಂದ ಯುವ ಸಂಭ್ರಮ ಆಯೋಜಿಸಲಾಗುತ್ತಿದೆ. ಸ್ಥಳೀಯ ಪ್ರತಿಭೆಗಳಿಗೆ ಹೆಚ್ಚಿನ ಆದ್ಯತೆ ನೀಡಿ, ದಸರಾ ಮಹೋತ್ಸವವು ಶ್ರೀರಂಗಪಟ್ಟಣದ ಸಾಂಸ್ಕೃತಿಕ ವೈಭವವನ್ನು ಪ್ರತಿಬಿಂಬಿಸುವಂತಿರಬೇಕು. ವಿವಿಧ ಇಲಾಖೆಗಳು ಹಾಗೂ ಸಂಘ-ಸಂಸ್ಥೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು.

**ದಸರಾಕ್ಕೆ ಆನೆಗಳ ಆಗಮನಕ್ಕೆ ಕ್ರಮ:** ದಸರಾ ಮಹೋತ್ಸವಕ್ಕೆ ಆನೆಗಳನ್ನು ಕಳುಹಿಸುವಂತೆ ಸಂಬಂಧಪಟ್ಟ ಇಲಾಖೆಗೆ ಈಗಾಗಲೇ ಪತ್ರ ಬರೆಯಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಕುಮಾರ್ ತಿಳಿಸಿದರು.

ಆನೆಗಳ ಆಗಮನ ಸೇರಿದಂತೆ ದಸರಾ ಕಾರ್ಯಕ್ರಮಗಳ ಯಶಸ್ವಿ ನಿರ್ವಹಣೆಗೆ ವಿವಿಧ ಇಲಾಖೆಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ವಹಿಸಿರುವ ಜವಾಬ್ದಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

**125 ಮಳಿಗೆಗಳ ಆಹಾರ ಮೇಳ:** ದಸರಾ ಮಹೋತ್ಸವದ ಅಂಗವಾಗಿ 125 ಮಳಿಗೆಗಳನ್ನು ಒಳಗೊಂಡ ಆಹಾರ ಮೇಳ ಆಯೋಜಿಸಲು ಉದ್ದೇಶಿಸಲಾಗಿದೆ. ಸಾರ್ವಜನಿಕರಿಗೆ ವಿವಿಧ ಬಗೆಯ ಆಹಾರಗಳನ್ನು ಪರಿಚಯಿಸುವುದರ ಜೊತೆಗೆ ಸ್ಥಳೀಯರಿಗೆ ವ್ಯಾಪಾರಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಆಹಾರ ಮೇಳವನ್ನು ವ್ಯವಸ್ಥಿತವಾಗಿ ಆಯೋಜಿಸಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ದಸರಾ ಮಹೋತ್ಸವದ ವಿವಿಧ ಕಾರ್ಯಗಳ ನಿರ್ವಹಣೆಗಾಗಿ 12 ಸಮಿತಿಗಳನ್ನು ರಚಿಸಲಾಗಿದ್ದು, ಪ್ರತಿ ಸಮಿತಿಗೆ ವಹಿಸಿರುವ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಿ, ನಿಗದಿತ ಅವಧಿಯಲ್ಲಿ ಸಿದ್ಧತೆಗಳನ್ನು ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ ಎಂದರು. ಸಭೆಯಲ್ಲಿ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರು ಹಾಗೂ ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ವಿಧಾನಪರಿಷತ್ ಸದಸ್ಯರಾದ ಮಧು ಜಿ. ಮಾದೇಗೌಡ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಕೆ.ಆರ್. ನಂದಿನಿ, ಅಪರ ಜಿಲ್ಲಾಧಿಕಾರಿ ಬಿ.ಸಿ. ಶಿವಾನಂದಮೂರ್ತಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮದಿಂದ ಅರ್ಜಿ ಆಹ್ವಾನ

**ಮಡಿಕೇರಿ:** ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮ ನಿಯಮಿತದಿಂದ 2026-27ನೇ ಸಾಲಿನಲ್ಲಿ ವಿವಿಧ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಗಳಡಿ ಸಹಾಯಧನ/ ಸಾಲ-ಸೌಲಭ್ಯವನ್ನು ಪಡೆಯಲು ಇಚ್ಚಿಸುವವರು ಕಡ್ಡಾಯವಾಗಿ ಸೇವಾಸಿಂಧು ಪೋರ್ಟಲ್ ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಿದೆ.

ಅರ್ಜಿ ಸಲ್ಲಿಸಲು ಸೆಪ್ಟೆಂಬರ್, 27 ಕೊನೆಯ ದಿನವಾಗಿದೆ. (ಅರಿವು ಶೈಕ್ಷಣಿಕ ಸಾಲ ಯೋಜನೆಗಳಿಗೆ ಕೊನೆಯ ದಿನಾಂಕ ಇರುವುದಿಲ್ಲ).

ಅರ್ಜಿ ಸಲ್ಲಿಸಲು ಅರ್ಜಿದಾರರು ಕರ್ನಾಟಕ ರಾಜ್ಯದ ಖಾಯಂ ನಿವಾಸಿಗಳಾಗಿರಬೇಕು. ನಿಗಮದ ಯೋಜನೆಗಳಲ್ಲಿ ಸೌಲಭ್ಯ ಪಡೆಯಲು ಇಚ್ಚಿಸುವವರು ಅಲೆಮಾರಿ ಮತ್ತು ಅರೆ ಅಲೆಮಾರಿ ಹಾಗೂ ಅದರ ಉಪಜಾತಿಗಳಿಗೆ ಸೇರಿರಬೇಕು. ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಕಡ್ಡಾಯವಾಗಿದೆ. ವಯೋಮಿತಿ 18 ವರ್ಷಗಳಿಂದ 55 ವರ್ಷಗಳ ಮಿತಿಯಲ್ಲಿರಬೇಕು.

ನಿಗಮದ/ ಸರ್ಕಾರದ ಯಾವುದಾದರೂ ಯೋಜನೆಗಳಡಿ ಈ ಹಿಂದೆ ಸೌಲಭ್ಯ ಪಡೆದಿರಬಾರದು. ಕುಟುಂಬದ ಒಬ್ಬರಿಗೆ ಮಾತ್ರ ಸೌಲಭ್ಯ ಒದಗಿಸಲಾಗುವುದು. ಅರಿವು ಯೋಜನೆಯಡಿ ಅಭ್ಯರ್ಥಿಯ ವಯೋಮಿತಿ 18 ವರ್ಷಗಳಿಂದ 30 ವರ್ಷಗಳ ಮಿತಿಯಲ್ಲಿರಬೇಕು ವಾರ್ಷಿಕ ವರಮಾನದ ಮಿತಿ ರೂ.3.50 ಲಕ್ಷಗಳು. ಸ್ವಾವಲಂಬಿ ಸಾರಥಿ ಯೋಜನೆಯಡಿ ವಯೋಮಿತಿ 21 ವರ್ಷಗಳಿಂದ 45 ವರ್ಷಗಳ ಮಿತಿಯಲ್ಲಿರಬೇಕು.

ವಿದೇಶಿ ವ್ಯಾಸಂಗ ಸಾಲ ಯೋಜನೆ:- (ಈ ಯೋಜನೆಯಡಿ ವಾರ್ಷಿಕ ವರಮಾನವು ರೂ,15 ಲಕ್ಷಗಳ ಮಿತಿಯಲ್ಲಿಇರಬೇಕು. ವಯೋಮಿತಿ:- ವಿದ್ಯಾರ್ಥಿಯ ವಯಸ್ಸು 25 (ಸ್ನಾತಕೋತ್ತರ ಪದವೀಧರರಿಗೆ) ಮತ್ತು ಪಿ.ಎಚ್.ಡಿ. ಪದವೀಧವಿದರರಿಗೆ 27 ವರ್ಷಗಳ ವಯೋಮಿತಿಯನ್ನು ನಿಗಧಿಪಡಿಸಲಾಗಿದೆ.) ಅರ್ಜಿದಾರರು ತಮ್ಮ ಮೊಬೈಲ್ ಸಂಖ್ಯೆ ಹಾಗೂ ಬ್ಯಾಂಕ್ ಖಾತೆಯನ್ನು ತಮ್ಮ ಆಧಾರ್ ಸಂಖ್ಯೆಗೆ ಜೋಡಣೆ ಮಾಡಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ರೂ.98 ಸಾವಿರ ಮತ್ತು ನಗರ ಪ್ರದೇಶದವರಿಗೆ ರೂ.1.20 ಲಕ್ಷಗಳ ಮಿತಿಯೊಳಗಿರಬೇಕು. ಆಯ್ಕೆ ಮಾಡುವಾಗ ಮಹಿಳೆಯರಿಗೆ ಶೇ.33 ರಷ್ಟು, ವಿಕಲಚೇತನರಿಗೆ ಶೇ.5 ರಷ್ಟು, ತೃತೀಯ ಲಿಂಗಿಗಳಿಗೆ ಶೇ.1 ರಷ್ಟು ಮೀಸಲಾತಿ ಇರಿಸಿದೆ.

ಆನ್‌ಲೈನ್ ಮೂಲಕ ಅರ್ಜಿಸ್ವೀಕರಿಸುವ ನಿಗಮದ ಯೋಜನೆಗಳು: ಸ್ವಯಂ ಉದ್ಯೋಗ ನೇರಸಾಲ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆ(ನೂತನ), ಅರಿವು ಶೈಕ್ಷಣಿಕ ಸಾಲ ಯೋಜನೆ (ನವೀಕರಣ), ಸ್ವಾವಲಂಬಿ ಸಾರಥಿ ಯೋಜನೆ. ಗಂಗಾ ಕಲ್ಯಾಣ ಯೋಜನೆ- (ಈ ಯೋಜನೆಯಲ್ಲಿ ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು).

ಅರ್ಜಿ ಸಲ್ಲಿಸುವಾಗ ಆಧಾರ್ ಕಾರ್ಡಿನಲ್ಲಿರುವಂತೆ ಅರ್ಜಿದಾರರ ಹೆಸರು, ವಿಳಾಸ, ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳಲ್ಲಿನ ಹೆಸರು, ವಿಳಾಸ ಮತ್ತು ಬ್ಯಾಂಕ್ ಪಾಸ್ ಪುಸ್ತಕಗಳಲ್ಲಿನ ಹೆಸರು ಕಡ್ಡಾಯವಾಗಿ ತಾಳೆಯಾಗಬೇಕು.

ಬೆಂಗಳೂರು-ಒನ್/ಕರ್ನಾಟಕ-ಒನ್/ಅಟಲ್-ಜಿ ಜನ ಸ್ನೇಹಿ ಕೇಂದ್ರ ಮತ್ತು ನಾಗರಿಕ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಸೇವಾಸಿಂಧು ಪೋರ್ಟಲ್‌ನಡಿ ಅರ್ಜಿಯನ್ನು ಸಲ್ಲಿಸಲು ತಿಳಿಸಿದೆ.

ಹೆಚ್ಚಿನ ಮಾಹಿತಿಯನ್ನು ನಿಗಮದ ವೆಬ್‌ಸೈಟ್ https://kaad.karnataka.gov.in/ ರಲ್ಲಿ ಅಥವಾ ನಿಗಮದ ಕೇಂದ್ರ ಕಚೇರಿ ದೂರವಾಣಿ ಸಂಖ್ಯೆ:080-22374832/833ಯಿಂದ ಪಡೆಯಬಹುದಾಗಿದೆ. ಹಾಗೂ ಜಿಲ್ಲೆಗಳಲ್ಲಿ ನಿಗಮದ ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಕಛೇರಿಗಳಲ್ಲಿ ಬೆಳಗ್ಗೆ 10 ರಿಂದ ಸಂಜೆ 5.30 ರವರೆಗೆ ಸಂಪರ್ಕಿಸಬಹುದಾಗಿದೆ.

2024-25 ಮತ್ತು 2025-26ನೇ ಸಾಲುಗಳಲ್ಲಿ ಅರ್ಜಿ ಸಲ್ಲಿಸಿ ಸೌಲಭ್ಯ ಪಡೆಯದೇ ಇರುವ ಅರ್ಜಿದಾರರು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅಗತ್ಯ ಇಲ್ಲ. ಅಂತಹ ಅರ್ಜಿದಾರರನ್ನು ಪ್ರಸ್ತುತ ಸಾಲಿಗೂ ಸಹ ಪರಿಗಣಿಸಲಾಗುವುದು. 2024-25 ಮತ್ತು 2025-26ನೇ ಸಾಲುಗಳಲ್ಲಿ ಅರ್ಜಿ ಸಲ್ಲಿಸಿರುವ ಯೋಜನೆ ಹೊರತುಪಡಿಸಿ ಉಳಿದ ಯೋಜನೆಗಳಿಗೆ ಪ್ರಸ್ತುತ ಅರ್ಜಿ ಸಲ್ಲಿಸಬಹುದಾಗಿದೆ. ಸೇವಾ ಸಿಂಧು ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಲು ಸೆಪ್ಟೆಂಬರ್, 27 ಕೊನೆಯ ದಿನವಾಗಿದೆ ಎಂದು ಕರ್ನಾಟಕ ಅಲೆಮಾರಿ/ ಅರೆ ಅಲೆಮಾರಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

# ಶ್ರೀರಂಗಪಟ್ಟಣ ದಸರಾ: ಅದ್ದೂರಿ ಬದಲು ಸಾಂಪ್ರದಾಯಿಕ ಆಚರಣೆ

## ಕಾವೇರಿ ಬಿಕ್ಕಟ್ಟಿಗೆ ಮೇಕೆದಾಟು ಒಂದೇ ಪರಿಹಾರ: ಸಚಿವ ಎನ್. ಚಲುವರಾಯಸ್ವಾಮಿ

**ಮಂಡ್ಯ:** ಮೈಸೂರು ದಸರಾಗಿಂತಲೂ ಪುರಾತನವಾದ ಶ್ರೀರಂಗಪಟ್ಟಣ ದಸರಾವನ್ನು ಈ ಬಾರಿ ಬರಗಾಲದ ಹಿನ್ನೆಲೆಯಲ್ಲಿ ಅದ್ದೂರಿತನದ ಬದಲು ಸಾಂಪ್ರದಾಯಿಕವಾಗಿ ಆಚರಿಸಲು ತೀರ್ಮಾನಿಸಲಾಗಿದೆ ಎಂದು ಜಲಸಂಪನ್ಮೂಲ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಇಂದು ನಡೆದ ಸಭೆ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವರು, ನಾಡಿನ ಸಮಸ್ತ ಎಂಜಿನಿಯರ್‌ಗಳಿಗೆ ದಿನಾಚರಣೆಯ ಶುಭಾಶಯ ಕೋರಿ, ಜಿಲ್ಲೆಯ ಅಭಿವೃದ್ಧಿ ಹಾಗೂ ಪ್ರಸ್ತುತ ವಿದ್ಯಮಾನಗಳ ಕುರಿತು ಸಮಗ್ರ ಮಾಹಿತಿ ಹಂಚಿಕೊಂಡರು.

ಶ್ರೀರಂಗಪಟ್ಟಣ ದಸರಾ ಆಚರಣೆ ಸಂಬಂಧ ಈಗಾಗಲೇ ಪೂರ್ವಭಾವಿ ಸಭೆ ನಡೆಸಲಾಗಿದ್ದು, ಈ ಬಾರಿ ಉತ್ಸವಕ್ಕೆ ವಿಶೇಷ ರೂಪ ನೀಡಲಾಗುವುದು. ಅಕ್ಟೋಬರ್ 12 ಮತ್ತು 13ರಂದು ಯುವ ಸಂಭ್ರಮ ಹಾಗೂ ಅಕ್ಟೋಬರ್ 15ರಿಂದ 18ರವರೆಗೆ ದಸರಾ ಮಹೋತ್ಸವ ನಡೆಯಲಿದೆ. ಯುವ ದಸರಾದಲ್ಲಿ ಸ್ಥಳೀಯ ಮಕ್ಕಳ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸಿ ಪ್ರೋತ್ಸಾಹಿಸಲಾಗುವುದು ಎಂದರು.

ದಸರಾ ಆಚರಣೆಗೆ ಐದು ಕೋಟಿ ರೂ. ಅನುದಾನ ಕೋರಿ ಸಮಿತಿಯು ಮನವಿ ಮಾಡಿದ್ದು, ಶಾಸಕರ ಸಲಹೆಗಳನ್ನು ಪರಿಗಣಿಸಿ ಮುಂದಿನ ಮೂರು ದಿನಗಳಲ್ಲಿ ಉದ್ಘಾಟಕರ ಹೆಸರನ್ನು ಅಂತಿಮಗೊಳಿಸಲಾಗುವುದು ಎಂದು ಸಚಿವರು ಸ್ಪಷ್ಟಪಡಿಸಿದರು.

**ಕಾನೂನು ಹೋರಾಟದ ಮೂಲಕ ಉತ್ತರ:** ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಮಿಮ್ಸ್) ಬಳಿಯ ಜಾಗದ ಒತ್ತುವರಿ ತೆರವು ಕುರಿತು ಪ್ರತಿಕ್ರಿಯಿಸಿದ ಅವರು, ಒತ್ತುವರಿದಾರರಿಗೆ ಪರ್ಯಾಯ ಜಾಗ ನೀಡಿದ್ದರೂ ಇನ್ನೂ ಸ್ಥಳಾಂತರಗೊಂಡಿಲ್ಲ. ಪ್ರಸ್ತುತ ನ್ಯಾಯಾಲಯದ ತಡೆಯಾಜ್ಞೆ ಇದ್ದು, ಇದನ್ನು ತೆರವುಗೊಳಿಸಲು ಅಡ್ವೊಕೇಟ್ ಜನರಲ್ ಅವರನ್ನು ನೇಮಿಸಿ ಕಾನೂನು ಹೋರಾಟ ನಡೆಸಲಾಗುವುದು. ಮಿಮ್ಸ್ ಆಸ್ಪತ್ರೆಯ ಸಾಮರ್ಥ್ಯವನ್ನು ಸಾವಿರ ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳೊಂದಿಗೆ ಶೀಘ್ರವೇ ಮಾತುಕತೆ ನಡೆಸಲಾಗುವುದು ಎಂದು ಭರವಸೆ ನೀಡಿದರು.



**ಕುಡಿಯುವ ನೀರಿಗೆ ಸಮಸ್ಯೆ ಇಲ್ಲ:** ಮುಂಬರುವ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಮುನ್ನೆಚ್ಚರಿಕೆ ವಹಿಸಲಾಗುತ್ತಿದ್ದು, ಹೇಮಾವತಿ ಜಲಾಶಯದಿಂದ ನೀರು ಹರಿಸಲಾಗುತ್ತಿದೆ. ಆದರೆ, ಕೆಲವೆಡೆ ರೈತರು ನೀರು ತಡೆಯುತ್ತಿರುವುದು ಗಮನಕ್ಕೆ ಬಂದಿದೆ. ಕೆ.ಆರ್. ಪೇಟೆ ಹಾಗೂ ಪಾಂಡವಪುರ ಭಾಗದ ರೈತರು ಸಹಕರಿಸಿ, ಮದ್ದೂರು ಹಾಗೂ ಮಳವಳ್ಳಿ ಭಾಗದ ಕೆರೆಗಳು ತುಂಬಲು ಅವಕಾಶ ಮಾಡಿಕೊಡಬೇಕು. ಅಗತ್ಯವಿದ್ದರೆ ಪೊಲೀಸ್ ಭದ್ರತೆ ಪಡೆದು ನೀರು ಹರಿಸಲಾಗುವುದು ಎಂದರು.

**ಇಂದು ಅರ್ಜಿ ಸಲ್ಲಿಕೆ:** ಕಾವೇರಿ ಜಲವಿವಾದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಪೀಠ ಮೂರು ದಿನ ಕಾರ್ಯನಿರ್ವಹಿಸದ ಕಾರಣ, ಕಾವೇರಿ ನೀರು ನಿಯಂತ್ರಣ ಸಮಿತಿಗೆ (ಅಘಖಅ) ಇಂದು ಮಧ್ಯಾಹ್ನವೇ ವಿಶೇಷ ಅರ್ಜಿ ಸಲ್ಲಿಸಿ ರಾಜ್ಯದ ನೀರಿನ ವಾಸ್ತವ ಸ್ಥಿತಿಗತಿಯನ್ನು ಮನವರಿಕೆ ಮಾಡಿಕೊಡಲಾಗುವುದು. ಕಾವೇರಿ ಸಮಸ್ಯೆಗೆ ಮೇಕೆದಾಟು ಯೋಜನೆ ಜಾರಿ ಮಾತ್ರ ಶಾಶ್ವತ ಪರಿಹಾರ ಎಂದು ಅವರು ಪುನರುಚ್ಚರಿಸಿದರು.

**ಬಿಜೆಪಿಗೆ ತಿರುಗೇಟು:** ಮದ್ದೂರಿನಲ್ಲಿ ನಡೆಯುತ್ತಿರುವ ಗಣೇಶೋತ್ಸವ ವಿಸರ್ಜನಾ ಮೆರವಣಿಗೆಯಲ್ಲಿ ಬಿಜೆಪಿ ನಾಯಕರು ಭಾಗವಹಿಸುತ್ತಿರುವ ಬಗ್ಗೆ ತೀವ್ರ ವಾಗ್ದಾಳಿ ನಡೆಸಿದ ಸಚಿವರು, ರಾಜ್ಯದ ಜನರ ಸಮಸ್ಯೆಗಳ ಬಗ್ಗೆ ಅಧಿವೇಶನದಲ್ಲಿ ಚರ್ಚಿಸಲು ಬಾರದ ಬಿಜೆಪಿ ನಾಯಕರು, ಗಣೇಶ ವಿಸರ್ಜನೆ ನೆಪದಲ್ಲಿ ರಾಜಕಾರಣ ಮಾಡಲು ಬರುತ್ತಿದ್ದಾರೆ. ನಮ್ಮ ಜಿಲ್ಲೆಯ ಜನರಿಗೆ ಗಣೇಶನನ್ನು ಹೇಗೆ ವಿಸರ್ಜಿಸಬೇಕು ಎಂಬುದು ಗೊತ್ತಿದೆ. ಮಾತನಾಡಲು ಬೇರೆ ವಿಷಯವಿಲ್ಲದ ಕಾರಣ ಬಿಜೆಪಿ ಇಲ್ಲಿ ರಾಜಕೀಯ ಮಾಡುತ್ತಿದ್ದು, ಅವರಿಗೂ ಸೂಕ್ತ ಪೊಲೀಸ್ ಭದ್ರತೆ ಒದಗಿಸಿ ವಾಪಸ್ ಕಳುಹಿಸಲಾಗುವುದು ಎಂದು ತಿರುಗೇಟು ನೀಡಿದರು.

# ಪ್ರಜಾಪ್ರಭುತ್ವದ ಮೌಲ್ಯಗಳನ್ನು ಯುವಜನರು ಅರಿಯಬೇಕು: ಎನ್. ಚಲುವರಾಯಸ್ವಾಮಿ




**ಮಂಡ್ಯ:**ಜಾತಿ, ಧರ್ಮ, ಮೇಲು-ಕೀಳು, ಅಂತಸ್ತು, ಅಧಿಕಾರ ಹಾಗೂ ಆರ್ಥಿಕ ಅಸಮಾನತೆಗಳನ್ನು ಮೀರಿ ಪ್ರತಿಯೊಬ್ಬರಿಗೂ ಸಮಾನ ಹಕ್ಕು, ನ್ಯಾಯ, ಸ್ವಾತಂತ್ರ್ಯ ಹಾಗೂ ಅವಕಾಶಗಳನ್ನು ಒದಗಿಸುವ ವ್ಯವಸ್ಥೆಯೇ ಪ್ರಜಾಪ್ರಭುತ್ವವಾಗಿದ್ದು, ಇದರ ಮೌಲ್ಯಗಳನ್ನು ಯುವಜನರು ಆಳವಾಗಿ ಅರಿತುಕೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಜಾಪ್ರಭುತ್ವವು ಕೇವಲ ಆಡಳಿತ ವ್ಯವಸ್ಥೆಯಲ್ಲ. ಪ್ರತಿಯೊಬ್ಬ ನಾಗರಿಕನ ಹಕ್ಕು, ಸ್ವಾತಂತ್ರ್ಯ, ಸಮಾನತೆ ಮತ್ತು ಗೌರವವನ್ನು ಸಂರಕ್ಷಿಸುವ ವ್ಯವಸ್ಥೆಯಾಗಿದೆ. ಈ ಮೌಲ್ಯಗಳನ್ನು ನಮಗೆ ನೀಡಿರುವ ಸಂವಿಧಾನವನ್ನು ಗೌರವಿಸಿ, ಅದರ ಆಶಯಗಳನ್ನು ಪಾಲಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದರು.

ಪ್ರತಿ ವರ್ಷ ಸೆಪ್ಟೆಂಬರ್ 15ರಂದು ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಆಚರಿಸಲಾಗುತ್ತಿದ್ದು, ವಿಶ್ವದಾದ್ಯಂತ ಪ್ರಜಾಪ್ರಭುತ್ವದ ಮೌಲ್ಯಗಳು, ಜನರ ಹಕ್ಕುಗಳು ಹಾಗೂ ಜವಾಬ್ದಾರಿಗಳ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ. ನಮ್ಮ ದೇಶದಲ್ಲಿಯೂ ಕೇಂದ್ರ, ರಾಜ್ಯ ಹಾಗೂ ಜಿಲ್ಲಾಮಟ್ಟದಲ್ಲಿ ವಿವಿಧ ಕಾರ್ಯಕ್ರಮಗಳ ಮೂಲಕ ಪ್ರಜಾಪ್ರಭುತ್ವದ ಮಹತ್ವವನ್ನು ಸಾರಲಾಗುತ್ತಿದೆ ಎಂದು ತಿಳಿಸಿದರು.

**ಯುವಜನರಲ್ಲಿ ಸಂವಿಧಾನ ಪ್ರಜ್ಞೆ ಅಗತ್ಯ:** ಇಂದಿನ ಯುವಜನರು ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಎಷ್ಟು ಆಳವಾಗಿ ಅರ್ಥಮಾಡಿಕೊಳ್ಳುತ್ತಾರೋ, ಅಷ್ಟು ಬಲಿಷ್ಠವಾಗಿ ಹಾಗೂ ಜವಾಬ್ದಾರಿಯುತವಾಗಿ ದೇಶವನ್ನು ಮುನ್ನಡೆಸಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ಎಲ್ಲೇ ವಿದ್ಯಾಭ್ಯಾಸ ಮಾಡುತ್ತಿದ್ದರೂ ಸಂವಿಧಾನ, ಪ್ರಜಾಪ್ರಭುತ್ವ, ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ತಿಳಿದುಕೊಳ್ಳಬೇಕು. ಸಂವಿಧಾನದ ಆಶಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಚಿವರು ಕರೆ ನೀಡಿದರು.

ದೇಶದ ಸಂವಿಧಾನವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಡಾ. ಬಿ.ಆರ್. ಅಂಬೇಡ್ಕರ್ ಸೇರಿದಂತೆ ಸಂವಿಧಾನ ರಚನಾ ಸಮಿತಿಯ ಸದಸ್ಯರನ್ನು ಗೌರವದಿಂದ ಸ್ಮರಿಸಬೇಕು. ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ನಾಯಕತ್ವ ನೀಡಿದ ಮಹಾತ್ಮ ಗಾಂಧೀಜಿ ಸೇರಿದಂತೆ ಲಕ್ಷಾಂತರ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಜನಸಾಮಾನ್ಯರು ಮಾಡಿದ ತ್ಯಾಗ ಮತ್ತು ಹೋರಾಟದ ಫಲವಾಗಿ ಭಾರತವು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿ ರೂಪುಗೊಂಡಿದೆ ಎಂದರು.

**ಶಿಕ್ಷಣ ಸಂಸ್ಥೆಗಳಲ್ಲಿ ಸಂವಿಧಾನ ಅರಿವು ಮೂಡಿಸಿ:** ಶಾಲಾ-ಕಾಲೇಜುಗಳ ಶಿಕ್ಷಕರು, ಪ್ರಾಂಶುಪಾಲರು ಹಾಗೂ ಶಿಕ್ಷಣಾಧಿಕಾರಿಗಳು ವಿದ್ಯಾರ್ಥಿಗಳಿಗೆ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳ ಕುರಿತು ಹೆಚ್ಚಿನ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಸಂವಿಧಾನವು ಕೇವಲ ಪಠ್ಯಪುಸ್ತಕದ ವಿಷಯವಾಗದೆ, ವಿದ್ಯಾರ್ಥಿಗಳ ಜೀವನದ ಭಾಗವಾಗಬೇಕು.

ಇಂದಿನ ಮಕ್ಕಳು ನಾಳಿನ ದೇಶದ ನಾಯಕರು. ಅವರಲ್ಲಿ ಸಂವಿಧಾನ ಪ್ರಜ್ಞೆ, ಸಾಮಾಜಿಕ ಜವಾಬ್ದಾರಿ, ಸಮಾನತೆಯ ಮನೋಭಾವ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬೆಳೆಸುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದು ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಈ ಸಂದರ್ಭದಲ್ಲಿ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರು ಹಾಗೂ ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ ರವರು ಕಾರ್ಯಕ್ರಮದಲ್ಲಿ ಭಾರತ ಸಂವಿಧಾನ ಪೀಠಿಕೆಯನ್ನು ಭೋದಿಸಿದರು

ಕಾರ್ಯಕ್ರಮದಲ್ಲಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಬಿ.ಪಿ. ಪ್ರಕಾಶ್, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಉಪಾಧ್ಯಕ್ಷರಾದ ವಿಜಯಲಕ್ಷ್ಮಿ ರಘುನಂದನ್, ಜಿಲ್ಲಾಧಿಕಾರಿಗಳಾದ ಡಾ. ಕುಮಾರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಾದ ಕೆ. ಆರ್ ನಂದಿನಿ, ಅಪರ ಜಿಲ್ಲಾಧಿಕಾರಿಗಳಾದ ಬಿ.ಸಿ ಶಿವಾನಂದಮೂರ್ತಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ನಾಗೇಶ್, ಡಿ.ವೈ.ಎಸ್.ಪಿ ಹೆಚ್. ಲಕ್ಷ್ಮೀನಾರಾಯಣ ಪ್ರಸಾದ್, ಪದವಿ ಪೂರ್ವ ಕಾಲೇಜಿನ ಉಪ ನಿರ್ದೇಶಕರಾದ ಪ್ರಸನ್ನ ಕುಮಾರ್, ವಕೀಲರ ಸಂಘದ ಅಧ್ಯಕ್ಷರಾದ ಸತ್ಯನಂದ ಟಿ.ಎಸ್ ರವರು ಉಪಸ್ಥಿತರಿದ್ದರು.

# ಪಿರಿಯಾಪಟ್ಟಣದಲ್ಲಿ ನೂತನ ಉದ್ಯೋಗ ಸಲಹಾ ಕೇಂದ್ರ ಉದ್ಘಾಟನೆ

**ಪಿರಿಯಾಪಟ್ಟಣ:** ತಾಲೂಕಿನಲ್ಲಿ ಇದೇ ಮೊದಲ ಬಾರಿಗೆ ಉದ್ಯೋಗಾಕಾಂಕ್ಷಿ ಯುವಕ-ಯುವತಿಯರಿಗೆ ಸೂಕ್ತ ಉದ್ಯೋಗಾವಕಾಶಗಳನ್ನು ಒದಗಿಸುವ ಉದ್ದೇಶದಿಂದ ?ಶಕ್ತಿ ಕನ್ಸಲ್ಟೆನ್ಸಿ? ಆರಂಭಗೊಂಡಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ ಎಂದು ನವೋದಯ ಸಂಸ್ಥೆ ಅಧ್ಯಕ್ಷ ನವೋದಯ ನಾರಾಯಣ ಹೇಳಿದರು.

ಪಟ್ಟಣದ ಡಿ. ದೇವರಾಜ ಅರಸು ಭವನದ ಎದುರು, ಮೊದಲ ಮಹಡಿಯ ಕಟ್ಟಡದಲ್ಲಿ ನೂತನವಾಗಿ ಆರಂಭಗೊಂಡಿರುವ ಶಕ್ತಿ ಕನ್ಸಲ್ಟೆನ್ಸಿ ಕಚೇರಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಸ್ಪರ್ಧಾತ್ಮಕ ಉದ್ಯೋಗ ಕ್ಷೇತ್ರದಲ್ಲಿ ವಿದ್ಯಾರ್ಹತೆ ಹಾಗೂ ಕೌಶಲ್ಯ ಹೊಂದಿದ್ದರೂ ಸೂಕ್ತ ಮಾರ್ಗದರ್ಶನ ಮತ್ತು ಉದ್ಯೋಗಾವಕಾಶಗಳ ಕೊರತೆಯಿಂದ ಅನೇಕ ಯುವಕರು ಪರದಾಡುವಂತಾಗಿದೆ. ಇಂತಹ ಸಂದರ್ಭದಲ್ಲಿ ಉದ್ಯೋಗದಾತರು ಹಾಗೂ ಉದ್ಯೋಗಾಕಾಂಕ್ಷಿಗಳ ನಡುವೆ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುವ ಕನ್ಸಲ್ಟೆನ್ಸಿ ಸಂಸ್ಥೆಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದರು.

ತಾಲೂಕಿನ ಯುವಕ,ಯುವತಿಯರಿಗೆ ಸ್ಥಳೀಯವಾಗಿಯೇ ವಿವಿಧ ಕಂಪನಿಗಳಲ್ಲಿನ ಉದ್ಯೋಗಾವಕಾಶಗಳ ಕುರಿತು ಮಾಹಿತಿ ಹಾಗೂ ಮಾರ್ಗದರ್ಶನ ನೀಡುವುದರ ಜತೆಗೆ, ಜಾಬ್, ಲೇಬರ್, ಮನೆಯ ಒಳಾಂಗಣ ವಿನ್ಯಾಸ, ಹೋಟೆಲ್, ಆಸ್ಪತ್ರೆ, ಹೌಸ್‌ಕೀಪಿಂಗ್ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶ ಕಲ್ಪಿಸುವ ಸೇವೆ ಒಂದೇ ಸೂರಿನಡಿ ಲಭ್ಯವಾಗುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ಶಕ್ತಿ ಕನ್ಸಲ್ಟೆನ್ಸಿಯು ನಿರುದ್ಯೋಗ ನಿವಾರಣೆಯ ನಿಟ್ಟಿನಲ್ಲಿ ಪರಿಣಾಮಕಾರಿ ಹೆಜ್ಜೆ ಇಡಲಿ ಎಂದು ಆಶಿಸಿದರು.

ಯುವಜನರು ಕೇವಲ ಸರ್ಕಾರಿ ಉದ್ಯೋಗವನ್ನೇ ಅವಲಂಬಿಸದೆ, ತಮ್ಮ ವಿದ್ಯಾರ್ಹತೆ, ಕೌಶಲ್ಯ ಹಾಗೂ ಆಸಕ್ತಿಗೆ ಅನುಗುಣವಾಗಿ ಖಾಸಗಿ ವಲಯದಲ್ಲಿರುವ ವಿವಿಧ ಉದ್ಯೋಗಾವಕಾಶಗಳನ್ನೂ ಸದುಪಯೋಗಪಡಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಇಂತಹ ಸಂಸ್ಥೆಗಳ ಸೇವೆಯನ್ನು ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ರವಿಚಂದ್ರ, ಖಜಾಂಚಿ ಗಣೇಶ್ ಬಿ ಆರ್ , ಸಂಸ್ಥೆಯ ಮುಖ್ಯಸ್ಥ ವಸಂತಕುಮಾರ್,ಪತ್ರಕರ್ತರಾದ ವಿರೇಶ್,ಸುಬ್ರಮಣ್ಯ,ಎಚ್.ಕೆ. ಮಹೇಶ್, ಪಿ.ಡಿ. ಪ್ರಸನ್ನ, ಇಮ್ತಿಯಾಜ್, ಕೆ.ಆರ್. ಮಹೇಶ್, ಸತೀಶ್ ಆರಾಧ್ಯ, ವೆಂಕಟೇಶ್, ಶ್ರೀ ಮಸಣಿಕಮ್ಮ ಸೈನಿಕ ಅಕಾಡೆಮಿ ಅಧ್ಯಕ್ಷ ಆರ್ ಸ್ವಾಮಿ,ರಾಜು ಕಂದೇಗಾಲ,ಡೇರಿ ಕಾರ್ಯದರ್ಶಿ ಮೀನಾಕ್ಷಿ ಮಹೇಶ್, ತಾಲೂಕು ಕಸಾಪ ಅಧ್ಯಕ್ಷ ನವೀನ್ ಕುಮಾರ್, ತಾಲೂಕು ಸಾವಿತ್ರಿಬಾಯಿ ಫುಲೆ ಸಂಘದ ಅಧ್ಯಕ್ಷೆ ಗಾಯತ್ರಿ ತಿಮ್ಮೇಗೌಡ. ಸೇರಿದಂತೆ ಗಣ್ಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



# ಗುಪ್ತ ಭಕ್ತಿ ಸುಧೆಯ ಹರಿಸಿದ ಮಾದಾರ ಚೆನ್ನಯ್ಯ



| ವೀಣಾ ಹೇಮಂತ್‌ಗೌಡ ಪಾಟೀಲ್

ಕಂಚಿ ರಾಜ್ಯವನ್ನು ಕರಿಕಾಲ ಚೋಳ ಎಂಬ ಮಹಾರಾಜನು ಆಳುತ್ತಿದ್ದ. ಆತನು ಓರ್ವ ಮಹಾಶಿವ ಭಕ್ತ. ಪ್ರತಿದಿನವೂ ಅರಮನೆಯಲ್ಲಿ ಪರಶಿವನನ್ನು ಪೂಜಿಸಿ ಪಂಚಭಕ್ಷ್ಯ ಪರಮಾನ್ನಗಳನ್ನು ನೈವೇದ್ಯವಾಗಿ ಇಟ್ಟು ಕಂಬದ ಮರೆಗೆ ನಿಲ್ಲುತ್ತಿದ್ದನು. ಎಡೆಯನ್ನು ಸ್ವೀಕರಿಸಲು ಆ ಪರಶಿವನೆ ಬಂದು ಕರಿಕಾಲ ಚೋಳನೊಂದಿಗೆ ಮಾತನಾಡುತ್ತಾ ಪ್ರಸಾದವನ್ನು ಸ್ವೀಕರಿಸಿ ಹೊರಟು ಹೋಗುತ್ತಿದ್ದನು. ಕರಿಕಾಲ ಚೋಳನಿಗೆ ಇದು ಅತ್ಯಂತ ಧನ್ಯತೆಯ ವಿಷಯವಾಗಿತ್ತು.

ಕರಿಕಾಲ ಚೋಳನು ಮಹಾಸೇನಾನಿಯಾಗಿದ್ದ. ಕುದುರೆಗಳು ಆನೆಗಳು ಕಾಲಾಳುಗಳು ಎಂದು ತುಸು ದೊಡ್ಡದೇ ಸೈನ್ಯವನ್ನು ಆತ ಹೊಂದಿದ್ದ.

ಆತನ ಕುದುರೆ ಲಾಯದಲ್ಲಿ ಕುದುರೆಗಳ ಸ್ನಾನ ಮಾಲೀಶು ಮಾಡುತ್ತಾ ಅವುಗಳಿಗೆ ಹುರುಳಿಯನ್ನು ಬೇಯಿಸಿ ಹಾಕುತ್ತಾ ಅವುಗಳ ಚಾಕರಿ ಮಾಡಿ, ಕುದುರೆಗಳಿಗೆ ನದಿ ತೀರದಲ್ಲಿ ಬೆಳೆದ ಹಸಿ ಹುಲ್ಲನ್ನು ತಂದು ಹಾಕುವ ಸೇವಕರ ಪೈಕಿ ಮಾದರ ಚೆನ್ನಯ್ಯ ಎಂಬ ಓರ್ವ ಅಸ್ಪೃಶ್ಯನೂ ಇದ್ದ. ಸಾಮಾಜಿಕ ನಿಯಮಗಳ ಪ್ರಕಾರ ಅಸ್ಪೃಶ್ಯನಾದ ಆತನು ದೇವರ ಪೂಜೆ ಮಾಡುವುದಿರಲಿ ದೇವರ ಹೆಸರನ್ನು ಎತ್ತುವಂತಿರಲಿಲ್ಲ. ಆದರೆ ಗುಪ್ತ ಭಕ್ತನಾದ ಆತ ಪ್ರತಿದಿನವೂ ಮುಂಜಾನೆ ಅರಮನೆಯ ಕುದುರೆ ಲಾಯಕ್ಕೆ ಹೋಗಿ ಅಲ್ಲಿರುವ ಕುದುರೆಗಳ ಎಲ್ಲ ಚಾಕರಿಗಳನ್ನು ಮುಗಿಸಿ ಅವುಗಳನ್ನು ಕಾಡಿಗೆ ಕರೆದೊಯ್ದು ಮೇಯಿಸಿ ಮತ್ತೆ ಅರಮನೆಯ ಲಯಕ್ಕೆ ತಂದು ಕಟ್ಟಿ ಹಾಕಿ ಅವುಗಳಿಗೆ ಹುಲ್ಲು ನೀರನ್ನು ನೀಡಿ ಆರೈಕೆ ಮಾಡಿ ಸಂಜೆಯ ಹೊತ್ತಿಗೆ ಮನೆಗೆ ಮರಳುತ್ತಿದ್ದ. ಈ ಎಲ್ಲಾ ಕಾಯಕದ ಜೊತೆಗೆ ಆತ ತನ್ನ ಇಷ್ಟಲಿಂಗವಾದ ಶಿವನನ್ನು ಮನಸ್ಸಿನಲ್ಲಿಯೇ ಸದಾ ಜಪಿಸುತ್ತಿದ್ದ. ಪ್ರಾಣ ಲಿಂಗ ಸ್ಮರಣೆ ಮಾಡುತ್ತಾ ತನ್ನ ಕಾಯಕದಲ್ಲಿ ತಲ್ಲೀನನಾಗಿರುತ್ತಿದ್ದ. ಸಮಯ ಸಿಕ್ಕರೆ ಪಕ್ಕದ ಕಾವೇರಿ ನದಿಯಲ್ಲಿ ಸ್ನಾನ ಮಾಡಿ ನದಿ ದಂಡೆಯಲ್ಲಿ ಕುಳಿತು ಇಷ್ಟಲಿಂಗವನ್ನು ಪೂಜಿಸಿ ಅದಕ್ಕೆ



ಕಾಡಿನಲ್ಲಿಯೇ ಸಿಗುವ ಹೂಗಳನ್ನು ಏರಿಸಿ, ಕಾಡಿನ ಹಣ್ಣುಗಳನ್ನು ನೈವೇದ್ಯ ಮಾಡುತ್ತಿದ್ದ.

ಸಾಯಂಕಾಲ ತನ್ನ ಕಾಯಕದ ನಂತರ ಮನೆಗೆ ತೆರಳಿ ಸ್ನಾನಾದಿಗಳನ್ನು ಮುಗಿಸಿ ಮನೆಯ ಒಂದು ಮೂಲೆಯಲ್ಲಿ ಸ್ಥಾಪಿಸಿದ ಪೂಜಾ ಮಂದಿರದಲ್ಲಿ ಶಿವಲಿಂಗವನ್ನು ಪೂಜಿಸಿ ಭಕ್ತಿಯಿಂದ ನಮಿಸುತ್ತಿದ್ದ. ದೇವರಿಗೆ ಪೂಜೆ ಪುನಸ್ಕಾರ ಮಾಡಿದ ನಂತರ ಪತ್ನಿ ಮಾಡಿದ ಬಿಸಿಯಾದ ಅಂಬಲಿಯನ್ನು ನೈವೇದ್ಯ ಮಾಡಿ ನಂತರ ಪತ್ನಿ ಯೊಂದಿಗೆ ತಾನು ಕೂಡ ಅಂಬಲಿಯನ್ನು ಸೇವಿಸಿ ಮಲಗುತ್ತಿದ್ದ. ಆತನ ಈ ಗುಪ್ತ ಪೂಜೆ ಸಮಾಜದ ಜನರ ಕಣ್ಣಿನಿಂದ ಮರೆಯಾಗಿತ್ತು.ಆತನ ಪತ್ನಿಯೂ ಈ ವಿಷಯದ ಕುರಿತು ಯಾರಲ್ಲೂ ಬಾಯಿ ಬಿಟ್ಟಿರಲಿಲ್ಲ..ಆಗಿನ ಸಮಾಜದ ಪರಿಸ್ಥಿತಿಯೇ ಹಾಗಿತ್ತು. ಇದು ಹೀಗೆಯೇ 60 ವರ್ಷಗಳ ಕಾಲ ಸಾಗಿತ್ತು.

ಒಂದು ದಿನ ಶಿವ ಪಾರ್ವತಿಯರು ಕೈಲಾಸದಲ್ಲಿ ಸಂಭಾಷಣ ನಿರತರಾಗಿದ್ದಾಗ ಪಾರ್ವತಿಯು ಶಿವನನ್ನು ಕುರಿತು "ನಿನ್ನ ಭಕ್ತರಲ್ಲಿ ಯಾರು ನಿನಗೆ ಅಚ್ಚುಮೆಚ್ಚು" ಎಂದು ಕೇಳಿದಳು. ಅದಕ್ಕೆ ಶಿವನು ಈ ಅಜ್ಞಾತ ಭಕ್ತನ ಕುರಿತು ಹೇಳಿದನು. ಸುಮಾರು 60 ವರ್ಷಗಳಿಂದಲೂ ಗುಪ್ತ ಭಕ್ತನಾಗಿ ಪೂಜಾ ಕೈಂಕರ್ಯಗಳನ್ನು ಮಾಡುತ್ತಿರುವ ಮಾದರ ಚೆನ್ನಯ್ಯನ ವಿಷಯವನ್ನು ಕೇಳಿ ಪಾರ್ವತಿ ದೇವಿ ಸೋಜಿಗಪಟ್ಟಳು. ಆತನ ವಿಷಯವನ್ನು ಇಡೀ ಜಗತ್ತಿಗೆ ಪ್ರಚುರ ಪಡಿಸಬಾರದೇಕೆ? ಎಂದು ಶಿವನನ್ನು ಒತ್ತಾಯಿಸಿದಳು. ಅದಕ್ಕೆ ಶಿವ 'ಕಾಲಾಯ ತಸ್ಮೈ ನಮಃ' ಎಂದು ಉತ್ತರಿಸಿದ.

ಅದೊಂದು ದಿನ ತನ್ನ ಕಾಯಕದಿಂದ ಹಿಂದಿರುಗಿದ ಮಾದರ ಚೆನ್ನಯ್ಯನು ಪತ್ನಿ ಸಾವಿತ್ರಿಗೆ ತುಂಬಾ ಹಸಿವಾಗಿದೆ ಏನನ್ನಾದರೂ ಬಡಿಸು ಎಂದು ಕೇಳಿದ. ಕೈ ಕಾಲು ಮುಖ ತೊಳೆದು ಬಂದ ಪತಿಗೆ ಆತನ ಪತ್ನಿ ಗಂಗಾಳದಲ್ಲಿ ಅಂಬಲಿಯನ್ನು ಸುರಿದು ತಂದು ಊಟಕ್ಕೆ ನೀಡಿದಳು. ಒಂದು ತುತ್ತನ್ನು ಬಾಯಲ್ಲಿ ಸುರಿದುಕೊಂಡ ಚೆನ್ನಯ್ಯ ಸಾವಿತ್ರಿ... ಇಂದು ನೀ ಮಾಡಿರುವ ಅಂಬಲಿ ಅಮೃತಕ್ಕೆ ಸಮಾನವಾಗಿದೆ. ಇದು ಶಿವನಿಗೆ ಅರ್ಪಿತವಾಗಬೇಕು ಎಂದು ಭಕ್ತಿಯಿಂದ ಪರಶಿವನನ್ನು ಕರೆದನು. ಭಕ್ತ ಪ್ರಿಯ ಪರಶಿವನು ಮಾದರ ಚೆನ್ನಯ್ಯನ ಮನೆಯಲ್ಲಿ ಪ್ರತ್ಯಕ್ಷನಾಗಿ ಆತನು ನೀಡಿದ ಅಂಬಲಿಯನ್ನು ಬಾಯಿ ಚಪ್ಪರಿಸುತ್ತಾ ಹೊಟ್ಟೆ ತುಂಬಾ ಉಂಡನು.

ಮರುದಿನ ಮುಂಜಾನೆ ಮಹಾರಾಜ ಕರಿಕಾಲ ಚೋಳನು ಎಂದಿನಂತೆ ಪೂಜಾ ವಿಧಿಗಳನ್ನು ನೆರವೇರಿಸಿ ನೈವೇದ್ಯವನ್ನು ಇರಿಸಿ ಕಂಬದ ಮರೆಗೆ ಹೋಗಿ ನಿಂತನು. ಅರ್ಧ ಗಂಟೆಯಾದರೂ ಶಿವ ಬರಲಿಲ್ಲ. ಗಂಟೆಗಳೇ ಕಳೆದು ಹೋದರೂ ಶಿವ ಬರಲಿಲ್ಲ. ಕಾಯುತ್ತಿದ್ದ ಕರಿಕಾಲ ಚೋಳನು ದುಃಖಿತನಾಗಿ ನನ್ನ ಪೂಜೆ ನಿನಗೆ ಅರ್ಪಿತವಾಗದಿದ್ದರೆ ನಾನು ಬದುಕಿದ್ದು ಏನು ಸಾರ್ಥಕ ಶಿವ!! ಎಂದು ತನ್ನ ಕತ್ತನ್ನು ಶಿವನಿಗೆ ಅರ್ಪಿಸಲು

ಒರೆಯಿಂದ ಖಡ್ಗವನ್ನು ತೆರೆದ. ಅಷ್ಟೇ ಪ್ರತ್ಯಕ್ಷನಾದ ಶಿವ "ತಪ್ಪು ತಿಳಿಯಬೇಡ ಕರಿಕಾಲ ಚೋಳ... ನನ್ನ ಹೊಟ್ಟೆ ಚನ್ನಯ್ಯನ ಅಂಬಲಿಯಿಂದ ತುಂಬಿ ಹೋಗಿದೆ" ಮತ್ತೇನನ್ನು ತಿನ್ನುವ ಪರಿಸ್ಥಿತಿಯಲ್ಲಿ ನಾನಿಲ್ಲಾ ಎಂದು ಆತನಿಗೆ ಸಮಾಧಾನ ಹೇಳಿದನು. ನಾನು ಮಾಡಿಸಿದ ಪಂಚ ಭಕ್ಷ ಪರಮಾನ್ನಗಳಿಗಿಂತ ಚೆನ್ನಯ್ಯನ ಮನೆಯ ಅಂಬಲಿ ಶಿವನಿಗೆ ಹೊಟ್ಟೆ ತುಂಬಿಸಿದೆ ಎಂದರೆ ಚೆನ್ನಯ್ಯ ಅದೆಂಥ ಶಿವಭಕ್ತನಿರಬೇಕು ಎಂದು ಆತನನ್ನು ನೋಡಲು ಹಂಬಲಿಸಿದ ಕರಿಕಾಲ ಚೋಳ.

**ಉಪೇಕ್ಷಿತ ವಚನಕಾರರು**

ಮಂತ್ರಿಗಳಲ್ಲಿ ಮಾದಾರ ಚೆನ್ನಯ್ಯನ ಮನೆಯ ದಾರಿ ಕೇಳಿ ತಿಳಿದ ಮಹಾರಾಜ ಚೆನ್ನಯ್ಯನ ಮನೆಗೆ ಹೊರಟನು. ರಾಜನ ಪರಿವಾರ ಮತ್ತು ಮಂತ್ರಿ ವರ್ಗ ರಾಜನನ್ನು ಹಿಂಬಾಲಿಸಿತು. ಮಾದರ ಚೆನ್ನಯ್ಯನ ಪುಟ್ಟ ಗುಡಿಸಲಿನಲ್ಲಿ ಕಾಲಿರಿಸಿದ ಕರಿಕಾಲ ಚೋಳ ಚೆನ್ನಯ್ಯನನ್ನು ಕಂಡೊಡನೆ ಕಾಲಿಗೆ ಸಾಷ್ಟಾಂಗ ನಮಸ್ಕಾರ ಹಾಕಿದನು. ಭಯಭೀತನಾದ ಚೆನ್ನಯ್ಯ "ಪ್ರಭುಗಳೇ ಇದೇನು ಮಾಡುತ್ತಿರುವಿರಿ" ಎಂದು ಕೇಳಿದನು ಅದಕ್ಕೆ ಉತ್ತರವಾಗಿ ಕರಿಕಾಲ ಚೋಳನು "ನಿನ್ನಂತ ಶ್ರೇಷ್ಠ ಶಿವ ಭಕ್ತರ ಪಾದಕ್ಕೆ ನನ್ನ ತಲೆ ಮುಟ್ಟಿಸುತ್ತಿರುವೆ" ಎಂದು ಉತ್ತರಿಸಿದನು.

ಮಹಾರಾಜ ತಾವು ಸೂರ್ಯ ಕುಲ ತಿಲಕರು ಇದು ನಿಮಗೆ ಸೂಕ್ತವೇ ಎಂದು ಮಾದರ ಚೆನ್ನಯ್ಯನು ಕೇಳಿದಾಗ ಅದಕ್ಕುತ್ತರವಾಗಿ ಕರಿಕಾಲ ಚೋಳನು

ಎಲೆ ದೇವಾ...
ದೇವನೊಲ್ದನ ಕುಲ ಸತ್ಕುಲಂ
ಘನ ಮಹಿಮನೊಲ್ದನ ಜಾತಿಯೇ ನಿರ್ಮಲಂ



ಶರ್ವನೊಡನುಂಡ ನಿಮ್ಮ ಜಾತಿಗಾಂ ಸರಿಯೇ
ಸರ್ವಜ್ಞ.. ನಿಮ್ಮ ಕೆರವಿಂಗೆನ್ನ ಶಿರವು ಸರಿಯೇ

ಎಂದು ಹೇಳುತ್ತಾ ಮತ್ತೊಮ್ಮೆ ಮಾದಾರ ಚೆನ್ನಯ್ಯನ ಕಾಲಿಗೆ ಎರಗಿದನು.

ಮುಂದೆ ಮಾದರ ಚೆನ್ನಯ್ಯನು ವಾಸವಾಗಿದ್ದ ಸಮುದ್ರ ತೀರದ ಆ ಪಟ್ಟಣವನ್ನು ಮಾದಾರ ಚೆನ್ನಯ್ಯನ ಪಟ್ಟಣ ಎಂದು ಕರೆಯುತ್ತಾ ಮುಂದೆ ಅದು ಅಪಭ್ರಂಶವಾಗಿ ಮದರಾಸು ಎಂದು ಕರೆಯಲ್ಪಟ್ಟಿತು. ನಂತರ ಮತ್ತೆ 1996ರಲ್ಲಿ ಚೆನ್ನೈ ಎಂದು ಆತನ ಹೆಸರಿನಲ್ಲಿ ಕರೆಯಲ್ಪಟ್ಟಿತು.

ಮುಂದೆ ಕಲ್ಯಾಣಕ್ಕೆ ಬಂದು ನೆಲೆಸಿದ ಮಾದಾರ ಚೆನ್ನಯ್ಯನನ್ನು ಹಾರ್ದಿಕವಾಗಿ ಬರಮಾಡಿಕೊಂಡ ಬಸವಣ್ಣನವರು ಶರಣ ಕುಲ ತಿಲಕ ಎಂದು ಚೆನ್ನಯ್ಯನನ್ನು ಕರೆದರು. ಮಾದರ ಚೆನ್ನಯ್ಯ ಎನ್ನ ತಂದೆ ಎಂದು ತಮ್ಮ ವಚನಗಳಲ್ಲಿ ಸಾರಿದರು.

ಇಂತಹ ಮಹಾಭಕ್ತರು, ಉಪಾಸಕರು, ಸಂತರು ಹುಟ್ಟಿದ ಭರತ ಭೂಮಿ ನಮ್ಮದು. ಧರ್ಮ, ಜ್ಞಾನ ಮತ್ತು ಉನ್ನತ ಸಂಸ್ಕೃತಿಯ ನೆಲೆವೀಡು ನಮ್ಮದು. ಇಂಥ ಪಾವನ ಭೂಮಿಯಲ್ಲಿ ಹುಟ್ಟಿರುವ ನಾವೇ ಧನ್ಯರು.

## ಆಸ್ಟ್ರೇಲಿಯಾದ ಮೆಲ್ಬೋರ್ನ್ ಚಲನಚಿತ್ರೋತ್ಸವಕ್ಕೆ

# ಆಯ್ಕೆಯಾದ ಪುಟ್ಟಣ್ಣನ ಕತ್ತೆ!

ಅತ್ಯಂತ ಸೂಕ್ಷ್ಮ ಕಥಾನಕಗಳ ಮೂಲಕವೇ ನಿರ್ದೇಶಕರಾಗಿ ನೆಲೆ ಕಂಡುಕೊಂಡಿರುವ ಸಿದ್ದು ಪೂರ್ಣಚಂದ್ರ ಇದೀಗ ಪುಟ್ಟಣ್ಣನ ಕತ್ತೆ ಎಂಬ ಚಿತ್ರದ ಮೂಲಕ ಮತ್ತೆ ಪ್ರೇಕ್ಷಕರ ಗಮನ ಸೆಳೆದಿದ್ದಾರೆ. ಈ ಚಿತ್ರ ಈಗ ಪ್ರತಿಷ್ಠಿತ ಮೆಲ್ಬೋರ್ನ್ ಫಿಲಂ ಫೆಸ್ಟಿವಲ್‌ಗೆ ಆಯ್ಕೆಯಾಗಿದೆ. ಆಸ್ಟ್ರೇಲಿಯಾದ ಮೆಲ್ಬೋರ್ನ್‌ನಲ್ಲಿ ನಡೆಯಲಿರುವ ಈ ಸಿನಿಮೋತ್ಸವದಲ್ಲಿ ಪುಟ್ಟಣ್ಣನ ಕತ್ತೆ ಚಿತ್ರ ಪ್ರದರ್ಶನಗೊಳ್ಳಲಿದೆ.

ಮೆಲ್ಬೋರ್ನ್ ಫಿಲಂ ಫೆಸ್ಟಿವಲ್‌ಗೆ ಜಾಗತಿಕ ಮಟ್ಟದ ಘನತೆ ಗೌರವವಿದೆ. ಈ ಸಿನಿಮೋತ್ಸವಕ್ಕೆ ಸಿನಿಮಾ ಆಯ್ಕೆಯಾಗುವುದು ಮಹತ್ವದ್ದಾಗಿದೆ. ಜಾಗತಿಕ ಮಟ್ಟದ ತುರುಸಿನ ಸ್ಪರ್ಧೆ ದಾಟಿ ಆಯ್ಕೆಯಾಗುವಲ್ಲಿ ಗುಣಮಟ್ಟದ ಕಂಟೆಂಟು ಹೊಂದಿರಬೇಕು. ಈ ನಿಟ್ಟಿನಲ್ಲಿ ಕನ್ನಡ ಸಿನಿಮಾ ಪುಟ್ಟಣ್ಣನ ಕತ್ತೆ ಈ ಸಿನಿಮೋತ್ಸವಕ್ಕೆ ಆಯ್ಕೆಯಾಗಿರುವುದು ಕನ್ನಡ ಚಿತ್ರರಂಗಕ್ಕೆ ಹೆಮ್ಮೆಯ ಸಂಗತಿಯಾಗಿದೆ.

ಕತ್ತೆಯೊಂದು ಕಥೆಯಲ್ಲಿ ಕೇಂದ್ರವಾಗಿ




ಚಿತ್ರ ರೂಪುಗೊಂಡಿದೆ. ಬೆಂಗಳೂರಿನಲ್ಲಿ ಕತ್ತೆ ಹಾಲು ಮಾರುವವರು ಬರುತ್ತಿರುತ್ತಾರೆ. ಹೀಗೆ ಹಳ್ಳಿಯೊಂದರಿಂದ ಕತ್ತೆಯೊಂದಿಗೆ ಪಟ್ಟಣ ಸೇರಿದವನ ಸುತ್ತ ಘಟಿಸುವ ಆಸಕ್ತಿದಾಯಕ ಸನ್ನಿವೇಶಗಳು ಈ ಸಿನಿಮಾದ ಆಂತರ್ಯದಲ್ಲಿದೆ. ಭೀಮೇಶ್ ಗೌಡ ಈ ಕಥನದ ಆತ್ಮದಂಥಾ ಪುಟ್ಟಣ್ಣನ ಪಾತ್ರಕ್ಕೆ ಜೀವ ತುಂಬಿದ್ದಾರೆ. ಅನೀಶ್ ಆರ್ಯನ್ ಈ ಸಿನಿಮಾದ ನಾಯಕರಾಗಿ ಸಂಕೀರ್ಣ ಪಾತ್ರದಲ್ಲಿ ನಟಿಸಿದ್ದಾರೆ.

ಪೂರ್ಣಚಂದ್ರ ಫಿಲಂಸ್ ಬ್ಯಾನರ್ ಅಡಿಯಲ್ಲಿ ತನ್ಮಯ್ ಎಸ್ ಗೌಡ ನಿರ್ಮಾಣ ಮಾಡಿರುವರು. ಸಿದ್ದು ಪೂರ್ಣಚಂದ್ರ ಕಥೆ ಚಿತ್ರಕಥೆ, ಸಂಭಾಷಣೆಯೊಂದಿಗೆ ನಿರ್ದೇಶನ ಮಾಡಿರುವರು. ಅನೀಶ್ ಆರ್ಯನ್, ಭೀಮೇಶ್ ಗೌಡ, ಎನ್.ಟಿ ರಾಮಸ್ವಾಮಿ, ಕವಿತಾ ಕಂಬಾರ್, ವಿಭಾ, ಕಲಾರತಿ ಮಹದೇವ್, ರೋಹಿಣಿ, ರಶ್ಮಿ ಮೈಸೂರ್, ಲಕ್ಕಿ ಶಂಕರ್, ವಾಸು, ರಾಕಿ, ಮಂಡ್ಯ ಸಿದ್ದು ಮುಂತಾದವರ ತಾರಾಗಣವಿದೆ. ರಾಜು ಹೆಮ್ಮಿಗೆಪುರ ಛಾಯಾಗ್ರಹಣ, ಅನಂತ್ ಆರ್ಯನ್ ಸಂಗೀತ ನಿರ್ದೇಶನ ಮತ್ತು ದೀಪು ಸಿ.ಎಸ್ ಅವರ ಸಂಕಲನ ಈ ಚಿತ್ರಕ್ಕಿದೆ.



-ಗೊರೂರು ಅನಂತರಾಜು,
ಹಾಸನ.
9449462879

# ಅಲುಗದ ಮನವೇ ಅಮೃತ



ಬದುಕು ರಾಜಪಥವಲ್ಲ;ಅದು ಕಲ್ಲುಮುಳ್ಳಿನ ಕಿರುದಾರಿ. ಇಲ್ಲಿ ಮನವೆಂಬ ಕೋಟೆ ಅಭೇದ್ಯವಾಗಿದ್ದರೆ ಸಂಕಟದ ಬಾಣಗಳು ಮೊನಚು ಕಳೆದುಕೊಳ್ಳುತ್ತವೆ. ಪ್ರಾತಃಕಾಲ ನಾನು ವಾಲುವುದಿಲ್ಲ ಎಂಬ ವಜ್ರಸಂಕಲ್ಪವನ್ನು ಎದೆಯಲ್ಲಿ ನೆಟ್ಟರೆ, ಸ್ಮೃತಿಯ ದೀಪ ನವಪ್ರಭೆ ಚೆಲ್ಲುತ್ತದೆ. ನೋವನ್ನು ತಟಸ್ಥವಾಗಿ ವೀಕ್ಷಿಸುವ ವಿವೇಕ ಸಿದ್ಧಿಸಿದರೆ, ಕಲಕಿದ ಸರೋವರದಲ್ಲೂ ನಕ್ಷತ್ರದ ಬಿಂಬ ಸ್ಪಷ್ಟವಾಗುತ್ತದೆ. ದೃಢಚಿತ್ತವೇ ದೇಹಕ್ಕೆ ದಿವ್ಯೌಷಧ. ಶೀತಲ ಪ್ರಾಣಾಯಾಮದ ನಿಧಾನ ಉಸಿರಾಟವು ಅಂತರಂಗದ ತಾಪವನ್ನು ತಣಿಸಿ ನಾಡಿಮಿಡಿತವನ್ನು ಲಯಬದ್ಧಗೊಳಿಸುತ್ತದೆ. ಚಿತ್ತ ನಿಶ್ಚಲವಾದಾಗ ಜೀವಕೋಶಗಳ ಆಯುರ್ರೇಖೆ ವಿಸ್ತರಿಸಿ, ತಾರುಣ್ಯದ ಕಾಂತಿ ಚಿರವಾಗುತ್ತದೆ. ಹೀಗೆ ಒಳಗಿನ ಸ್ಥೈರ್ಯವು ನಮಗರಿವಿಲ್ಲದಂತೆ ಬದುಕಿನ ಗಡಿಯಾರಕ್ಕೆ ಹೊಸ ಚಿಲಕವನ್ನು ಜೋಡಿಸುತ್ತದೆ. ಸಮಷ್ಟಿಯ ಗಾಯಕ್ಕೆ ದೃಢಮನಸ್ಸುಗಳೇ ಲೇಪ. ಅನಾಹುತದ ಗಳಿಗೆಯಲ್ಲಿ ಅಂಜದಿರು, ನಾನಿದ್ದೇನೆ ಎಂಬ ಒಂದು ನುಡಿಯೇ ನೂರಾರು ಜೀವಗಳಿಗೆ ಆಲಂಬನ. ಏಕಾಂಗಿ ವೃದ್ಧರ ಸಂಜೆಗೆ ಆಲಿಸುವ ಕಿವಿಯಾದರೆ, ಬಾಡಿದ ಮೊಗದಲ್ಲಿ ಮತ್ತೆ ಹೂ ಅರಳುತ್ತದೆ. ಆಟದಲ್ಲಿ ಸೋಲು-ಗೆಲುವು ಕಲಿತ ಮಗು ಬದುಕಿನ ಪರೀಕ್ಷೆಗೆ ಬೆದರುವುದಿಲ್ಲ.

ಸಾಧನೆಗೆ: ಕನ್ನಡಿ ಮುಂದೆ ನನ್ನೊಳಗೆ ಹಿಮಾಲಯವಿದೆ ಎಂದು ಸ್ವಘೋಷಿಸಿ. ಊಟಕ್ಕೂ ಮುನ್ನ ಕ್ಷಣ ಕೃತಜ್ಞತೆಯ ನಿಮೀಲನ. ದಿನಾಂತ್ಯದಲ್ಲಿ ತಳಮಳವನ್ನು ಬರೆದು ವಿಸರ್ಜಿಸಿ. ತಾರೆಯಡಿ ಮಲಗಿ ಅನಂತದ ಎದುರು ಚಿಂತೆ ಎಷ್ಟು ಲಘು ಎಂದು ಮನನ ಮಾಡಿ. ಮೃತ್ಯುಛಾಯೆಯಲ್ಲೂ ಅಲುಗದ ಮನವಿದ್ದರೆ ಅಲ್ಲೇ ಅಮೃತ ಚಿಮ್ಮುತ್ತದೆ.

ಅಂಕಣ 22
ಸಾವು ಸಂಕಟಪಡುವ ಸಂಗತಿಗಳು..!



|ಡಾ.ಸುಧಾಕರ.ಜಿ.ಲಕ್ಕವಳ್ಳಿ

# ಹೂವಿನ ಪರಿಮಳ ಕಸಿದುಕೊಳ್ಳುತ್ತಿರುವ ಪ್ಲಾಸ್ಟಿಕ್ ಹೂಗಳು

ಹಬ್ಬಗಳ ಸಾಲು ಈಗ ಆರಂಭವಾಗಲಿದೆ. ಇನ್ನೇನು ಕೆಲವೇ ದಿನಗಳಲ್ಲಿ ಗಣೇಶ ಚತುರ್ಥಿ. ಅದರ ಬೆನ್ನಲ್ಲೇ ದಸರಾ, ದೀಪಾವಳಿ ಹೀಗೆ ಒಂದರ ಹಿಂದೆ ಒಂದಾಗಿ ಹಬ್ಬಗಳು ಬರಲಿವೆ. ನಮ್ಮ ಹಬ್ಬಗಳಿಗೂ ಹೂವಿಗೂ ಅವಿನಾಭಾವ ಸಂಬಂಧ. ಗಣಪತಿಗೆ ಹೂವಿನ ಅಲಂಕಾರ, ದೇವರ ಪೂಜೆಗೆ ಹೂವು, ಹಬ್ಬದ ದಿನ ಮನೆಯ ಬಾಗಿಲಿಗೆ ತೋರಣ, ಹೆಣ್ಣುಮಕ್ಕಳ ಕೂದಲಿಗೆ ಹೂವು?ಹಬ್ಬದ ಸಂಭ್ರಮದಲ್ಲಿ ಹೂವಿಗೆ ತನ್ನದೇ ಆದ ಸ್ಥಾನವಿದೆ.

ಈ ದಿನಗಳಲ್ಲಿ ಹೂವು ದೊಡ್ಡ ಪ್ರಮಾಣದಲ್ಲಿ ಖರೀದಿಯಾಗುತ್ತದೆ. ಮನೆಗಳಲ್ಲಿ ಮಾತ್ರವಲ್ಲ, ದೇವಾಲಯಗಳಲ್ಲಿ, ಸಾರ್ವಜನಿಕ ಗಣೇಶೋತ್ಸವಗಳಲ್ಲಿ, ಮಂಟಪಗಳಲ್ಲಿ, ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಹೂವಿನ ಬಳಕೆ ಹೆಚ್ಚಾಗುತ್ತದೆ. ಹಬ್ಬದ ದಿನಗಳಲ್ಲಿ ಮಾರುಕಟ್ಟೆಗೆ ಹೋದರೆ ಈ ಬೇಡಿಕೆಯ ಪರಿಣಾಮ ಸ್ಪಷ್ಟವಾಗಿ ಕಾಣುತ್ತದೆ.

ಮೈಸೂರಿನ ದೇವರಾಜ ಮಾರುಕಟ್ಟೆಯಾಗಲಿ, ಬೆಂಗಳೂರಿನ ಕೆ.ಆರ್. ಮಾರುಕಟ್ಟೆಯಾಗಲಿ, ಗಾಂಧಿ ಬಜಾರ್ ಆಗಲಿ?ಇಂತಹ ಹಳೆಯ ಮಾರುಕಟ್ಟೆಗಳಿಗೆ ಕಾಲಿಟ್ಟಾಗ ನಮಗೆ ಕೇವಲ ವ್ಯಾಪಾರ ಕಾಣಿಸುವುದಿಲ್ಲ. ಅಲ್ಲೊಂದು ನಗರದ ಬದುಕಿನ ಜೀವಂತ ಚಿತ್ರವೇ ಕಣ್ಣ ಮುಂದೆ ತೆರೆದುಕೊಳ್ಳುತ್ತದೆ.

ಬೆಳಗಿನ ಹೊತ್ತಿಗೆ ಇಂತಹ ಮಾರುಕಟ್ಟೆಗಳಿಗೆ ಹೋದರೆ ಮೊದಲು ಸ್ವಾಗತಿಸುವುದು ಹೂವಿನ ಪರಿಮಳ. ಅದರ ಜೊತೆಗೆ ವ್ಯಾಪಾರಿಗಳ ಕೂಗು, ಗ್ರಾಹಕರ ಚಟುವಟಿಕೆ, ತರಕಾರಿ ಬುಟ್ಟಿಗಳ ಸದ್ದು, ಹೂಗಳನ್ನು ದಾರದಲ್ಲಿ ಕಟ್ಟುವ ಕೈಗಳ ವೇಗ?ಇವೆಲ್ಲ ಸೇರಿ ಒಂದು ವಿಶಿಷ್ಟ ಜಗತ್ತನ್ನೇ ಸೃಷ್ಟಿಸುತ್ತವೆ. ಬೆಂಗಳೂರಿನ ಕೆ.ಆರ್. ಮಾರುಕಟ್ಟೆಯ ಹೂವಿನ ವಿಭಾಗದಲ್ಲಿ ಮುಂಜಾನೆಯೇ ವ್ಯಾಪಾರ ಚುರುಕಾಗುತ್ತದೆ. ಮಲ್ಲಿಗೆ, ಸೇವಂತಿಗೆ, ಗುಲಾಬಿ, ಕನಕಾಂಬರ ಸೇರಿದಂತೆ ವಿವಿಧ ಹೂಗಳು ಅಲ್ಲಿನ ಬೆಳಗಿನ ಬದುಕಿಗೆ ಬಣ್ಣ ತುಂಬುತ್ತವೆ.



ಮೈಸೂರಿನ ದೇವರಾಜ ಮಾರುಕಟ್ಟೆಯಲ್ಲೂ ಇದೇ ರೀತಿಯ ಮತ್ತೊಂದು ಲೋಕ ಕಾಣಿಸುತ್ತದೆ. ಹೂವು, ಹಣ್ಣು, ಮಸಾಲೆ, ಪೂಜಾ ಸಾಮಗ್ರಿ?ಎಲ್ಲವೂ ಸೇರಿ ಮೈಸೂರಿನ ಹಳೆಯ ನಗರ ಸಂಸ್ಕೃತಿಯ ಒಂದು ಭಾಗವಾಗಿ ಈ ಮಾರುಕಟ್ಟೆ ಬೆಳೆದಿದೆ. ವಿಶೇಷವಾಗಿ ಮಲ್ಲಿಗೆ ಹೂವಿನೊಂದಿಗೆ ಮೈಸೂರಿನ ಸಂಬಂಧವನ್ನು ನೆನಪಿಸುವ ಸ್ಥಳವೂ ಇದಾಗಿದೆ.

ಇಂತಹ ಮಾರುಕಟ್ಟೆಗಳಲ್ಲಿ ನೆಲದಲ್ಲಿ ಕುಳಿತು ಹೂ ಕಟ್ಟುತ್ತಾ ಮಾರುವ ಮಹಿಳೆಯರನ್ನು ನೋಡುವುದೇ ಒಂದು ಅನುಭವ. ಅವರ ಮುಂದೆ ಹರಡಿರುವ ಮಲ್ಲಿಗೆ, ಕನಕಾಂಬರ, ಸೇವಂತಿಗೆ, ಗುಲಾಬಿ ಹೂಗಳು ಬಣ್ಣಗಳ ಹಬ್ಬವನ್ನೇ ಸೃಷ್ಟಿಸುತ್ತವೆ. ಬೆಳಗ್ಗೆಯೇ ಮನೆಗೆ ಪೂಜೆಗಾಗಿ, ದೇವಾಲಯಕ್ಕೆ ಅರ್ಪಿಸಲು ಅಥವಾ ಹೆಣ್ಣು ಮಕ್ಕಳು ತಲೆಗೆ ಮುಡಿದುಕೊಳ್ಳಲು ಹೂ ಖರೀದಿಸುವ ಜನರು ಅಲ್ಲಿನ ದಿನನಿತ್ಯದ ಬದುಕಿನ ಸಹಜ ದೃಶ್ಯ.

ಆ ಹೂವುಗಳಲ್ಲಿ ಸೌಂದರ್ಯ ಮಾತ್ರವಲ್ಲ; ಶ್ರಮವೂ ಇದೆ. ಮುಂಜಾನೆ ಎದ್ದು ಹೂಗಳನ್ನು ತಂದು, ಅವುಗಳನ್ನು ಆರಿಸಿ, ದಾರದಲ್ಲಿ ಕಟ್ಟಿ, ಮಾಲೆ ಮಾಡಿ, ಗ್ರಾಹಕರಿಗಾಗಿ ಕಾಯುವ ಆ ಮಹಿಳೆಯರ ಬದುಕು ನಮ್ಮ ಕಣ್ಣಿಗೆ ಬಹುಶಃ ಸಾಮಾನ್ಯವಾಗಿ ಕಾಣಬಹುದು. ಆದರೆ ಅವರ ಕೈಯಿಂದ ಕಟ್ಟಿದ ಒಂದು ಸಣ್ಣ ಹೂಮಾಲೆಯ ಹಿಂದೆ ಹಲವು ಗಂಟೆಗಳ ಪರಿಶ್ರಮವಿರುತ್ತದೆ. ಆ ಹೂವಿನೊಂದಿಗೆ ರೈತನ ಶ್ರಮವೂ ಬರುತ್ತದೆ. ವ್ಯಾಪಾರಿಯ ಬದುಕೂ ಇರುತ್ತದೆ. ಗ್ರಾಹಕನ ಭಾವನೆಯೂ ಸೇರಿಕೊಳ್ಳುತ್ತದೆ.

ಹೀಗಾಗಿ ಹೂವು ಕೇವಲ ಅಲಂಕಾರದ ವಸ್ತುವಲ್ಲ. ಅದು ನಮ್ಮ ಬದುಕಿನ ಒಂದು ಸಣ್ಣ ಸಾಂಸ್ಕೃತಿಕ ಸಂಕೇತ.

ಆದರೆ ಇದೇ ಸಹಜ ಸೌಂದರ್ಯದ ನಡುವೆ ಮತ್ತೊಂದು ದೃಶ್ಯ ನಿಧಾನವಾಗಿ ಸಾಮಾನ್ಯವಾಗುತ್ತಿದೆ?ಪ್ಲಾಸ್ಟಿಕ್ ಹೂಗಳು.

ಅವು ನೋಡಲು ಸುಂದರವಾಗಿರಬಹುದು. ಬಣ್ಣ ಮಾಸುವುದಿಲ್ಲ. ನೀರು ಹಾಕಬೇಕಾಗಿಲ್ಲ. ಬಾಡುವುದಿಲ್ಲ. ವರ್ಷಗಳವರೆಗೆ ಹಾಗೆಯೇ ಉಳಿಯುತ್ತವೆ. ಮನೆಯ ಅಲಂಕಾರಕ್ಕೂ ಅನುಕೂಲ. ಆದ್ದರಿಂದ ಅವುಗಳನ್ನು ಖರೀದಿಸುವುದು ಸುಲಭವಾದ ಆಯ್ಕೆಯಂತೆ ಕಾಣುತ್ತದೆ.

ಆದರೆ ಇಲ್ಲಿ ಒಂದು ಸರಳ ಪ್ರಶ್ನೆ ಕೇಳಿಕೊಳ್ಳಬೇಕಿದೆ. ನಮಗೆ ಪ್ಲಾಸ್ಟಿಕ್ ಹೂಗಳು ಬೇಕೇ ?



ನಿಜವಾದ ಹೂವು ಕೆಲವೇ ದಿನಗಳಷ್ಟೇ ಬಾಳಬಹುದು. ಆದರೆ ಆ ಕೆಲವೇ ದಿನಗಳಲ್ಲಿ ಅದು ಪರಿಮಳ ನೀಡುತ್ತದೆ. ಜೇನುನೊಣ, ಚಿಟ್ಟೆಗಳಿಗೆ ಆಹಾರವಾಗುತ್ತದೆ. ಮಣ್ಣಿನೊಂದಿಗೆ, ನೀರಿನೊಂದಿಗೆ, ಋತುಗಳೊಂದಿಗೆ ಅದರ ಸಂಬಂಧವಿರುತ್ತದೆ. ಬಾಡಿದ ಮೇಲೂ ಅದು ಪ್ರಕೃತಿಯ ಚಕ್ರದ ಭಾಗವಾಗುತ್ತದೆ.

ಪ್ಲಾಸ್ಟಿಕ್ ಹೂವು ಮಾತ್ರ ಪ್ರಕೃತಿಯ ಭಾಗವಾಗುವುದಿಲ್ಲ. ಅದು ಎಷ್ಟು ವರ್ಷಗಳಾದರೂ ತನ್ನ ಕೃತಕ ರೂಪದಲ್ಲೇ ಉಳಿಯುತ್ತದೆ.

ಇದು ಕೇವಲ ಪ್ಲಾಸ್ಟಿಕ್ ಹೂಗಳ ಪರ-ವಿರೋಧದ ಪ್ರಶ್ನೆಯಲ್ಲ. ನಾವು ಯಾವ ರೀತಿಯ ಬದುಕನ್ನು ಆರಿಸಿಕೊಳ್ಳುತ್ತಿದ್ದೇವೆ ಎಂಬ ಪ್ರಶ್ನೆಯೂ ಹೌದು.

ನಮ್ಮ ಮನೆಗೆ ಹೂ ತರುವುದೆಂದರೆ ಕೇವಲ ಅಲಂಕಾರಕ್ಕಾಗಿ ವಸ್ತುವೊಂದನ್ನು ತರುವುದು ಅಲ್ಲ. ಅದು ಒಂದು ರೈತನ ಪರಿಶ್ರಮವನ್ನು, ಹೂ ಮಾರುವ ಮಹಿಳೆಯ ದುಡಿಮೆಯನ್ನು ಮತ್ತು ಸ್ಥಳೀಯ ಮಾರುಕಟ್ಟೆಯ ಬದುಕನ್ನು ಬೆಂಬಲಿಸುವುದೂ ಹೌದು.

ಪ್ಲಾಸ್ಟಿಕ್‌ನಿಂದಾಗುವ ಪರಿಸರ ಹಾನಿಯ ಬಗ್ಗೆ ನಾವು ಸಾಕಷ್ಟು ಮಾತನಾಡುತ್ತೇವೆ. ಪ್ಲಾಸ್ಟಿಕ್ ಚೀಲಗಳನ್ನು ಕಡಿಮೆ ಮಾಡಬೇಕು ಎನ್ನುತ್ತೇವೆ. ಪ್ಲಾಸ್ಟಿಕ್ ಬಾಟಲಿಗಳ ಬಳಕೆಯನ್ನು ತಪ್ಪಿಸಬೇಕು ಎನ್ನುತ್ತೇವೆ. ಪತ್ರಿಕೆಗಳಲ್ಲಿ ಲೇಖನಗಳು ಬರುತ್ತವೆ. ಸಾಮಾಜಿಕ ಜಾಲತಾಣಗಳಲ್ಲಿ ಅಭಿಯಾನಗಳು ನಡೆಯುತ್ತವೆ. ಸರ್ಕಾರಗಳೂ ನಿಯಮಗಳನ್ನು ಜಾರಿಗೆ ತರುತ್ತವೆ.

ಆದರೆ ಪ್ಲಾಸ್ಟಿಕ್ ಹೂಗಳ ಬಗ್ಗೆ ಎಷ್ಟು ಬಾರಿ ಮಾತನಾಡಿದ್ದೇವೆ? ನಾವು ಅವುಗಳನ್ನು ಸುಮ್ಮನೆ ಖರೀದಿಸುತ್ತೇವೆ. ಮನೆಗೆ ತರುತ್ತೇವೆ. ಅಲಂಕರಿಸುತ್ತೇವೆ. ಅವು ವರ್ಷಗಳ ಕಾಲ ಹಾಗೆಯೇ ಇರುತ್ತವೆ. ಒಂದು ದಿನ ಬೇಡವೆನಿಸಿದಾಗ ಎಲ್ಲಿ ಹೋಗುತ್ತವೆ ಎಂಬುದನ್ನು ಮಾತ್ರ ನಾವು ಯೋಚಿಸುವುದಿಲ್ಲ.

ಇದು ಪ್ಲಾಸ್ಟಿಕ್ ಹೂಗಳನ್ನು ಬಳಸುವ ಪ್ರತಿಯೊಬ್ಬರನ್ನೂ ತಪ್ಪು ಹಿಡಿಯುವ ಪ್ರಶ್ನೆಯಲ್ಲ. ಬದುಕಿನಲ್ಲಿ ಅನುಕೂಲತೆ ಬೇಕು. ಕೃತಕ ವಸ್ತುಗಳಿಗೂ ಅವುಗಳದೇ ಆದ ಬಳಕೆ ಇದೆ. ಆದರೆ ಪ್ರಕೃತಿಯ ವಸ್ತುವನ್ನು ಕೃತಕ ವಸ್ತುವಿನಿಂದ ಬದಲಿಸುವಾಗ ಅದರ ಪರಿಣಾಮದ ಬಗ್ಗೆ ಸ್ವಲ್ಪ ಯೋಚಿಸುವುದು ಮಾತ್ರ ಅಗತ್ಯ.

ಗಾಂಧಿ ಬಜಾರ್, ದೇವರಾಜ ಮಾರ್ಕೆಟ್, ಕೆ ರ್ ನಂತಹ ಮಾರುಕಟ್ಟೆಗಳ ಸೌಂದರ್ಯ ದೊಡ್ಡ ಕಟ್ಟಡಗಳಲ್ಲಿ ಇಲ್ಲ. ಅಲ್ಲಿನ ಜನರಲ್ಲಿ, ಅವರ ದುಡಿಮೆಯಲ್ಲಿ, ಸ್ಥಳೀಯ ವ್ಯಾಪಾರದಲ್ಲಿ ಮತ್ತು ಸಹಜ ಬದುಕಿನ ಸಣ್ಣ ಸಣ್ಣ ದೃಶ್ಯಗಳಲ್ಲಿ ಇದೆ.

ಮುಂದಿನ ಬಾರಿ ಇಂತಹ ಮಾರುಕಟ್ಟೆಗೆ ಹೋದಾಗ ಹೂಗಳ ಸಾಲಿನ ಮುಂದೆ ಒಂದು ಕ್ಷಣ ನಿಲ್ಲೋಣ. ಅದರ ಬಣ್ಣ ಮತ್ತು ಬೆಲೆ ಮಾತ್ರವಲ್ಲ, ಅದರ ಹಿಂದೆ ಇರುವ ಬದುಕನ್ನೂ ನೋಡೋಣ.

ಹೂವು ಬಾಡಬಹುದು. ಅದರ ಪರಿಮಳವೂ ಕೆಲವೇ ಹೊತ್ತು ಉಳಿಯಬಹುದು. ಆದರೆ ಪ್ರಕೃತಿಯೊಂದಿಗಿನ ಅದರ ಸಂಬಂಧ ನಿಜವಾದುದು.

ಮುಂದಿನ ಸಾರಿ ಪಾಸ್ಟಿಕ್ ಹೂವು ಖರೀದಿ ಮಾಡುವ ಮುನ್ನ , ಹೂ ಮಾರುವವರನ್ನೊಮ್ಮೆ ನೋಡೋಣ , ನಮ್ಮ ನಿರ್ಧಾರ ಬದಲಿಸಿ ಪ್ಲಾಸ್ಟಿಕ್ ಹೂ ಬಿಟ್ಟು ನಿಸರ್ಗ ಕೊಟ್ಟ ಅದ್ಭುತ ಸೃಷ್ಟಿಯಾದ ಘಮ್ ಎನ್ನುವ ಹೂವನ್ನು ಖರೀದಿಸೋಣ .



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,